ಸಂಪುಟ: 06 ಸಂಚಿಕೆ: 86 ಪುಟಗಳು: 08 ಮಂಗಳವಾರ 09 ಜೂನ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಮುಂಜಾನೆ ಮಾತು

ಕಣ್ಣಿಂದ ನೋಡಿದ್ದೆಲ್ಲಾ ಸತ್ಯ, ಕೇಳಿದ್ದೆಲ್ಲಾ ನಿಜ ಆಗಿರೋದಿಲ್ಲ, ಪರಿಸ್ಥಿತಿಗೆ ತಕ್ಕಂತೆ ಎಲ್ಲಾ ಬದಲಾಗುತ್ತಿರುತ್ತದೆ. ಇವತ್ತು ನೀನೇ ಎಲ್ಲಾ ಅನ್ನೋರು, ನಾಳೆ ನೀನು ಯಾರು ಅನ್ನೋ ಪರಿಸ್ಥಿತಿ ಬರಬಹುದು, ಯಾರನ್ನು ಅತಿಯಾಗಿ ನಂಬಬೇಡಿ,ನಂಬಿ ನೋವು ಅನುಭವಿಸಬೇಡಿ

ಜನ ತಕ್ಕ ಪಾಠ ಕಲಿಸ್ತಾರೆ: ಬಿ.ಕೆ.ಹರಿಪ್ರಸಾದ್

• ಉದಯವಾಹಿನಿ, ಬೆಂಗಳೂರು

ದೇವೇಗೌಡರ ಸಹಾಯದಿಂದ ಸಂಸತ್ತಿನಲ್ಲಿ ಬಿಜೆಪಿ ಬಿಲ್ ಪಾಸ್ ಮಾಡಿಕೊಂಡಿತು. ಆದರೆ, ಈಗ ಅವರಿಗೆ ಅಪಮಾನ ಮಾಡಿದ್ದಾರೆ ಎಂದು ಬಿಜೆಪಿ ವಿರುದ್ಧ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ವಾಗ್ದಾಳಿ ನಡೆಸಿದ್ದಾರೆ.

ವಿಧಾನಸೌಧದಲ್ಲಿ ಮಾತನಾಡಿದ ಅವರು, ದೇವೇಗೌಡರಿಗೆ ರಾಜ್ಯಸಭೆ ಟಿಕೆಟ್ ಕೈ ತಪ್ಪಿದ್ದರ ಬಗ್ಗೆ ಪ್ರತಿಕ್ರಿಯಿಸುತ್ತಾ, ದೇವೇಗೌಡರ ಸಹಾಯದಿಂದ ಬಿಜೆಪಿ ಸಂಸತ್ತಿನಲ್ಲಿ ಬಿಲ್ ಪಾಸ್ ಮಾಡಿಕೊಂಡಿತು. ಆದರೆ ಈಗ ಅಪಮಾನ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸ್ತಾರೆ ಎಂದು ಕಿಡಿಕಾರಿದರು.

ವಿಧಾನ ಪರಿಷತ್ ಚುನಾವಣೆ ವಿಚಾರವಾಗಿ ಪ್ರತಿಕ್ರಿಯಿಸಿ, ಪರಿಷತ್ ಚುನಾವಣೆಗೆ ಜೆಡಿಎಸ್ ಅವರು ಅಭ್ಯರ್ಥಿ ಹಾಕ್ತಿದ್ದಾರೆ. ಅವರು ಅಭ್ಯರ್ಥಿ ಹಾಕಲಿ, ರಾಜಕೀಯದಲ್ಲಿ ಇವೆಲ್ಲ ಬೇಕಾಗುತ್ತೆ. ರಾಜಕೀಯ ಮಾಡೋದು ಎಂದರೆ ಇದೇನೆ.

ಕೋಟಿ ಮೌಲ್ಯದ ಹೈಡ್ರೋಪೋನಿಕ್ ಗಾಂಜಾ ವಶ

• ಉದಯವಾಹಿನಿ, ಬೆಂಗಳೂರು

ಬ್ಯಾಂಕಾಕ್‌ನಿಂದ ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಕ್ಕೆ ಆಗಮಿಸಿದ್ದ ಇಬ್ಬರು ಪ್ರಯಾಣಿಕರನ್ನು ಬಂಧಿಸಿರುವ ಕಸ್ಟಮ್ಸ್ ಅಧಿಕಾರಿಗಳು ಅವರುಗಳಿಂದ ಒಟ್ಟು 5.90 ಕೋಟಿ ಮೌಲ್ಯದ ಹೈಡ್ರೋ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ.

ಕಸ್ಟಮ್ಸ್ ಅಧಿಕಾರಿಗಳು ಅನುಮಾನದ ಮೇಲೆ ಇಬ್ಬರು ಪ್ರಯಾಣಿಕರನ್ನು ತಪಾಸಣೆಗೆ ಒಳಪಡಿಸಿದ ವೇಳೆ ಮಾದಕ ವಸ್ತು ಪತ್ತೆಯಾಗಿದೆ.

ಸಾಮಾಜಿಕ ಜಾಲತಾಣ ಎಸ್‌ನಲ್ಲಿ ನೀಡಿದ ಮಾಹಿತಿಯ ಪ್ರಕಾರ, ಪ್ರಯಾಣಿಕನ ಚೆಕ್-ಇನ್ ಲಗೇಜ್‌ನಲ್ಲಿ ಅಡಗಿಸಿಟ್ಟಿದ್ದ 10.20 ಕೆ.ಜಿ. ಹೈಡ್ರೋಪೋನಿಕ್ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ. ಇದರ ಅಂದಾಜು ಮೌಲ್ಯ 3.57 ಕೋಟಿ ಎಂದು ತಿಳಿಸಲಾಗಿದೆ.

ಇದೇ ರೀತಿಯ ಮತ್ತೊಂದು ಪ್ರಕರಣದಲ್ಲಿ, ಜೂನ್ 4ರಂದು ಬ್ಯಾಂಕಾಕ್‌ನಿಂದ ಬಂದಿದ್ದ ಮತ್ತೊಬ್ಬ ಪ್ರಯಾಣಿಕನಿಂದ 6.66 ಕೆ.ಜಿ. ಹೈಡ್ರೋಪೋನಿಕ್ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿತ್ತು.

ವಿಮಾನ ನಿಲ್ದಾಣದ ಟರ್ಮಿನಲ್-2ರಲ್ಲಿ ನಡೆದ ತಪಾಸಣೆಯ ವೇಳೆ ಪ್ರಯಾಣಿಕನ ಲಗೇಜ್‌ನಲ್ಲಿ ಅಡಗಿಸಿಡಲಾಗಿದ್ದ 2.33 ಕೋಟಿ ಮೌಲ್ಯದ ಗಾಂಜಾ ಪತ್ತೆಯಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎರಡೂ ಪ್ರಕರಣಗಳಲ್ಲಿ ಆರೋಪಿಗಳ ಗುರುತನ್ನು ಬಹಿರಂಗಪಡಿಸಲಾಗಿಲ್ಲ, ಬಂಧಿತ ಪ್ರಯಾಣಿಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಮುಂದುವರೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಾದಕ ವಸ್ತುಗಳ ಅಕ್ರಮ ಸಾಗಾಟ ತಡೆಗೆ ವಿಮಾನ ನಿಲ್ದಾಣಗಳಲ್ಲಿ ಕಸ್ಟಮ್ಸ್ ಅಧಿಕಾರಿಗಳು ಕಟ್ಟುನಿಟ್ಟಿನ ನಿಗಾ ವಹಿಸಿದ್ದು, ಪ್ರಕರಣದ ಕುರಿತು ಹೆಚ್ಚಿನ ತನಿಖೆ ಮುಂದುವರಿದಿದೆ.

ಜಾಗತಿಕ ಬಿಕ್ಕಟ್ಟಿನಿಂದ ಎಲ್‌ಪಿಜಿ ದರ ಏರಿಕೆ ಅನಿವಾರ್ಯ : ಪ್ರಲ್ಹಾದ್ ಜೋಶಿ

• ಉದಯವಾಹಿನಿ,ಬೆಂಗಳೂರು

ಅಡುಗೆ ಅನಿಲ (ಎಲ್‌ಪಿಜಿ) ಸಿಲಿಂಡರ್ ದರ ಏರಿಕೆಯಿಂದ ಕೇಂದ್ರ ಸರ್ಕಾರಕ್ಕೂ ಬೇಸರವಾಗಿದೆ. ಆದರೆ ಪ್ರಸ್ತುತ ಜಾಗತಿಕ ಪರಿಸ್ಥಿತಿಯನ್ನು ಗಮನಿಸಿದರೆ ದರ ಏರಿಕೆ ಅನಿವಾರ್ಯವಾಗಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ಯಾಸ್ ಸಿಲಿಂಡರ್ ದರ ಹೆಚ್ಚಳದ ಬಗ್ಗೆ ನಮಗೂ ತುಂಬಾ ದುಃಖ ಮತ್ತು ವಿಷಾದವಿದೆ. ಆದರೆ ಟೀಕಿಸುವ ಮೊದಲು ಜಗತ್ತಿನ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು. ಇಡೀ ವಿಶ್ವವೇ ಗಂಭೀರ ಬಿಕ್ಕಟ್ಟನ್ನು ಎದುರಿಸುತ್ತಿದೆ ಎಂದು ಹೇಳಿದರು.

ದೇಶೀಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಪ್ರತಿ ಸಿಲಿಂಡರ್‌ಗೆ 29 ಹೆಚ್ಚಿಸಲಾಗಿದೆ. ಕಳೆದ ಮೂರು ತಿಂಗಳಲ್ಲಿ ಇದು ಎರಡನೇ ಬಾರಿ ದರ ಏರಿಕೆಯಾಗಿದ್ದು, ಜಾಗತಿಕ ಇಂಧನ ವೆಚ್ಚಗಳ ಏರಿಕೆಯಿಂದ ಸರ್ಕಾರಿ ತೈಲ ಮಾರುಕಟ್ಟೆ ಕಂಪನಿಗಳು ಒತ್ತಡಕ್ಕೆ ಒಳಗಾಗಿವೆ. ಪ್ರಸ್ತುತ ಎಲ್‌ಪಿಜಿ ಪೂರೈಕೆ ಕೆಲವೇ ಮೂಲಗಳಿಂದ ಲಭ್ಯವಾಗುತ್ತಿದೆ. ಜಾಗತಿಕ ಸಾಗಾಣಿಕೆ (ಟ್ರಾನ್ಸಶಿಪ್‌ಮೆಂಟ್) ವ್ಯವಸ್ಥೆಯೂ ಅಸ್ತವ್ಯಸ್ತಗೊಂಡಿದೆ.

ಈ ಹಿನ್ನೆಲೆಯಲ್ಲಿ ಗ್ರಾಹಕರಿಗೆ ತೊಂದರೆಯಾಗದಂತೆ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹೊಸ ಪೂರೈಕೆ ಮೂಲಗಳನ್ನು ಹುಡುಕುತ್ತಿದೆ ಎಂದು ಜೋಶಿ ಹೇಳಿದರು.

ವಿಧ್ವಂಸಕ ಕೃತ್ಯಕ್ಕೆ ಯುವಕರನ್ನು ಸಿದ್ದಪಡಿಸುತ್ತಿದ್ದ ಬಂಧಿತ ಶಂಕಿತ ಉಗ್ರರು

• ಉದಯವಾಹಿನಿ,ಬೆಂಗಳೂರು

ತುಮಕೂರು ನಗರ ಠಾಣೆ ಪೊಲೀಸರು ಬಂಧಿಸಿರುವ ಇಬ್ಬರು ಶಂಕಿತ ಉಗ್ರರು ದೇಶದಲ್ಲಿ ವಿಧ್ವಂಸಕ ಕೃತ್ಯ ನಡೆಸಲು ಯುವಕರ ಪಡೆಯೊಂದನ್ನು ಸಿದ್ದಪಡಿಸುತ್ತಿದ್ದರು ಎಂಬ ಸ್ಫೋಟಕ ಮಾಹಿತಿ ವಿಚಾರಣೆ ವೇಳೆ ತಿಳಿದು ಬಂದಿದೆ. ಪಾಕ್ ಉಗ್ರರ ಜೊತೆ ಸಂಪರ್ಕ ಇಟ್ಟುಕೊಂಡಿದ್ದಾರೆಂಬ ಮಾಹಿತಿ ಮೇರೆಗೆ ತುಮಕೂರಿನ ಶ್ರೀರಾಮನಗರದ ನಿವಾಸಿ ಅಲ್ಲಾಬಕ್ಷು ಹಾಗೂ ದಾವಣಗೆರೆ ಬೀಡಿ ಕಾಲೋನಿ ನಿವಾಸಿ ಜಮೀರ್‌ಖಾನ್ ನನ್ನು ಪೊಲೀಸರು ಬಂಧಿಸಿ ವಿಚಾರಣೆಗೊಳಪಡಿಸಿರುವ ಸಂದರ್ಭದಲ್ಲಿ ಈ ವಿಚಾರ ಗೊತ್ತಾಗಿದೆ.

ಪಾಕ್ ಉಗ್ರ ರಾಣಾ ಸಂಪರ್ಕಕ್ಕೆ ಸಿಕ್ಕ ಬಳಿಕ ಅಲ್ಲಾಬಕ್ಷು ಇನ್‌ಸ್ಟಾಗ್ರಾಮ್‌ನಲ್ಲಿ ರಾಣಾ ಭಾಯಿ ಎಂದು ಸೇವ್ ಮಾಡಿಕೊಂಡಿದ್ದ ತದ ನಂತರದಲ್ಲಿ ಹಿಂದಿ ಭಾಷೆಯಲ್ಲಿ ಆತನೊಂದಿಗೆ ನಡೆಸಿದ ಚರ್ಚೆಯ ಮಾಹಿತಿ ಪೊಲೀಸರಿಗೆ ಲಭಿಸಿದೆ.



ಭೀಕರ ಪ್ರತಿದಾಳಿಯ ಎಚ್ಚರಿಕೆ ನೀಡಿದ ಇಸ್ರೇಲ್

ಒಪ್ಪಂದ ಒಪ್ಪಿಕೊಳ್ಳೋದು ಬಿಟ್ಟು ನೆತನ್ಯಾಹುಗೆ ಬೇರೆ ದಾರಿಯಿಲ್ಲ?

100ನೇ ದಿನಕ್ಕೆ ಕಾಲಿಟ್ಟ ಸಂಘರ್ಷ:

ಇರಾನ್‌ಮೇಲೆ ಅಮೆರಿಕ, ಇಸ್ರೇಲ್ ಪಡೆಗಳ ಜಂಟಿ ದಾಳಿಯು ಇಂದಿಗೆ ನೂರನೇ ದಿನಕ್ಕೆ ಕಾಲಿಟ್ಟಿದೆ. ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆ ಇದೀಗ ಮತ್ತಷ್ಟು ತಾರಕಕ್ಕೇರಿದೆ. ಸೋಮವಾರ ಇಸ್ರೇಲ್ ಮತ್ತು ಇರಾನ್ ಪರಸ್ಪರ ಭಾರಿ ದಾಳಿ ನಡೆಸಿವೆ. ಇದು ತಾತ್ಕಾಲಿಕ ಕದನ ವಿರಾಮದ ಉಲ್ಲಂಘನೆ ಮತ್ತು ಭವಿಷ್ಯದಲ್ಲಿ ಸಂಘರ್ಷ ಮತ್ತಷ್ಟು ಭೀಕರವಾಗುವ ಎಚ್ಚರಿಕೆ ನೀಡಿದೆ. ಮತ್ತೊಂದೆಡೆ, ಇರಾನ್ ಬೆಂಬಲಿತ ಹೌತಿ ಬಂಡುಕೋರರು ಪ್ರಮುಖ ಜಲಮಾರ್ಗವಾದ ಕೆಂಪು ಸಮುದ್ರದಲ್ಲಿ ಇಸ್ರೇಲಿ ಹಡಗುಗಳ ಸಂಚಾರವನ್ನು ನಿಷೇಧಿಸುವುದಾಗಿ ಘೋಷಿಸಿದ್ದಾರೆ ಎಂದು ವರದಿಯಾಗಿದೆ.

ದೇಶದ ರಕ್ಷಣೆ ಹಾಗೂ ಮಾತುಕತೆ ಎರಡೂ ನಡೆಯುತ್ತವೆ

ಇಸ್ರೇಲ್ ಮೇಲಿನ ದಾಳಿಗಳನ್ನು ನಿಲ್ಲಿಸಿದ ನಂತರವೂ ಟೆಹ್ರಾನ್ ಮಾತುಕತೆಯನ್ನು ಮುಂದುವರೆಸಿದೆ ಎಂದು ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಹೇಳಿದ್ದಾರೆ.ರಾಜತಾಂತ್ರಿಕತೆ ಮತ್ತು ರಕ್ಷಣೆ ರಾಷ್ಟ್ರೀಯ ಶಕ್ತಿಯ ಎರಡು ರೆಕ್ಕೆಗಳು, ನಾವು ಯುದ್ಧಭೂಮಿಯನ್ನು ಅಥವಾ ಮಾತುಕತೆಯ ಮೇಜನ್ನು ಬಿಟ್ಟಿಲ್ಲ ಎಂದು ಪೆಜೆಶ್ಕಿಯನ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಟೆಹ್ರಾನ್ ಯಾವುದೇ ಬೆದರಿಕೆಯನ್ನು ಎದುರಿಸುತ್ತದೆಯೇ ಹೊರತು ಹಿಂದೆ ಸರಿಯುವುದಿಲ್ಲ ಎಂದು ಅವರು ಇದೇ ವೇಳೆ ಎಚ್ಚರಿಕೆಯನ್ನು ನೀಡಿದ್ದಾರೆ.ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇಸ್ರೇಲ್ ಮತ್ತು ಇರಾನ್ ತಕ್ಷಣ ಪರಸ್ಪರ ದಾಳಿಗಳನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದ ನಂತರ ಈ ಬೆಳವಣಿಗೆಗಳು ನಡೆದಿವೆ. ಮತ್ತೊಂದು ಕಡೆ, ಇಸ್ರೇಲ್ ಮೇಲಿನ ಇರಾನ್ ದಾಳಿ ತೈಲ ಬೆಲೆಗಳು ಸುಮಾರು ಶೇಕಡಾ 4 ರಷ್ಟು ಏರಿಕೆಗೆ ಕಾರಣವಾಗಿತ್ತು. ಟ್ರಂಪ್ ಅವರ ಕೋರಿಕೆಯ ಮೇರೆಗೆ ಇಸ್ರೇಲ್ ಸೋಮವಾರ ಇರಾನ್ ಮೇಲಿನ ದಾಳಿಗಳನ್ನು ನಿಲ್ಲಿಸಿದೆ ಎಂದು ಹಿರಿಯ ಇಸ್ರೇಲಿ ಅಧಿಕಾರಿಯೊಬ್ಬರು ಮಾಧ್ಯಮವೊಂದಕ್ಕೆ ತಿಳಿಸಿದ್ದಾರೆ ಎಂದು ವರದಿಯಾಗಿದೆ. ಇಸ್ರೇಲ್‌ನ ನಗರಗಳ ಮೇಲೆ ಹಿಜ್ಬುಲ್ಲಾ ದಾಳಿಗಳು ಮುಂದುವರಿದರೆ, ಬೈರುತ್‌ನ ದಕ್ಷಿಣ ಉಪನಗರಗಳ ಮೇಲೆ ದಾಳಿ ಮಾಡುತ್ತದೆ ಎಂದು ಟೆಲ್‌ಅವಿವ್‌ನ ಅಧಿಕಾರಿಗಳು ತಿಳಿಸಿದ್ದಾರೆ.

• ಉದಯವಾಹಿನಿ, ನವದೆಹಲಿ

ಇಸ್ರೇಲ್ ಮತ್ತು ಇರಾನ್ ನಡುವೆ ಇತ್ತೀಚೆಗೆ ನಡೆದ ಕ್ಷಿಪಣಿ ದಾಳಿಗಳ ಬಳಿಕ, ಇರಾನ್ ತನ್ನ ಮಿಲಿಟರಿ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವುದಾಗಿ ಘೋಷಿಸಿದೆ. ಬೈರೂತ್ ಮತ್ತು ಲೆಬನಾನ್ ಮೇಲಿನ ಇಸ್ರೇಲ್ ದಾಳಿಗೆ ಪ್ರತಿಕಾರವಾಗಿ ಇರಾನ್ ಇತ್ತೀಚೆಗೆ ಇಸ್ರೇಲ್ ಮೇಲೆ ಭಾರಿ ಪ್ರಮಾಣದ ಕ್ಷಿಪಣಿ ದಾಳಿ ನಡೆಸಿತ್ತು. ಇದರ ಬೆನ್ನಲ್ಲೇ ಪರಿಸ್ಥಿತಿ ಮತ್ತಷ್ಟು ಹದಗೆಡದಂತೆ ತಡೆಯಲು ಇರಾನ್‌ನ ಮಿಲಿಟರಿ ಜಂಟಿ ಕಮಾಂಡ್, ಇಸ್ರೇಲ್ ವಿರುದ್ಧದ ತನ್ನ ಮಿಲಿಟರಿ ಕಾರ್ಯಾಚರಣೆಗಳನ್ನು ಸದ್ಯಕ್ಕೆ ಸ್ಥಗಿತಗೊಳಿಸುತ್ತಿರುವುದಾಗಿ ಅಧಿಕೃತವಾಗಿ ಪ್ರಕಟಿಸಿದೆ. ಮಧ್ಯಪ್ರಾಚ್ಯ ಸಂಘರ್ಷದ ವಿಚಾರದಲ್ಲಿ ಮಹತ್ವದ ಘೋಷಣೆ ಮಾಡಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇಸ್ರೇಲ್ ಮತ್ತು ಇರಾನ್ ತತ್ ಕ್ಷಣ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲು ಒಪ್ಪಿಕೊಂಡಿವೆ' ಎಂದಿದ್ದಾರೆ. ಆದರೆ, ಒಂದು ವೇಳೆ ಇಸ್ರೇಲ್ ಮತ್ತೆ ನಮ್ಮ ವಿರುದ್ಧ ಯಾವುದೇ ರೀತಿಯ ಆಕ್ರಮಣಶೀಲತೆ ತೋರಿದರೆ, ನಮ್ಮ ಮುಂದಿನ ಪ್ರತಿಕ್ರಿಯೆ ಮತ್ತಷ್ಟು ತೀವ್ರವಾಗಿರುತ್ತದೆ ಎಂದು ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್ ಎಚ್ಚರಿಕೆ ನೀಡಿದೆ.

1 ಶಾಂತಿ ಮಾತುಕತೆ ಅಂತಿಮ ಹಂತದಲ್ಲಿರುವಾಗ ಇಸ್ರೇಲ್ ಮೇಲೆ ಇರಾನ್ ದಾಳಿ,

2 ಪ್ರತೀಕಾರದ ದಾಳಿ ಮಾಡದಂತೆ ನೆತನ್ಯಾಹುಗೆ ಟ್ರಂಪ್ ಮನವಿ

3 ಇಸ್ರೇಲ್-ಇರಾನ್ ಪರಸ್ಪರ ಕ್ಷಿಪಣಿ ದಾಳಿ, ಇರಾನ್ ಜೊತೆಗೆ ಈಗ ಯೆಮೆನ್ ಹೌತಿಗಳಿಂದಲೂ ಇಸ್ರೇಲ್‌ಗೆ ಸಂಕಷ್ಟ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ಬಿಕ್ಕಟ್ಟನ್ನು ಶಾಂತಗೊಳಿಸಲು ಸಕ್ರಿಯವಾಗಿ ಮಧ್ಯಪ್ರವೇಶಿಸಿದ್ದಾರೆ. ಇರಾನ್‌ನ ಕ್ಷಿಪಣಿ ದಾಳಿಗೆ ತಕ್ಷಣವೇ ಪ್ರತಿಕಾರ ತೀರಿಸಿಕೊಳ್ಳದಂತೆ ಟ್ರಂಪ್ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ಫೋನ್ ಕರೆ ಮಾಡಿ ಮನವಿ ಮಾಡಿದ್ದಾರೆ. ಅಮೆರಿಕ ಮತ್ತು ಇರಾನ್ ನಡುವೆ ಶಾಂತಿ ಒಪ್ಪಂದ ಏರ್ಪಡಲು ತುಂಬಾ ಹತ್ತಿರದಲ್ಲಿದ್ದೇವೆ ಎಂದು ಟ್ರಂಪ್ ಹೇಳಿದ್ದಾರೆ.

ಆದರೆ, ಈ ಅಂತಿಮ ಒಪ್ಪಂದಕ್ಕೆ ಸಹಿ ಬೀಳುವವರೆಗೆ ಇರಾನ್ ಮೇಲಿನ ಮತ್ತು 'ಸ್ಟ್ರೈಟ್ ಆಫ್ ಹಾರ್ಮುಜ್' ಮಾರ್ಗದ ಮೇಲಿನ ಅಮೆರಿಕದ ದಿಗ್ಬಂಧನ ಮುಂದುವರಿಯಲಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಕದನ ವಿರಾಮಕ್ಕೆ ಉಭಯ ದೇಶಗಳು ಒಲವು ತೋರಿದ್ದರೂ, ಇರಾನ್‌ನ ನೈರುತ್ಯ ಭಾಗದಲ್ಲಿರುವ 'ಮಹಶಹರ್'ಪೆಟ್ರೋಕೆಮಿಕಲ್ ಸ್ಥಾವರ ಮತ್ತು ಇತರ ಮಿಲಿಟರಿ ನೆಲೆಗಳ ಮೇಲೆ ಇಸ್ರೇಲ್ ಇತ್ತೀಚೆಗೆ ಬಾಂಬ್ ದಾಳಿ ನಡೆಸಿತ್ತು. ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ತಯಾರಿಸಲು ಇರಾನ್ ಈ ಇಂಧನ ಘಟಕವನ್ನು ಬಳಸುತ್ತಿತ್ತು ಎಂದು ಇಸ್ರೇಲ್ ಆರೋಪಿಸಿದೆ. ಇಸ್ರೇಲ್‌ನ ಈ ದಾಳಿಗೆ ಪ್ರತಿಯಾಗಿ ಇರಾನ್ ಸಹ ಇಸ್ರೇಲ್‌ನ 'ಹೈಫಾ' ನಗರದಲ್ಲಿರುವ ಇಂಧನ ಘಟಕವನ್ನು ಗುರಿಯಾಗಿಸಿ ಪ್ರತಿದಾಳಿ ನಡೆಸಿತ್ತು. ಇಸ್ರೇಲ್ ಮತ್ತು ಇರಾನ್ ಎರಡೂ ದೇಶಗಳು 'ತಕ್ಷಣದ ಕದನ ವಿರಾಮ'ಕ್ಕೆ ಎದುರು ನೋಡುತ್ತಿವೆ ಎಂದು ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ಈ ಕುರಿತು ತಮ್ಮ 'ಟ್ರುತ್ ಸೋಷಿಯಲ್' ಖಾತೆಯಲ್ಲಿ ಬರೆದುಕೊಂಡಿರುವ ಅವರು, ''ಶಾಂತಿಯ ಕೊನೆಯ ಹಂತದ ಮಾತುಕತೆಗಳು ಪ್ರಗತಿಯಲ್ಲಿವೆ. ಈ ವಿಷಯದಲ್ಲಿ ಯಾವುದೇ ಮೂರ್ಖತನ ಅಡ್ಡಿಯಾಗದಿದ್ದರೆ ಸಾಕು. ಅಂತಿಮ ಒಪ್ಪಂದಕ್ಕೆ ಬರುವವರೆಗೆ ಇರಾನ್ ಮೇಲಿನ ದಿಗ್ಬಂಧನ ಸಂಪೂರ್ಣವಾಗಿ ಜಾರಿಯಲ್ಲಿರುತ್ತದೆ. ಪ್ರಕ್ರಿಯೆಗಳು ವೇಗವಾಗಿ ನಡೆಯಬೇಕು ಎಂದಿದ್ದಾರೆ. ಭಾರತೀಯ ಕಾಲಮಾನದ ಪ್ರಕಾರ, ಭಾನುವಾರ ರಾತ್ರಿಯಿಂದ ಇರಾನ್ ತನ್ನ ದೇಶದ ಮೇಲೆ ಸುಮಾರು 30 ಕ್ಷಿಪಣಿಗಳನ್ನು ಹಾರಿಸಿದೆ ಎಂದು ಇಸ್ರೇಲ್ ಮಿಲಿಟರಿ ಹೇಳಿದೆ. ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಅಮೆರಿಕ ಮತ್ತು ಇರಾನ್ ನಡೆಸುವ ಮಾತುಕತೆ ಒಪ್ಪಂದವನ್ನು ಒಪ್ಪಿಕೊಳ್ಳುವ ಹೊರತಾಗಿ ಇಸ್ರೇಲ್‌ಗೆ ಬೇರೆ ದಾರಿ ಇಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ಮಾಧ್ಯಮವೊಂದಕ್ಕೆ ನೀಡಿದ ದೂರವಾಣಿ ಸಂದರ್ಶನದಲ್ಲಿ ಮಾತನಾಡಿದ ಅವರು, ಅವರಿಗೆ (ನೆತನ್ಯಾಹು) ಬೇರೆ ಆಯ್ಕೆ ಇಲ್ಲ, ನಾನು ಸಮರ್ಪಕ ತೀರ್ಮಾನ ತೆಗೆದುಕೊಳ್ಳುತ್ತೇನೆ. ಆದರೆ ಅವರು ಸರಿಯಾದ ನಿರ್ಧಾರ ತೆಗೆದುಕೊಳ್ಳುವುದಿಲ್ಲ ಎಂದರು. ಇಸ್ರೇಲ್ ಮೇಲೆ ಇರಾನ್ ನಡೆಸುತ್ತಿರುವ ದಾಳಿಗಳಿಂದ ಅಮೆರಿಕ-ಇರಾನ್ ಮಾತುಕತೆಗಳನ್ನು ಮುಕ್ತಾಯಗೊಳಿಸುವ ನನ್ನ ನಿರ್ಧಾರವನ್ನು ಬದಲಾಯಿಸಿಲ್ಲ, ಇದು ಒಪ್ಪಂದದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಟ್ರಂಪ್ ಹೇಳಿದ್ದಾರೆ. ಇಸ್ರೇಲ್ ಮೇಲೆ ಇರಾನ್ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹಾರಿಸಿದ ಸ್ವಲ್ಪ ಸಮಯದ ಬಳಿಕ ಟ್ರಂಪ್ ಈ ಹೇಳಿಕೆಗಳನ್ನು ನೀಡಿದ್ದಾರೆ. ಈ ದಾಳಿಯು ಏಪ್ರಿಲ್ ಆರಂಭದಲ್ಲಿ ಒಪ್ಪಿಕೊಂಡ ಕದನ ವಿರಾಮದ ಅತ್ಯಂತ ಗಂಭೀರ ಉಲ್ಲಂಘನೆಯಾಗಿದೆ. ಇರಾನ್‌ನ ಕ್ಷಿಪಣಿ ದಾಳಿಗಳಿಗೆ ಪ್ರತೀಕಾರ ತೀರಿಸಿಕೊಳ್ಳಬೇಡಿ ಎಂದು ಟ್ರಂಪ್ ಇಸ್ರೇಲ್‌ಗೆ ತಿಳಿಸಿದ್ದಾರೆ. ಈ ಕುರಿತು ನೆತನ್ಯಾಹುಗೆ ಟ್ರಂಪ್ ಕರೆ ಮಾಡಿ ಮಾತನಾಡಿದ್ದಾರೆ ಎಂದು ಅಮೆರಿಕದ ಅಧಿಕಾರಿಯೊಬ್ಬರು ಆಕ್ಸಿಯಾಸ್‌ಗೆ ತಿಳಿಸಿದರು.

ಇಸ್ರೇಲ್-ಇರಾನ್ ತಕ್ಷಣದ ಕದನ ವಿರಾಮಕ್ಕೆ ಒಪ್ಪಿವೆ: ಟ್ರಂಪ್ ಘೋಷಣೆ

ಟ್ರಂಪ್ ಹೇಳಿಕೆ ಬೆನ್ನಲ್ಲೇ ಇರಾನ್ ದಾಳಿ

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್ ಮೇಲೆ ಶಾಂತಿ ಮಾತುಕತೆಗೆ ಒತ್ತಾಯಿಸುತ್ತಲೇ ಇದ್ದಾರೆ. ಇನ್ನೊಂದೆಡೆ, ಇರಾನ್ ದಾಳಿ ನಡೆಸಿದರೂ ಇಸ್ರೇಲ್ ಪ್ರತಿ ದಾಳಿ ಮಾಡಕೂಡದು ಎಂದು ಹೇಳಿದ್ದರು. ಈ ಕರೆ ನೀಡಿದ ಕೆಲವೇ ಗಂಟೆಗಳಲ್ಲಿ ಇರಾನ್‌ನ ರೆವಲ್ಯೂಷನರಿ ಗಾರ್ಡ್ ಇಸ್ರೇಲ್‌ನ ಎರಡು ಸೇನಾ ನೆಲೆಗಳನ್ನು ಗುರಿಯಾಗಿಸಿ ದಾಳಿ ಮಾಡಿದೆ. ಇಸ್ರೇಲ್ ಸೇನೆಯು ಬೈರುತ್‌ನ ದಕ್ಷಿಣ ಉಪನಗರಗಳ ಮೇಲೆ ವಾಯುದಾಳಿ ನಡೆಸಿತ್ತು. ಇದಕ್ಕೆ ಪ್ರತಿಕಾರವಾಗಿ ಇರಾನ್ ಕೂಡ ಇಸ್ರೇಲ್ ಮೇಲೆ ದಾಳಿ ಮಾಡಿತ್ತು. ಇದು ಸೋಮವಾರದ ಪರಸ್ಪರ ದಾಳಿ ಮತ್ತು ಪ್ರತಿದಾಳಿಗಳಿಗೆ ಕಾರಣವಾಯಿತು. ಈ ಹಠಾತ್ ಸಂಘರ್ಷವು ಫೆಬ್ರವರಿ 28 ರಿಂದ ಪ್ರಾರಂಭವಾದ ಯುದ್ಧವನ್ನು ಶಾಶ್ವತವಾಗಿ ಕೊನೆಗೊಳಿಸಲು ನಡೆಯುತ್ತಿದ್ದ ರಾಜತಾಂತ್ರಿಕ ಪ್ರಯತ್ನಗಳಿಗೆ ಭಾರಿ ಹಿನ್ನಡೆ ತಂದಿದೆ. ಇರಾನ್ ಜೊತೆಗೆ ಸಮಗ್ರ ಪರಮಾಣು ಒಪ್ಪಂದ ಮಾಡಿಕೊಳ್ಳಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡೆಸುತ್ತಿದ್ದ ಕೊನೆಯ ಹಂತದ ಪ್ರಯತ್ನಗಳಿಗೆ ಇದು ತೀವ್ರ ಆತಂಕ ತಂದೊಡ್ಡಿದೆ.

ಒಪ್ಪಂದ ಅಂತಿಮ ಹಂತದಲ್ಲಿರುವಾಗ ಯುದ್ಧ ಬೇಡ:ಟ್ರಂಪ್ ಮನವಿ

ಇಸ್ರೇಲ್ ತಡೆದ ಅಮೆರಿಕ ಅಧ್ಯಕ್ಷ ಟ್ರಂಪ್

ಈ ನಡುವೆ, ಇಸ್ರೇಲ್‌ನ ಸಾರ್ವಜನಿಕ ವಾಹಿನಿ 'ಕಾನ್' ಹಾಗೂ ಅಮೆರಿಕದ ಪ್ರಮುಖ ಮಾಧ್ಯಮ 'ಆಕ್ಸಿಯೋಸ್' ವರದಿಗಳ ಪ್ರಕಾರ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರೊಂದಿಗೆ ದೂರವಾಣಿ ಕರೆ ಮೂಲಕ ಮಾತನಾಡಿದ್ದು, ಇರಾನ್ ಮೇಲೆ ಸದ್ಯಕ್ಕೆ ಯಾವುದೇ ಪ್ರತಿದಾಳಿ ನಡೆಸದಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

ರಾಜತಾಂತ್ರಿಕ ಮಾತುಕತೆಗಳ ಮೂಲಕ ಶಾಂತಿ ಸ್ಥಾಪಿಸಲು ಇರಾನ್‌ಗೆ ಮತ್ತಷ್ಟು ಕಾಲಾವಕಾಶ ನೀಡಬೇಕು ಎಂದು ಟ್ರಂಪ್ ವಿನಂತಿಸಿದ್ದಾರೆ. ಅಲ್ಲದೆ, ಇಸ್ರೇಲ್ ಬೈರೂತ್ ಮೇಲೆ ನಡೆಸಿದ ವೈಮಾನಿಕ ದಾಳಿಗೆ ಅಮೆರಿಕ ಯಾವುದೇ ಒಪ್ಪಿಗೆ ನೀಡಿರಲಿಲ್ಲ ಎಂದು ಹಿರಿಯ ಅಮೆರಿಕ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಇರಾನ್ ಜೊತೆಗಿನ ಶಾಂತಿ ಮಾತುಕತೆಗಳು ಮುರಿದುಬೀಳಬಾರದು ಎಂಬ ಕಾರಣಕ್ಕೆ ಟ್ರಂಪ್ ಇಸ್ರೇಲ್ ಅನ್ನು ನಿಯಂತ್ರಿಸಲು ಯತ್ನಿಸುತ್ತಿದ್ದಾರೆ ಎಂದು ವಿಶ್ಲೇಷಿಸಲಾಗಿದೆ.

ದೇವೇಗೌಡರಿಗೆ ರಾಜ್ಯಸಭೆ ಸ್ಥಾನ ಕೈತಪ್ಪಲು ವಯಸ್ಸು,ಅನಾರೋಗ್ಯವೇ ಪ್ರಮುಖ ಕಾರಣ

• ಉದಯವಾಹಿನಿ, ಬೆಂಗಳೂರು

ರಾಜ್ಯದಿಂದ ರಾಜ್ಯಸಭೆ ಸ್ಥಾನಕ್ಕೆ ಬಿಜೆಪಿ ಹೆಚ್.ಡಿ.ದೇವೇಗೌಡರಿಗೆ ಟಿಕೆಟ್ ನೀಡದ ಕಾರಣ ಮಾಜಿ ಪ್ರಧಾನಿಗಳ ಸಂಸತ್ ಇನ್ನಿಂಗ್ಸ್ ಅಂತ್ಯವಾಗಿದೆ. ರಾಜ್ಯದಿಂದ ರಾಜ್ಯಸಭೆಗೆ ಲಭ್ಯವಿರುವ ಒಂದು ಸ್ಥಾನಕ್ಕೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಹೆಸರು ಬಲವಾಗಿ ಕೇಳಿ ಬಂದಿತ್ತು. ಬಿಜೆಪಿ ಹೈ ಕಮಾಂಡ್ ಹಿರಿಯ ರಾಜಕಾರಣಿ ಮಾಜಿ ಪ್ರಧಾನಿಗೇ ಮಣೆ ಹಾಕಲಿದೆ ಎಂಬ ಚರ್ಚೆಗಳು ನಡೆದಿತ್ತು. ಇತ್ತ ಜೆಡಿಎಸ್ ಪಾಳಯದಲ್ಲೂ ಇದೇ ವಿಶ್ವಾಸ ಇತ್ತು. ಆದರೆ, ಕೊನೆಯ ಕ್ಷಣದಲ್ಲಿ ಬಿಜೆಪಿ ಹೈ ಕಮಾಂಡ್ ಪ್ರೊ.ಎಂ.ನಾಗರಾಜ್‌ಗೆ ಟಿಕೆಟ್ ನೀಡುವ ಮೂಲಕ ಲೆಕ್ಕಾಚಾರ ಬದಲಾಗಿದೆ. ಅಲ್ಲಿಗೆ ಹೆಚ್.ಡಿ.ದೇವೇಗೌಡರ ಸುದೀರ್ಘ ಸಂಸತ್ ಇನ್ನಿಂಗ್ಸ್‌ಗೆ ತೆರೆ ಬಿದ್ದಿದೆ.

ವಯಸ್ಸು ಹಿನ್ನೆಲೆ ದೇವೇಗೌಡರಿಗೆ ಕೈ ತಪ್ಪಿದ ಟಿಕೆಟ್: ಹೆಚ್.ಡಿ.ದೇವೇಗೌಡರನ್ನು ಮತ್ತೊಮ್ಮೆ ರಾಜ್ಯಸಭೆ ಸ್ಥಾನಕ್ಕೆ ಆಯ್ಕೆ ಮಾಡಲು ಬಿಜೆಪಿ ಹೈ ಕಮಾಂಡ್ ಒಲವು ತೋರದೇ ಇರಲು ಪ್ರಮುಖ ಕಾರಣ ವಯಸ್ಸು. ಹೆಚ್.ಡಿ.ದೇವೇಗೌಡರಿಗೆ 94 ವಯಸ್ಸಾಗಿದ್ದು, ಆರೋಗ್ಯ ಸ್ಥಿತಿ ಉತ್ತಮವಾಗಿಲ್ಲ. ಹೀಗಾಗಿ ಸಕ್ರಿಯರಾಗಿ ರಾಜ್ಯಸಭೆಯಲ್ಲಿ ಪಾಲ್ಗೊಳ್ಳುವುದು, ದೆಹಲಿ ಓಡಾಟ ಕಷ್ಟಸಾಧ್ಯವಾಗಲಿದೆ. ದೇವೇಗೌಡರ ವಯಸ್ಸು ಹಾಗೂ ಆರೋಗ್ಯ ಸ್ಥಿತಿಯನ್ನು ಪರಿಗಣಿಸಿ ಬಿಜೆಪಿ ಹೈಕಮಾಂಡ್ ಅವರ ಹೆಸರನ್ನು ಪರಿಗಣಿಸಿಲ್ಲ ರಾಜ್ಯ ಬಿಜೆಪಿ ಮೂಲಗಳು ಖಚಿತ ಪಡಿಸಿವೆ. ಅವರ ವಯಸ್ಸು, ಆರೋಗ್ಯದ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಬಿಜೆಪಿ ಹೈ ಕಮಾಂಡ್ ತೀರ್ಮಾನ ಕೈಗೊಂಡಿದೆ ಎಂದು ಹೇಳಲಾಗುತ್ತಿದೆ. ಬಿಜೆಪಿ ಆಡಳಿತವಿರುವ ಬೇರೆ ರಾಜ್ಯಗಳಿಂದ ಹೆಚ್.ಡಿ.ದೇವೇಗೌಡರಿಗೆ ರಾಜ್ಯಸಭೆ ಸ್ಥಾನ ನೀಡುವ ಬಗ್ಗೆ ಚರ್ಚೆ ನಡೆದಿತ್ತು. ಆದರೆ, ಸ್ವತಃ ಹೆಚ್.ಡಿ.ದೇವೇಗೌಡರೇ ಅದಕ್ಕೆ ಒಲ್ಲೆ ಅಂದಿದ್ದಾರೆ ಎಂದು ಹೇಳಲಾಗುತ್ತಿದೆ. ಇತ್ತ ಜೆಡಿಎಸ್ ಪಕ್ಷವೂ ಪ್ರಧಾನಿ ಮೋದಿಯವರ ಬಳಿ ದೇವೇಗೌಡರಿಗೆ ರಾಜ್ಯಸಭೆ ಸ್ಥಾನ ನೀಡುವಂತೆ ಬಲವಾದ ಬೇಡಿಕೆ ಇಟ್ಟಿರಲಿಲ್ಲ. ರಾಜ್ಯಸಭೆ ಸ್ಥಾನ ಕೊಟ್ಟರೂ ಒಕೆ, ಇಲ್ಲವಾದರೆ ತಮಗೆ ಬಿಟ್ಟಿದ್ದು ಎಂಬ ಅಭಿಪ್ರಾಯವನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವ್ಯಕ್ತಪಡಿಸಿದ್ದರು.

ಕಾಂಗ್ರೆಸ್ ಮುಖಂಡ, ದೇವರಾಜ ಅರಸು ಮೊಮ್ಮಗ ಸೂರಜ್ ಹೆಗ್ಡೆ ಹೃದಯಾಘಾತದಿಂದ ನಿಧನ; ಸಿಎಂ ಸೇರಿ ಹಲವರಿಂದ ಸಂತಾಪ

• ಉದಯವಾಹಿನಿ, ಬೆಂಗಳೂರು

ಎಐಸಿಸಿ ಕಾರ್ಯದರ್ಶಿ ಹಾಗೂ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷರಾಗಿದ್ದ ಸೂರಜ್ ಹೆಗ್ಡೆ ಅವರು ತೀವ್ರ ಹೃದಯಾಘಾತದಿಂದ ನಗರದ ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಅವರ ನಿಧನಕ್ಕೆ ಸಿಎಂ ಡಿ.ಕೆ.ಶಿವಕುಮಾರ್, ಸೇರಿದಂತೆ ಇತರ ಗಣ್ಯರು ತೀವ್ರ ಸಂತಾಪ ಸೂಚಿಸಿದ್ದಾರೆ. ಸೂರಜ್ ಹೆಗ್ಡೆ ಅವರ ಅಗಲಿಕೆ ಸುದ್ದಿ ಕೇಳಿ ನನ್ನ ಮನಸ್ಸಿಗೆ ಆಘಾತವಾಗಿದೆ. ಚಿಕ್ಕ ವಯಸ್ಸಿಗೆ ಅವರು ನಮ್ಮನ್ನು ಅಗಲಿದ್ದಾರೆ ಎಂಬುದನ್ನು ನಂಬಲೇ ಆಗುತ್ತಿಲ್ಲ.

ಸೂರಜ್ ಅವರು ಎಐಸಿಸಿ ಕಾರ್ಯದರ್ಶಿಯಾಗಿ ತಮಿಳುನಾಡು ಹಾಗೂ ಪುದುಚೇರಿ ರಾಜ್ಯದ ಉಸ್ತುವಾರಿಯಾಗಿ ಪಕ್ಷದ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಅವರ ಅಗಲಿಕೆ ಕಾಂಗ್ರೆಸ್ ಪಕ್ಷಕ್ಕೆ ತುಂಬಲಾರದ ನಷ್ಟ ಎಂದು ವಿಷಾದಿಸಿದ್ದಾರೆ.

ಸೂರಜ್ ಹೆಗ್ಡೆ ಅವರು ತಮ್ಮ ತಾತ ದೇವರಾಜ ಅರಸು ಅವರಂತೆ ಹಿಂದುಳಿದ ವರ್ಗಗಳು, ಕಾರ್ಮಿಕರ ಹಕ್ಕು, ಸಾಮಾಜಿಕ ನ್ಯಾಯಕ್ಕಾಗಿ ಶ್ರಮಿಸುತ್ತಿದ್ದರು. ರಾಷ್ಟ್ರೀಯ ಯುವ ಕಾಂಗ್ರೆಸ್ ಉಸ್ತುವಾರಿಗಳಾಗಿ ಪಕ್ಷದ ಸಂಘಟನೆ ಮೂಲಕ ರಾಜಕೀಯಕ್ಕೆ ಪ್ರವೇಶಿಸಿದರು. ಈಗ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷರಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಸೂರಜ್ ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಕುಟುಂಬ ಸದಸ್ಯರು ಹಾಗೂ ಅಭಿಮಾನಿಗಳಿಗೆ ಅವರ ಅಗಲಿಕೆ ನೋವು ಭರಿಸುವ ಶಕ್ತಿಯನ್ನು ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ ಎಂದು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

ರಾಹುಲ್ ಗಾಂಧಿ ಸಂತಾಪ: ಸೂರಜ್ ಹೆಗ್ಡೆ ನಿಧನಕ್ಕೆ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಸಂತಾಪ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಪಕ್ಷದ ವಿಚಾರಧಾರೆಯಲ್ಲಿ ಅತಿಯಾದ ನಂಬಿಕೆ ಇಟ್ಟಿದ್ದರು. ಯುವ ಕಾಂಗ್ರೆಸ್‌ನಲ್ಲಿದ್ದಾಗ ಅವರು ಯುವ ಭಾರತೀಯರಿಗೆ ಮಾರ್ಗದರ್ಶನ ನೀಡುತ್ತಿದ್ದರು. ಅವರ ನಿಧನ ಕಾಂಗ್ರೆಸ್ ಕುಟುಂಬಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ಕುಟುಂಬ, ಸ್ನೇಹಿತರಿಗೆ ಅವರ ಅಗಲಿಕೆಯ ನೋವು ಭರಿಸುವ ಶಕ್ತಿ ಸಿಗಲಿ ಎಂದು ಪ್ರಾರ್ಥಿಸಿಕೊಂಡಿದ್ದಾರೆ.

ಎಐಸಿಸಿ ಅಧ್ಯಕ್ಷರ ಸಂತಾಪ: ಎಐಸಿಸಿ ಕಾರ್ಯದರ್ಶಿಯಾಗಿ ಪಕ್ಷಕ್ಕೆ ಸಮರ್ಪಣಾಭಾವದಿಂದ ಸೇವೆ ಸಲ್ಲಿಸಿದ ಯುವ ನಾಯಕ ಸೂರಜ್ ಹೆಗ್ಡೆ ಅವರ ಅಕಾಲಿಕ ನಿಧನದಿಂದ ತೀವ್ರ ಆಘಾತ ಮತ್ತು ದುಃಖವಾಗಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೂಡ ಸಂತಾಪ ವ್ಯಕ್ತಪಡಿಸಿದ್ದಾರೆ.

ಸೂರಜ್ ನನ್ನ ಕುಟುಂಬಕ್ಕೆ ತುಂಬಾ ಹತ್ತಿರವಾಗಿದ್ದರು. ನಾನು ಅವರನ್ನು ಬಾಲ್ಯದಿಂದಲೂ ಬಲ್ಲೆ. ಅವರು ಬೆಳೆಯುವುದನ್ನು ನೋಡುವುದು ನಿಜಕ್ಕೂ ಹೃದಯಸ್ಪರ್ಶಿಯಾಗಿತ್ತು.

ಬಾರ್, ಕ್ಲಬ್ ಮತ್ತು ಮದ್ಯ ಸರಬರಾಜು ಮಾಡುವ ಸಂಸ್ಥೆಗಳಲ್ಲಿ ವಯಸ್ಸಿನ ಪರಿಶೀಲನೆ ಕಡ್ಡಾಯ: ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ

• ಉದಯವಾಹಿನಿ, ಬೆಂಗಳೂರು

ಅಪ್ರಾಪ್ತ ವಯಸ್ಕರ ಪ್ರವೇಶವನ್ನು ಕಟ್ಟುನಿಟ್ಟಾಗಿ ತಡೆಯಲು ಮತ್ತು ಅವರಿಗೆ ಮದ್ಯ ಸರಬರಾಜು ಮಾಡುವುದನ್ನು ನಿಷೇಧಿಸಲು ಬೆಂಗಳೂರಿನ ಎಲ್ಲಾ ಪಬ್‌ಗಳು, ಬ್ರೆವರೀಸ್, ಬಾರ್‌ಗಳು, ಕ್ಲಬ್‌ಗಳು, ಲಾಂಜ್‌ಗಳು, ರೆಸ್ಟೋರೆಂಟ್‌ಗಳು ಹಾಗೂ ಮದ್ಯ ಸರಬರಾಜು ಮಾಡುವ ಇತರ ಸಂಸ್ಥೆಗಳಿಗೆ ನೋಟಿಸ್ ಜಾರಿ ಮಾಡುವಂತೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಬೆಂಗಳೂರಿನಲ್ಲಿ ಹದಿಹರೆಯದವರು ಮತ್ತು ಯುವ ಜನರಲ್ಲಿ ಹೆಚ್ಚುತ್ತಿರುವ ಮದ್ಯಪಾನ ಹಾಗೂ ಮಾದಕ ದ್ರವ್ಯಗಳ ಬಳಕೆಯ ಬಗೆಗಿನ ಆತಂಕದ ಹಿನ್ನೆಲೆಯಲ್ಲಿ ಈ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಬೆಂಗಳೂರಿನ ನಾಲ್ಕು ಪ್ರಮುಖ ಶಿಕ್ಷಣ ಸಂಸ್ಥೆಗಳ ಪದವಿಪೂರ್ವ ಪದವಿ ಮತ್ತು ಉನ್ನತ ಪ್ರೌಢ ತರಗತಿಗಳ 4,093 ವಿದ್ಯಾರ್ಥಿಗಳ ನಡುವೆ ಇತ್ತೀಚೆಗೆ ನಡೆಸಿದ ಸಂಶೋಧನೆಯಲ್ಲಿ, ನಗರದ ಪ್ರತಿ ಮೂವರು ಹದಿಹರೆಯದವರಲ್ಲಿ ಒಬ್ಬರು ಮದ್ಯ ಅಥವಾ ತಂಬಾಕು ಬಳಕೆಯಿಂದಾಗಿ ಆರೋಗ್ಯ ಸಮಸ್ಯೆಗಳನ್ನು ಎದುರಿಸುವ ಅಪಾಯದಲ್ಲಿದ್ದಾರೆ ಎಂಬ ಆಘಾತಕಾರಿ ವಿಷಯ ಬೆಳಕಿಗೆ ಬಂದಿದೆ. ಈ ಅಧ್ಯಯನವನ್ನು ಬೆಂಗಳೂರಿನ ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು, ಕ್ರೈಸ್ಟ್ ವಿಶ್ವವಿದ್ಯಾಲಯ ಮತ್ತು ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಸಂಶೋಧಕರು ನಡೆಸಿದ್ದಾರೆ. ಈ ಅಧ್ಯಯನದ ಪ್ರಕಾರ, ಸಮೀಕ್ಷೆಗೆ ಒಳಪಟ್ಟ ಯುವಕರಲ್ಲಿ ಶೇ. 33 ರಷ್ಟು ಮಂದಿ ಮದ್ಯವನ್ನು ಬಳಸುತ್ತಿದ್ದರೆ, ಸುಮಾರು ಶೇ. 18 ರಷ್ಟು ಮಂದಿ ತಂಬಾಕು ಚಟಕ್ಕೆ ದಾಸರಾಗಿದ್ದಾರೆ. ಇದು ತಂಬಾಕು ಬಳಕೆಯ ರಾಷ್ಟ್ರೀಯ ಸರಾಸರಿ (ಶೇ. 8.7) ಮತ್ತು ಮದ್ಯಪಾನದ ರಾಷ್ಟ್ರೀಯ ಸರಾಸರಿಗಿಂತ (ಶೇ. 7.9) ಗಣನೀಯವಾಗಿ ಹೆಚ್ಚಾಗಿದೆ. ಅಷ್ಟೇ ಅಲ್ಲದೆ, ಇದು ಕರ್ನಾಟಕದ ಒಟ್ಟಾರೆ ಸರಾಸರಿಯಾದ ಶೇ. 4.7 (ತಂಬಾಕು) ಮತ್ತು ಶೇ. 8.5 ಕ್ಕಿಂತಲೂ (ಮದ್ಯಪಾನ) ತೀರಾ ಹೆಚ್ಚಾಗಿದೆ. ಬೆಂಗಳೂರಿನಲ್ಲಿ ಹದಿಹರೆಯದವರು ಮದ್ಯಪಾನ ಮಾಡಲು ಪ್ರಾರಂಭಿಸುವ ಸರಾಸರಿ ವಯಸ್ಸು 17 ವರ್ಷವಾಗಿದ್ದು, ಕೆಲವರು ಕೇವಲ 8 ವರ್ಷ ವಯಸ್ಸಿನಲ್ಲೇ ಮದ್ಯಪಾನದ ಹವ್ಯಾಸ ಆರಂಭಿಸಿದ್ದಾರೆ ಎಂದು ವರದಿ ತಿಳಿಸಿದೆ.ಈ ಗಂಭೀರ ಸಂಶೋಧನಾ ವರದಿಯ ಹಿನ್ನೆಲೆಯಲ್ಲಿ, ಸಚಿವ ಪ್ರಿಯಾಂಕ್ ಖರ್ಗೆ ಅವರು ಅಪ್ರಾಪ್ತ ವಯಸ್ಕರ ಮದ್ಯಪಾನವನ್ನು ಕೇವಲ ಪರವಾನಗಿ ನಿಯಮಗಳ ಉಲ್ಲಂಘನೆ ಎಂದು ಪರಿಗಣಿಸದೆ, ಇದನ್ನು ಯುವಕರ ಸುರಕ್ಷತೆ ಮತ್ತು ಸಾರ್ವಜನಿಕ ಆರೋಗ್ಯದ ಗಂಭೀರ ಕಾಳಜಿ ಎಂದು ಪರಿಗಣಿಸುವಂತೆ ಪೊಲೀಸರಿಗೆ ಸೂಚಿಸಿದ್ದಾರೆ. ಮದ್ಯ ಸರಬರಾಜು ಮಾಡುವ ಎಲ್ಲಾ ಸಂಸ್ಥೆಗಳು ಪ್ರವೇಶ ದ್ವಾರದಲ್ಲಿ ಮತ್ತು ಮದ್ಯವನ್ನು ನೀಡುವ ಮೊದಲು ಕಟ್ಟುನಿಟ್ಟಾದ ವಯಸ್ಸಿನ ಪರಿಶೀಲನಾ ನಿಯಮಗಳನ್ನು ಜಾರಿಗೆ ತರಬೇಕು ಎಂದು ಸಚಿವ ಪ್ರಿಯಾಂಕ್ ಖರ್ಗೆ ಆದೇಶಿಸಿದ್ದಾರೆ. ಯಾವುದೇ ವ್ಯಕ್ತಿಗೆ ವಯಸ್ಸಿನ ಅಧಿಕೃತ ಪುರಾವೆ (ಐಡಿ ಕಾರ್ಡ್) ಇಲ್ಲದೆ ಪಬ್, ಬ್ರೆವರೀಸ್, ಬಾರ್, ಕ್ಲಬ್ ಅಥವಾ ಮದ್ಯ ಸರಬರಾಜು ಮಾಡುವ ಸಂಸ್ಥೆಗಳ ಒಳಗೆ ಪ್ರವೇಶ ನೀಡಬಾರದು. ಸಂಸ್ಥೆಗಳು ಗ್ರಾಹಕರಿಗೆ ಪ್ರವೇಶ ನೀಡುವ ಮೊದಲು ಅಥವಾ ಮದ್ಯವನ್ನು ಸರಬರಾಜು ಮಾಡುವ ಮುನ್ನ ಸರ್ಕಾರ ನೀಡಿದ ಅಧಿಕೃತ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪರಿಶೀಲಿಸಿ ವಯಸ್ಸನ್ನು ದೃಢೀಕರಿಸಿಕೊಳ್ಳಬೇಕು.

ಪ್ರಾಪ್ತ ವಯಸ್ಕರಿಗೆ ಮದ್ಯ ಸರಬರಾಜು ಮಾಡುವ ಅಥವಾ ಅಪ್ರಾಪ್ತರ ಮದ್ಯಪಾನಕ್ಕೆ ಪ್ರಚೋದನೆ ನೀಡುವ ಯಾವುದೇ ಸಂಸ್ಥೆಯ ವಿರುದ್ಧ ಅನ್ವಯವಾಗುವ ಕಾನೂನಿನ ಅಡಿಯಲ್ಲಿ ಅತ್ಯಂತ ಕಠಿಣ ಕ್ರಮ ಕೈಗೊಳ್ಳಲಾಗುವುದು. ಸಂಸ್ಥೆಯ ಆವರಣದೊಳಗೆ ನಡೆಯುವ ನಿಯಮ ಉಲ್ಲಂಘನೆಗಳಿಗೆ ಆಯಾ ಸಂಸ್ಥೆಯ ಮಾಲೀಕರು, ವ್ಯವಸ್ಥಾಪಕರು (ಮ್ಯಾನೇಜರ್‌ಗಳು), ಪರವಾನಗಿದಾರರು ಮತ್ತು ಕಾರ್ಯಕ್ರಮದ ಆಯೋಜಕರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ.

ಶೂನ್ಯ ಸಹಿಷ್ಣುತೆ ನೀತಿ ಅಳವಡಿಕೆ

ಅಪ್ರಾಪ್ತ ವಯಸ್ಕರ ಮದ್ಯಪಾನಕ್ಕೆ ಪ್ರೋತ್ಸಾಹ ನೀಡುವ ಅಥವಾ ಅದಕ್ಕೆ ಕಾರಣವಾಗುವ ಸಂಸ್ಥೆಗಳ ವಿರುದ್ಧ ಕರ್ನಾಟಕ ಸರ್ಕಾರವು ಯಾವುದೇ ಕಾರಣಕ್ಕೂ ರಾಜಿ ಮಾಡಿಕೊಳ್ಳುವುದಿಲ್ಲ ಮತ್ತು ಶೂನ್ಯ ಸಹಿಷ್ಣುತೆನೀತಿಯನ್ನು ಅಳವಡಿಸಿಕೊಳ್ಳಲಿದೆ ಎಂದು ಗೃಹ ಸಚಿವರು ಸ್ಪಷ್ಟಪಡಿಸಿದ್ದಾರೆ. ಮಕ್ಕಳು ಮತ್ತು ಯುವ ಜನರನ್ನು ಮದ್ಯ ಹಾಗೂ ಮಾದಕ ದ್ರವ್ಯಗಳ ದುರಭ್ಯಾಸದಿಂದ ರಕ್ಷಿಸಬೇಕಾಗಿದೆ. ವಾಣಿಜ್ಯ ಸಂಸ್ಥೆಗಳು ನಮ್ಮ ಯುವ ಪೀಳಿಗೆಯ ಸುರಕ್ಷತೆ ಮತ್ತು ಭವಿಷ್ಯವನ್ನು ಬದಿಗಿಟ್ಟು ಕೇವಲ ಲಾಭ ಗಳಿಕೆಗೆ ಆದ್ಯತೆ ನೀಡಲು ಸಾಧ್ಯವಿಲ್ಲ. 'ಐಡಿ ಇಲ್ಲದಿದ್ದರೆ, ಪ್ರವೇಶವಿಲ್ಲ'. ಅಪ್ರಾಪ್ತರ ಮದ್ಯಪಾನಕ್ಕೆ ಕುಮ್ಮಕ್ಕು ನೀಡುವ ಯಾವುದೇ ಸಂಸ್ಥೆಯು ತೀವ್ರ ಸ್ವರೂಪದ ಕಾನೂನು ಕ್ರಮವನ್ನು ಎದುರಿಸಬೇಕಾಗುತ್ತದೆ.

ಈ ದಿನದ ದರ ಪೆಟ್ರೋಲ್: 110.61 ₹/L | ಡೀಸೆಲ್ : 98.80₹/L | ಬಂಗಾರ: ₹ 15,169/Gram 24ct ₹13,905 /Gram 22ct | ಬೆಳ್ಳಿ: ₹270.00/Gram

ಒಸಿ-ಸಿಸಿ ಸಮಸ್ಯೆಗೆ ಮುಕ್ತಿ: 1.54 ಲಕ್ಷ ಮನೆಗಳಿಗೆ ಸಿಗಲಿದೆ ಶಾಶ್ವತ ವಿದ್ಯುತ್ ಸಂಪರ್ಕ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

ಹಲವು ವರ್ಷಗಳಿಂದ ಒಸಿ-ಸಿಸಿ ಸಮಸ್ಯೆಯಿಂದ ತಾತ್ಕಾಲಿಕ ವಿದ್ಯುತ್ ಸಂಪರ್ಕದಲ್ಲಿದ್ದ ಮನೆಗಳಿಗೆ ಇಂದಿನಿಂದ ಶಾಶ್ವತ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರ ಮುಂದಾಗಿದೆ. ಈ ಮೂಲಕ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬೆನ್ನಲ್ಲೇ ಡಿ.ಕೆ. ಶಿವಕುಮಾರ್ ಜನಸಾಮಾನ್ಯರ ಬಹುಕಾಲದ ಸಮಸ್ಯೆಗೆ ಪರಿಹಾರ ನೀಡಲು ಮುಂದಾಗಿದ್ದಾರೆ. ಬೆಂಗಳೂರು ಸೇರಿದಂತೆ ರಾಜ್ಯದ ಬಡ ಮತ್ತು ಮಧ್ಯಮ ವರ್ಗದ ಮನೆ ಮಾಲೀಕರಿಗೆ ಅನುಕೂಲವಾಗುವಂತೆ ಕರ್ನಾಟಕ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ. ಪ್ರಾರಂಭಿಕ ಪ್ರಮಾಣಪತ್ರ, ಸ್ವಾಧೀನಾನುಭವ ಪ್ರಮಾಣಪತ್ರ, ನಿಯಮಗಳಿಂದ ಒಂದು ಬಾರಿಯ ವಿನಾಯಿತಿ ನೀಡಿದ್ದು, ಈ ಸಂಬಂಧ ಜೂನ್ 5, 2026 ರಂದು ಅಧಿಕೃತ ಆದೇಶ ಹೊರಡಿಸಲಾಗಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಮಹತ್ವದ ತೀರ್ಮಾನ ಕೈಗೊಳ್ಳಲಾಗಿತ್ತು.

ಹಲವು ವರ್ಷಗಳಿಂದ ಒಸಿ ಮತ್ತು ಸಿಸಿ ಇಲ್ಲದ ಕಾರಣ ತಾತ್ಕಾಲಿಕ ವಿದ್ಯುತ್ ಸಂಪರ್ಕದಲ್ಲಿದ್ದ ಮನೆಗಳಿಗೆ ಶಾಶ್ವತ ಸಂಪರ್ಕ ಕಲ್ಪಿಸಲು ಸರ್ಕಾರ ಮುಂದಾಗಿತ್ತು.

ಸಿಎಂ ಆದೇಶದ ಬೆನ್ನಲ್ಲೇ ಬೆಸ್ಕಾಂ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯಪ್ರವೃತ್ತರಾಗಿದ್ದಾರೆ. ಬಾಕಿ ಉಳಿದಿರುವ ತಾತ್ಕಾಲಿಕ ವಿದ್ಯುತ್ ಸಂಪರ್ಕಗಳನ್ನು ಶಾಶ್ವತ ಸಂಪರ್ಕಗಳಾಗಿ ಪರಿವರ್ತಿಸುವ ಕಾರ್ಯಕ್ಕೆ ಇಂದಿನಿಂದ ಚಾಲನೆ ನೀಡಲಾಗಿದೆ. ಈ ಪ್ರಕ್ರಿಯೆಯನ್ನು ಸಮರೋಪಾದಿ ವೇಗದಲ್ಲಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಬೆಸ್ಕಾಂ ಅಂಕಿಅಂಶಗಳ ಪ್ರಕಾರ, 30-40 ಮತ್ತು 60-40 ನಿವೇಶನಗಳಲ್ಲಿ ನಿರ್ಮಾಣಗೊಂಡ ಮನೆಗಳನ್ನು ಸೇರಿಸಿ ಒಟ್ಟು 1.54 ಲಕ್ಷಕ್ಕೂ ಹೆಚ್ಚು ವಿದ್ಯುತ್ ಸಂಪರ್ಕ ಅರ್ಜಿಗಳು ಬಾಕಿ ಇವೆ.

ಮನೆ ಮಾಲೀಕರಿಗೆ ಅನುಕೂಲವಾಗುವಂತೆ ಸರ್ಕಾರ ಮಹತ್ವದ ನಿರ್ಧಾರ

ಈ ಎಲ್ಲಾ ಮನೆಗಳಿಗೆ ಹಂತ ಹಂತವಾಗಿ ಶಾಶ್ವತ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ. ವರ್ಷಗಳಿಂದ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಕಾಯುತ್ತಿದ್ದ ಸಾವಿರಾರು ಕುಟುಂಬಗಳಿಗೆ ಈ ನಿರ್ಧಾರದಿಂದ ದೊಡ್ಡ ಮಟ್ಟದ ಅನುಕೂಲವಾಗಲಿದೆ.

ಸುಂಕಲ್ ಪಾಳ್ಯ ಕೆರೆಯಲ್ಲಿ ಕಲುಷಿತ ನೀರಿನಿಂದ ನೂರಾರು ಮೀನುಗಳ ಸಾವು!


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ಸುಂಕಲ್ ಪಾಳ್ಯ ಕೆರೆಯಲ್ಲಿ ಕಲುಷಿತ ನೀರು ಹಾಗೂ ಆಮ್ಲಜನಕದ ಮಟ್ಟ ಕುಸಿದಿದ್ದರಿಂದ ನೂರಾರು ಮೀನುಗಳು ಸಾವನ್ನಪ್ಪಿವೆ ಎಂದು ವರದಿಯಾಗಿದೆ.

ಕೆರೆಯಲ್ಲಿ ತೇಲುತ್ತಿದ್ದ ಮೀನುಗಳನ್ನು ಕೆಲವರು ಗಮನಿಸಿದ್ದು, ಬಳಿಕ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಧಿಕಾರಿಗಳನ್ನು ಸಂಪರ್ಕಿಸಿದ್ದಾರೆ. ಈ ಕುರಿತು ಮಾತನಾಡಿದ ಸುಂಕಲ್ ಪಾಳ್ಯ ನಿವಾಸಿ ದೀಪು ನಾಯರ್, ಅಧಿಕಾರಿಗಳನ್ನು ಸಂಪರ್ಕಿಸಲು ಯತ್ನಿಸಿದೆ. ಆದರೆ, ಅವರು ಇತರ ಅಧಿಕಾರಿಗಳ ನಂಬರ್ ನೀಡಿ, ಈ ವಿಷಯ ಕುರಿತು ತಿಳಿಸುವಂತೆ ಹೇಳಿದೆ. ಇದು ಹೀಗೆಯೇ ಇದೆ, ಸಮಸ್ಯೆಯನ್ನು ಪರಿಹರಿಸಲಾಗಿಲ್ಲ ಎಂದರು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹಿರಿಯ ಅಧಿಕಾರಿಯೊಂದಿಗೆ ಈ ವಿಷಯವನ್ನು ಪ್ರಸ್ತಾಪಿಸಲಾಗಿದೆ. ಆದರೆ ಯಾವುದೇ ಉತ್ತರ ಬರಲಿಲ್ಲ. ಕೆರೆಗಳ ನಿರ್ವಹಣೆಯನ್ನು ಬಿಡಿಎಯಿಂದ ಜಿಬಿಎಗೆ ವರ್ಗಾಯಿಸಲಾಗಿದೆ ಎಂಬುದು ತದನಂತರ ಗೊತ್ತಾಯಿತು ಎಂದು ಅವರು ತಿಳಿಸಿದರು.

ಮೃತಪಟ್ಟ ಮೀನುಗಳನ್ನು ಸಂಗ್ರಹಿಸಲು ಕೆಲವು ಕಾರ್ಮಿಕರನ್ನು ಅಧಿಕಾರಿಗಳು ನಿಯೋಜಿಸಿದ್ದಾರೆ. ಕಳೆದ ಕೆಲವು ದಿನಗಳಿಂದ ಇದು ನಡೆಯುತ್ತಿದೆ. ಈ ವಿಚಾರ ಹೊರಗೆ ಬಾರದಂತೆ ಮಾಡಲಾಗುತ್ತಿದೆ. ಸತ್ತ ಮೀನುಗಳನ್ನು ತೆಗೆದುಹಾಕದಿದ್ದರೆ, ದುರ್ವಾಸನೆ ಅಸಹನೀಯವಾಗುತ್ತಿತ್ತು ಮತ್ತು ಸಮಸ್ಯೆ ದೊಡ್ಡದಾಗುತ್ತಿತ್ತು ಎಂದು ಅವರು ಹೇಳಿದರು.

ರಂಗೇರಿದ ಪರಿಷತ್ ಚುನಾವಣೆ

ಕಾಂಗ್ರೆಸ್ 5ನೇ , ಜೆಡಿಎಸ್ ಅಭ್ಯರ್ಥಿ ನಡುವೆ

• ಉದಯವಾಹಿನಿ, ಬೆಂಗಳೂರು

ರಾಜ್ಯ ವಿಧಾನಸಭೆಯಿಂದ ವಿಧಾನಪರಿಷತ್‌ನ 7 ಸ್ಥಾನಗಳಿಗೆ ನಡೆಯುವ ಚುನಾವಣೆ ರಂಗೇರಿದ್ದು, ಈ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಜೆಡಿಎಸ್ 8ನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಈ ಮೂಲಕ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ಮತ್ತೊಂದು ಸಮರಕ್ಕೆ ವೇದಿಕೆ ಅಣಿಯಾಗಿದೆ.

ವಿಧಾನಪರಿಷತ್‌ನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಐದು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದು, ಬಿಜೆಪಿ ತನ್ನ ಅಧಿಕೃತ ಇಬ್ಬರು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ ,7ನೇ ಸ್ಥಾನಕ್ಕೆ ಈಗ ಕಾಂಗ್ರೆಸ್‌ನ ಐದನೇ ಅಭ್ಯರ್ಥಿ ಹಾಗೂ ಜೆಡಿಎಸ್ ಅಭ್ಯರ್ಥಿ ನಡುವೆ ಸ್ಪರ್ಧೆ ಏರ್ಪಟಿದ್ದು ಗೆಲುವು ಯಾರಿಗೆ ದಕ್ಕಲಿದೆ ಎಂಬುದು ಕುತೂಹಲ ಮೂಡಿಸಿದೆ.

ಕಾಂಗ್ರೆಸ್‌ನ ನಾಲ್ವರು ಅಭ್ಯರ್ಥಿಗಳಾದ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ತಿಪ್ಪಣ್ಣ ಕಮಕನೂರು, ಪಿ.ವಿ. ಮೋಹನ್, ಶಿವಣ್ಣ ಮಳವಳ್ಳಿ ಅವರನ್ನು ಕಾಂಗ್ರೆಸ್ ಹೈಕಮಾಂಡ್ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿತ್ತು.

ಇವರುಗಳೆಲ್ಲಾ ಈಗಾಗಲೇ ನಾಮಪತ್ರ ಸಲ್ಲಿಸಿದ್ದರಾದರೂ ಕಾಂಗ್ರೆಸ್‌ನ ಐದನೇ ಅಭ್ಯರ್ಥಿಯಾಗಿ ಕೆಪಿಸಿಸಿ ಖಂಜಾಚಿ ಹಾಗೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರ ಆಪ್ತ ವಿನಯ್ ಕಾರ್ತಿಕ್ ಅವರನ್ನು ಆಯ್ಕೆ ಮಾಡಲಾಗಿತ್ತು ಅವರು ಇಂದು ತಮ್ಮ ನಾಮಪತ್ರ ಸಲ್ಲಿಸಿದರು.

ಬಿಜೆಪಿಯಿಂದ ವಿಧಾನಪರಿಷತ್‌ನ ಎರಡು ಸ್ಥಾನಗಳಿಗೆ ಪಕ್ಷದ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜಪಾಟೀಲ್ ಹಾಗೂ ರಘು ಕೌಟಿಲ್ಯ ಅವರನ್ನು ಆಯ್ಕೆ ಮಾಡಿದ್ದು, ಇವರಿಬ್ಬರು ತಮ್ಮ ನಾಮಪತ್ರ ಸಲ್ಲಿಸಿದರು.

ಈ ಮೊದಲು 8ನೇ ಅಭ್ಯರ್ಥಿಯನ್ನು ನಿಲ್ಲಿಸಲು ಅಷ್ಟೇನೂ ಆಸಕ್ತಿ ತೋರದಿದ್ದ ಜೆಡಿಎಸ್, ಕಾಂಗ್ರೆಸ್‌ನ ವಿನಯ್ ಕಾರ್ತಿಕ್ ನಾಮಪತ್ರ ಸಲ್ಲಿಸುತ್ತಿದ್ದಂತೆಯ ಜೆಡಿಎಸ್‌ನಿಂದ 8ನೇ ಅಭ್ಯರ್ಥಿಯಾಗಿ ಮಾಜಿ ವಿಧಾನಪರಿಷತ್ ಸದಸ್ಯ ಗೋವಿಂದರಾಜು ನಾಮಪತ್ರ ಸಲ್ಲಿಸಿದರು. ಹಾಗಾಗಿ ವಿಧಾನಪರಿಷತ್ ಚುನಾವಣಾ ಕಣ ರಂಗೇರಿದ್ದು, ಕಾರ್ತಿಕ್ ವಿನಯ್ ಹಾಗೂ ಗೋವಿಂದರಾಜು ನಡುವೆ ಗೆಲುವಿಗೆ ಪೈಪೋಟಿ ಇದ್ದು, ಎರಡೂ ಪಕ್ಷಗಳಿಗೂ ತಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ಕೆಲವು ಮತಗಳ ಅವಶ್ಯಕತೆ ಇದ್ದು, ಇದನ್ನು ಹೇಗೆ ಕ್ರೂಡೀಕರಿಸುತ್ತವೆ ಎಂಬುದು ಕುತೂಹಲ ಮೂಡಿಸಿದೆ.



ಬಿಜೆಪಿ ಅಭ್ಯರ್ಥಿ ನಾಮಪತ್ರ ಸಲ್ಲಿಕೆ

ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಈ ತಿಂಗಳ 18 ರಂದು ನಡೆಯಲಿರುವ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಲೋಕಸೇವಾ ಆಯೋಗದ ಮಾಜಿ ಸದಸ್ಯ ಎಂ. ನಾಗರಾಜು ಇಂದು ತಮ್ಮ ನಾಪತ್ರ ಸಲ್ಲಿಸಿದರು. ಕಾಂಗ್ರೆಸ್‌ನಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆ, ಎಐಸಿಸಿ ವಕ್ತಾರ ಪವನ್ ಖೇರಾ, ಹಾಗೂ ಮನ್ಸೂರ್ ಆಲಿಖಾನ್ ಇವರುಗಳು ತಮ್ಮ ನಾಮಪತ್ರ ಸಲ್ಲಿಸಿದ್ದು, ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗುವ ಸಾಧ್ಯತೆಗಳಿವೆ.

ನಾಲ್ಕು ಸ್ಥಾನಗಳಿಗೆ ಕಾಂಗ್ರೆಸ್‌ನಿಂದ ಮೂವರು, ಬಿಜೆಪಿಯಿಂದ ಒಬ್ಬರು ಹಾಗೂ ಪಕ್ಷೇತರದ ಅಭ್ಯರ್ಥಿ ಒಬ್ಬರು ನಾಮಪತ್ರ ಸಲ್ಲಿಸಿದ್ದರಾದರೂ ಪಕ್ಷೇತರ ಅಭ್ಯರ್ಥಿಗೆ ಶಾಸಕರ ಬೆಂಬಲ ಸಿಗದ ಕಾರಣ ಕಾಂಗ್ರೆಸ್‌ನ ಮಲ್ಲಿಕಾರ್ಜುನಖರ್ಗೆ, ಫವನ್ ಖೇರಾ, ಮನ್ಸೂರ್ ಆಲಿಖಾನ್ ಮತ್ತು ಬಿಜೆಪಿಯ ಎಂ. ನಾಗರಾಜು ಅವಿರೋಧವಾಗಿ ಆಯ್ಕೆಯಾಗುವುದು ಬಹುತೇಕ ನಿಶ್ಚಿತ.

ವಿಧಾನಸಭೆಯಲ್ಲಿ ಪಕ್ಷಗಳ ಬಲಾಬಲ

.ಕಾಂಗ್ರೆಸ್- 135
. ಬಿಜೆಪಿ- 62
. ಬಿಜೆಪಿ ಉಚ್ಚಾಟಿತ ಸದಸ್ಯರು 03
. ಜೆಡಿಎಸ್ 18
. ಕಲ್ಯಾಣ ರಾಜ್ಯ ಪ್ರಗತಿ ಪಕ್ಷ 01
. ಸರ್ವೋದಯ ಕರ್ನಾಟಕ ಪಕ್ಷ 01
. ಪಕ್ಷೇತರರು- 02
ಖಾಲಿ ಸ್ಥಾನಗಳು- 02 (ವಿನಯ ಕುಲಕರ್ಣಿ ಅನರ್ಹತೆ, ಡಿ. ಸುಧಾಕರ್ ನಿಧನ)

ಡಿಕೆಶಿ ಸಂಪುಟದಲ್ಲಿ ಮುಗಿಯದ ಕ್ಯಾತೆ: ಸ್ಪಷ್ಟತೆ ಸಿಗುವವರೆಗೆ ಸ್ವೀಕರಿಸಲ್ಲ ಖಾತೆ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ನಗರಾಭಿವೃದ್ದಿ ಇಲಾಖೆಯಲ್ಲಿ ಬಿಡಿಎ ಮತ್ತು ಬಿಎಂಆರ್‌ಡಿಎ ಇಲಾಖೆಗಳನ್ನು ಸೇರಿಸದೆ ಇದ್ದರೆ ಅಧಿಕಾರ ಸ್ವೀಕಾರ ಮಾಡುವುದಿಲ್ಲ ಎಂದು ಸಚಿವ ಕೃಷ್ಣ ಬೈರೇಗೌಡ ಪಟ್ಟು ಹಿಡಿದಿದ್ದಾರೆ. ಈ ಸಂಬಂಧ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರ ಬಳಿ ನಮ್ಮ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ವರದಿಯಾಗಿದೆ.

ಬೆಂಗಳೂರು ಅಭಿವೃದ್ದಿ ಇಲಾಖೆಗೆ ರಾಮಲಿಂಗಾ ರೆಡ್ಡಿ ಆಕಾಂಕ್ಷಿಯಾಗಿದ್ದರು. ಆದರೆ ಕೃಷ್ಣ ಬೈರೇಗೌಡ ಅವರಿಗೆ ನೀಡಲಾಗಿತ್ತು. ಇದೀಗ ಖಾತೆಯಲ್ಲಿ ಬಿಡಿಎ ಮತ್ತು ಬಿಎಂಆರ್‌ಡಿಎ ಇಲ್ಲದೆ ಇರುವುದು ಬೈರೇಗೌಡ ಅಸಮಾಧಾನಕ್ಕೆ ಕಾರಣವಾಗಿದೆ. ಹೀಗಾಗಿ ಕೃಷ್ಣ ಬೈರೇಗೌಡ ಅಧಿಕಾರ ಸ್ವೀಕರಿಸಲು ನಿರಾಕರಿಸಿದ್ದಾರೆ. ಬೆಂಗಳೂರು ನಗರಾಭಿವೃದ್ಧಿ ಖಾತೆಯು ಬಿಡಿಎ ಮತ್ತು ಬಿಎಂಆರ್‌ಡಿಎ ಇಲ್ಲದೆ ಪರಿಪೂರ್ಣವಲ್ಲ ಎಂಬುವುದು ಅವರ ವಾದವಾಗಿದೆ. ಈ ಎರಡನ್ನೂ ಹೊರತುಪಡಿಸಿದರೆ ನನಗೆ ನೀಡಿದ ಖಾತೆ ಕೇವಲ ಕಾರ್ಪೊರೇಷನ್ ವಿಷಯಗಳಿಗೆ ಸೀಮಿತವಾಗುತ್ತದೆ ಎಂದು ಹೇಳಿಕೊಂಡಿದ್ದಾರೆ. ಖಾತೆಯಲ್ಲಿ ಇವರೆಡು ಪ್ರಾಧಿಕಾರವನ್ನು ಸೇರಿಸದೆ ಇದ್ದರೆ ನಾನು ಅಧಿಕಾರ ಸ್ವೀಕಾರ ಮಾಡುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಹೈಕಮಾಂಡ್ ಈ ಬಗ್ಗೆ ಸ್ಪಷ್ಟನೆ ನೀಡಬೇಕು ಎಂದು ಅವರು ಪಟ್ಟು ಹಿಡಿದಿದ್ದಾರೆ. ಒಂದು ವೇಳೆ ಇದು ಸಾಧ್ಯವಾಗದೆ ಇದ್ದರೆ ಗೊಂದಲ ಬಗೆಹರಿಯುವ ವರೆಗೂ ನಾನು ಇಲಾಖೆಯ ಜವಾಬ್ದಾರಿಯನ್ನು ವಹಿಸುವುದಿಲ್ಲ ಎಂದು ಅವರು ತಿಳಿಸಿದ್ದಾರೆ.ಹಂತ ಹಂತವಾಗಿ ಬರೋಬ್ಬರಿ 35 ಲಕ್ಷ ರೂ ಹೂಡಿಕೆ ಮಾಡಿದ್ದಾರೆ.

ಸಂವಾದಗಳಿಗಿಂತ ವಾಗ್ವಾದಗಳೇ ಜಾಸ್ತಿ: ಸಾಹಿತಿ ಬರಗೂರು ರಾಮಚಂದ್ರಪ್ಪ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಇಂದಿನ ದಿನಗಳಲ್ಲಿ ಸಂವಾದಗಳಿಗಿಂತ ವಾಗ್ವಾದಗಳೇ ಜಾಸ್ತಿಯಾಗುತ್ತಿವೆ. ವಾಗ್ವಾದಗಳು ಬೀದಿ ಜಗಳವಾಗಬಾರದು. ಬದಲಿಗೆ ಅವು ವೈಚಾರಿಕ ಮುಖಾಮುಖಿಯಾಗ ಬೇಕು ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಬೆಂಗಳೂರು ಆರ್ಟ್ ಫೌಂಡೇಷನ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಡಾ.ಅ.ಲ.ನರಸಿಂಹನ್ನತ್ತು ಎನ್.ಮರಿಶಾಮಾಚಾರ್ ಕುರಿತು ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿ, ವಾಗ್ವಾದಗಳು ಸಂವಾದಗಳಾಗಿ ರೂಪಾಂತರಗೊಳ್ಳ ಬೇಕಾದ ಕಾಲಘಟ್ಟದಲ್ಲಿದ್ದೇವೆ ಎಂದರು. ಕಲೆಯು ಕೇವಲ ಒಂದು ನಿರ್ದಿಷ್ಟ ಕಾಲಕ್ಕೆ ಸೀಮಿತವಾಗಬಾರದು, ಅದುಕಾಲದೊಳಗಿದ್ದುಕೊಂಡೇ ಕಾಲವನ್ನು ಮೀರಿ ನಿಲ್ಲುವ ಶಕ್ತಿಯನ್ನು ಹೊಂದಿರ ಬೇಕು. ಕಲೆ ಎನ್ನುವುದು ಎರಡು ಕಾಲಗಳನಡುವೆ ನಡೆಯುವ ಒಂದು ಕಾಲಾನು ಸಂಧಾನ. ಇದರ ಮುಖಾಂತರವೇ ಅಭಿವ್ಯಕ್ತಿ ಸಾಧಿಸಲು ಸಾಧ್ಯ ಎಂದರು.

ನರಸಿಂಹನ್ ಅವರು ಚಿತ್ರಕಲೆಯ ಇತಿಹಾಸವನ್ನು ಪುಸ್ತಕಗಳ ಮೂಲಕ ಪರಿಚಯಿಸಿದರೆ, ಮರಿಶಾಮಾಚಾರ್ ಅವರು ಚಿತ್ರಕಲಾವಿದರಾಗಿ ಹಾಗೂ ಲೇಖಕರಾಗಿ ಇತಿಹಾಸ ಕಟ್ಟುವ ಕೆಲಸ ಮಾಡಿದ್ದಾರೆ ಎಂದರು.

ಇತಿಹಾಸ ಪ್ರಜ್ಞೆ ಇಲ್ಲದಿದ್ದರೆ ಸಂಸ್ಕೃತಿ, ಕಲೆ ಹಾಗೂ ಸಾಹಿತ್ಯ ತನ್ನ ಚಲನಶೀಲತೆಯನ್ನು ಕಳೆದುಕೊಳ್ಳುತ್ತವೆ.ಭೂತಕಾಲ, ವರ್ತಮಾನ ಮತ್ತು ಭವಿಷ್ಯತ್ತಿನ ನಡುವೆ ಯಾವುದೇ ಕಂದಕ ಗಳು ಇರಬಾರದು. ಇಂದಿನ ದಿನಗಳಲ್ಲಿ ಸಮಾಜದಲ್ಲಿ ಕಟ್ಟುವ ಕೆಲಸಗಳಿಗಿಂತ ಕೆಡವುವ ಕೆಲಸಗಳೇ ಹೆಚ್ಚಾಗುತ್ತಿರುವುದು ವಿಷಾದನೀಯ ಎಂದು ಬೇಸರ ವ್ಯಕ್ತಪಡಿಸಿದರು. ಕರ್ನಾಟಕ ಲಲಿತ ಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಸಿ.ಚಂದ್ರಶೇಖರ್ ಮಾತನಾಡಿ, ಹಿಂದಿನ ಕಾಲದಲ್ಲಿ ಕಲೆಯ ಆಳವನ್ನು ಅರಿತು ಬರೆಯುವ ಪತ್ರಿಕಾಬರಹಗಾರರ ಸಂಖ್ಯೆ ವಿರಳವಾಗಿತ್ತು. ಬಿ.ವಿ.ಕೆ.ಶಾಸ್ತ್ರಿ (ಮುರಳಿ), ಎಸ್.ಎ.ಚಂದ್ರಶೇಖರ್ ಹಾಗೂ ಎಸ್.ಎನ್.ಸುರೇಶ್ ಅವರಂತಹ ಬೆರಳಣಿಕೆ ಯಷ್ಟು ಜನ ಮಾತ್ರ ಕಲೆಯ ಕುರಿತು ಗಂಭೀರವಾಗಿ ಬರೆಯುತ್ತಿದ್ದರು. ಉಳಿದಂತೆ ಬಹುತೇಕರು ಕೇವಲ ಪತ್ರಿಕೆಗಳ ಮುಖಪುಟ ಅಲಂಕರಿಸಲು ಹಾಗೂ ವಾಣಿಜ್ಯ ಉದ್ದೇಶದ ಮಾರಾಟದ ವಸ್ತುವಾಗಿ ಕಲೆಯನ್ನು ಬಳಸಿಕೊಂಡರೇ ಹೊರತು, ಕಲೆಯ ಆಳವಾದ ಅಧ್ಯಯನ ನಡೆಸಿದವರು ಬಹಳ ಕಡಿಮೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕರ್ನಾಟಕ ಲಲಿತ ಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಎಂ.ಎಸ್.ಮೂರ್ತಿ, ಬೆಂಗಳೂರು ಆರ್ಟ್ ಫೌಂಡೇಷನ್ ಕಾರ್ಯದರ್ಶಿ ಓ.ವೆಂಕಟೇಶ್ ಸೇರಿ ಮತ್ತಿತರರು ಉಪಸ್ಥಿತರಿದ್ದರು.

ಗಾಂಧೀಜಿ ಹತ್ಯೆ ಪ್ರಕರಣ: ಸಂಸದೀಯ ಸಮಿತಿ ರಚನೆಗೆ ಕೋರಿದ್ದ ಅರ್ಜಿ ವಜಾ: ಅರ್ಜಿದಾರರಿಗೆ 10 ಸಾವಿರ ದಂಡ

• ಉದಯವಾಹಿನಿ, ಬೆಂಗಳೂರು

ರಾಷ್ಟ್ರಪಿತ ಮಹಾತ್ಮಾ ಗಾಂಧಿ ಅವರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು 1965ರವರೆಗಿನ ಸುಮಾರು 17 ವರ್ಷಗಳ ಕಾಲ ನ್ಯಾಯಾಂಗ ವಿಚಾರಣಾ ಆಯೋಗವನ್ನು ಯಾವ ಕಾರಣಕ್ಕೆ ರಚನೆ ಮಾಡಿಲ್ಲ ಎಂಬುದರ ಬಗ್ಗೆ ತನಿಖೆ ನಡೆಸಲು ಜಂಟಿ ಸಂಸದೀಯ ಸಮಿತಿ ರಚನೆ ಮಾಡುವಂತೆ ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ವಜಾಗೊಳಿಸಿರುವ ಹೈಕೋರ್ಟ್, ಅರ್ಜಿದಾರರಿಗೆ 10 ಸಾವಿರ ರೂ. ದಂಡ ವಿಧಿಸಿ ಆದೇಶಿಸಿದೆ.

ಈ ಸಂಬಂಧ ಜಾಗೃತ ಕರ್ನಾಟಕ ಮತ್ತು ಜಾಗೃತ ಭಾರತ ಸಂಘಟನೆಯ ಪ್ರತಿನಿಧಿ ಕೆ.ಎನ್.ಮಂಜುನಾಥ್ ಎಂಬವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಮತ್ತು ನ್ಯಾಯಮೂರ್ತಿ ಕೆ.ಎಸ್.ಹೇಮಲೇಖ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ.

ವಿಚಾರಣೆ ವೇಳೆ ಅರ್ಜಿಯನ್ನು ಪರಿಶೀಲಿಸಿದ ನ್ಯಾಯಪೀಠ, ಈ ಹಿಂದೆಯೂ ಇದೇ ಮನವಿ ಮಾಡಿ ಅರ್ಜಿಯನ್ನು ಸಲ್ಲಿಸಲಾಗಿತ್ತು. ಇದೀಗ ಮತ್ತೆ ಅದೇ ಮನವಿಗಳೊಂದಿಗೆ ಅರ್ಜಿ ಸಲ್ಲಿಸಿದ್ದೀರಿ. ಅರ್ಜಿಯಲ್ಲಿ ಯಾವುದೇ ರೀತಿಯ ಸಾರ್ವಜನಿಕ ಹಿತಾಸಕ್ತಿ ಅಡಗಿಲ್ಲ. ನಿಮ್ಮ ನಡೆ ನ್ಯಾಯಾಂಗ ವ್ಯವಸ್ಥೆಯ ಅಮೂಲ್ಯ ಸಮಯವನ್ನು ವ್ಯರ್ಥಮಾಡುವ ಪ್ರಕ್ರಿಯೆಯಾಗಿದೆ ಎಂದು ತಿಳಿಸಿತು. ಇದಕ್ಕೆ ಅರ್ಜಿದಾರರು, ಪ್ರಕರಣದಲ್ಲಿ ರಾಷ್ಟ್ರೀಯ ಹಿತಾಸಕ್ತಿ ಅಡಗಿದೆ. ಆದ್ದರಿಂದ ನಮ್ಮ ವಾದವನ್ನು ಆಲಿಸಬೇಕು ಎಂದು ಪದೇ ಪದೇ ಮನವಿ ಮಾಡಿದರು. ಮನವಿ ತಿರಸ್ಕರಿಸಿದ ನ್ಯಾಯಪೀಠ, ಅರ್ಜಿ ವಜಾಗೊಳಿಸಿ, ದಂಡ ವಿಧಿಸಿ ಆದೇಶಿಸಿತು. ಅಲ್ಲದೇ, ಮುಂದಿನ ಎರಡು ವಾರಗಳಲ್ಲಿ ದಂಡದ ಮೊತ್ತವನ್ನು ರಾಜ್ಯ ಕಾನೂನು ಸೇವಾ ಪ್ರಾಧಿಕಾರಕ್ಕೆ ಸಲ್ಲಿಸಬೇಕು ಎಂದು ಸೂಚನೆ ನೀಡಿತು.

ಪ್ರಕರಣದ ಹಿನ್ನೆಲೆ: ಗಾಂಧೀಜಿ ಅವರ ಹತ್ಯೆಗೆ ಸಂಬಂಧಿಸಿದಂತೆ 1947ರಿಂದ 1965ರವರೆಗೂ ಅಂದರೆ 17 ವರ್ಷಗಳ ಕಾಲ ನ್ಯಾಯಾಂಗ ವಿಚಾರಣಾ ಆಯೋಗವನ್ನು ರಚನೆ ಮಾಡದಿರಲು ಕಾರಣವೇನು ಎಂಬುದನ್ನು ತಿಳಿಯಲು ಜಂಟಿ ಸಂಸದೀಯ ಸಮಿತಿ ರಚನೆ ಮಾಡಬೇಕು.

ಅಲ್ಲದೇ, 17 ವರ್ಷಗಳ ಬಳಿಕ ಅಂದರೆ 1965ರಲ್ಲಿ ನ್ಯಾಯಾಂಗ ವಿಚಾರಣೆಯನ್ನು ಪ್ರಾರಂಭಿಸಿದ ಅಂಶಗಳ ಕುರಿತು ತನಿಖೆ ನಡೆಸಬೇಕು ಎಂದು ಕೋರಲಾಗಿದೆ. ಇದೀಗ ಮತ್ತೆ ಅದೇ ಮನವಿಗಳೊಂದಿಗೆ ಅರ್ಜಿ ಸಲ್ಲಿಸಿದ್ದೀರಿ. ಅರ್ಜಿಯನ್ನು ಪರಿಶೀಲಿಸಿದ ನ್ಯಾಯಪೀಠ, ಅಲ್ಲದೆ, 1947ರ ಮೇ 8ರಂದು ಬ್ರಿಟಿಷ್ ವೈಸರಾಯ್‌ಗೆ ಬರೆದ ಪತ್ರದಲ್ಲಿ ಭಾರತದ ವಿಭಜನೆಯನ್ನು ತಡೆಯಲು ಶಸ್ತ್ರಸಜ್ಜಿತ ಸಂಘರ್ಷವನ್ನೂ ಒಂದು ಆಯ್ಕೆಯಾಗಿ ಗಾಂಧೀಜಿ ಪರಿಗಣಿಸಿದ್ದರೆಂಬ ಉಲ್ಲೇಖದ ಹಿನ್ನೆಲೆಯನ್ನು ಪರಿಶೀಲಿಸಬೇಕು ಎಂದು ಅರ್ಜಿಯಲ್ಲಿ ಆಗ್ರಹಿಸಲಾಗಿದೆ.

'ವೈಯಕ್ತಿಕ ದ್ವೇಷಕ್ಕೆ ಕ್ರಿಮಿನಲ್ ಮೊಕದ್ದಮೆ ಅಸ್ತ್ರ': ಮೈಕ್ರೋಲೈಟ್ ಪೈಲಟ್ ಆಡ್ರಿ ಮಾಬೆನ್ ವಿರುದ್ಧದ ಪ್ರಕರಣ ರದ್ದು

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

ವೈಯಕ್ತಿಕ ಮತ್ತು ವೃತ್ತಿಪರ ದ್ವೇಷದಿಂದ ದಾಖಲಿಸುವ ಕ್ರಿಮಿನಲ್ ಮೊಕದ್ದಮೆ ಕಾನೂನು ಪ್ರಕ್ರಿಯೆಯ ದುರುಪಯೋಗ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ದೇಶದ ಖ್ಯಾತ ಮಹಿಳಾ ಪೈಲಟ್ ಆಡ್ರಿ ದೀಪಿಕಾ ಮಾಬೆನ್ ಅವರ ವಿರುದ್ಧ ವಂಚನೆ ಹಾಗೂ ಸಹಿ ನಕಲು ಮಾಡಿ ಲೈಸೆನ್ಸ್ ನವೀಕರಣ ಮಾಡಿಕೊಂಡ ಆರೋಪದ ಮೇಲೆ ದಾಖಲಾಗಿದ್ದ ಪ್ರಕರಣವನ್ನು ರದ್ದುಪಡಿಸಿ ಆದೇಶಿಸಿದೆ. ಆದರೆ, ಲೈಸೆನ್ಸ್ ನವೀಕರಣ ಕುರಿತಂತೆ ತಾಂತ್ರಿಕ ಅಂಶಗಳ ಕುರಿತಯ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ(ಡಿಜಿಸಿಎ) ನಡೆಸುತ್ತಿರುವ ಸ್ವತಂತ್ರ್ಯ ತನಿಖೆಗೆ ಅಡ್ಡಿಯಿಲ್ಲ ಎಂದು ಕೋರ್ಟ್ ತಿಳಿಸಿದೆ.

ತಮ್ಮ ವಿರುದ್ಧದ ಪ್ರಕರಣ ರದ್ದು ಕೋರಿ ಪೈಲಟ್ ಆಡ್ರಿ ದೀಪಿಕಾ ಮಾಬೆನ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿತು.ದೂರುದಾರರ ಆರೋಪದ ಪ್ರಕಾರ, ಘಟನೆ 2014ರಲ್ಲಿ ನಡೆದಿದೆ. ಆದರೂ ನಾಲ್ಕು ವರ್ಷಗಳ ಬಳಿಕ ಅಂದರೆ 2018ರಲ್ಲಿ ಬೆಳಕಿಗೆ ಬಂದಿದ್ದು, ವಿಳಂಬದ ನಂತರ ದಾಖಲಾದ ಈ ದೂರು ಕೇವಲ ಸೇಡು ತೀರಿಸಿಕೊಳ್ಳುವ ಉದ್ದೇಶದ್ದಾಗಿದೆ ಎಂದು ಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

ಅಲ್ಲದೆ, ಲೈಸೆನ್ಸ್ ನವೀಕರಣ ನಡೆದಿದ್ದು 2014ರಲ್ಲಿ, ಆದರೆ 2017-18ರಲ್ಲಿ ದೂರು ನೀಡಿದ್ದಾರೆ. ಮನೆಯ ಕಪಾಟು ಸ್ವಚ್ಛಗೊಳಿಸುವಾಗ ನಕಲಿ ಸಹಿ ಇರುವುದು ಕಣ್ಣಿಗೆ ಬಿತ್ತು ಎಂಬ ದೂರುದಾರೆ ಎಂ.ಸಿ.ವಿನಿತಾ ಅವರ ಪರ ವಕೀಲರ ವಾದವನ್ನು ತಳ್ಳಿಹಾಕಿರುವ ನ್ಯಾಯಪೀಠ, ಇಬ್ಬರೂ ಒಂದೇ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರೂ 4 ವರ್ಷ ಸುಮ್ಮನಿದ್ದು, ಆಡ್ರಿ ಅವರು ಜಾಗತಿಕ ಹಾರಾಟದ ಸಾಹಸಯಾತ್ರೆಗೆ ಸಜ್ಜಾಗುತ್ತಿದ್ದಾಗ ತೇಜೋವಧೆ ಮಾಡಲು ದೂರು ನೀಡಲಾಗಿದೆ ಹೇಳಿದೆ. ಸುಪ್ರೀಂ ಕೋರ್ಟ್‌ನ ವಿವಿಧ ಆದೇಶಗಳನ್ನು ಉಲ್ಲೇಖಿಸಿರುವ ನ್ಯಾಯಪೀಠ, ಯಾವುದೇ ಸೂಕ್ತ ಕಾರಣವಿಲ್ಲದ ಸುದೀರ್ಘ ವಿಳಂಬದ ಪ್ರಕರಣಗಳನ್ನು ರದ್ದುಗೊಳಿಸಬೇಕು. ಕ್ರಿಮಿನಲ್ ನ್ಯಾಯಾಂಗ ವ್ಯವಸ್ಥೆಯನ್ನು ವೈಯಕ್ತಿಕ ಸೇಡು ತೀರಿಸಿಕೊಳ್ಳುವ ವೇದಿಕೆಯನ್ನಾಗಿ ಬಳಸಲು ಅವಕಾಶವಿಲ್ಲ ಎಂದು ತನ್ನ ಆದೇಶದಲ್ಲಿ ತಿಳಿಸಿದೆ.

ನಕಲಿ ಸಹಿಯ ಕೈಬರಹಕ್ಕೆ ಸಂಬಂಧಿಸಿದಂತೆ ವಿಧಿವಿಜ್ಞಾನ ಪ್ರಯೋಗಾಲಯದ ವರದಿಯಲ್ಲಿ ಸಹಿ ತಾಳೆಯಾಗುತ್ತಿಲ್ಲ ಎಂಬ ಕಾರಣಕ್ಕೆ ಕ್ರಿಮಿನಲ್ ವಿಚಾರಣೆ ಮುಂದುವರೆಸಲು ಸಾಧ್ಯವಿಲ್ಲ.

ಭಾರತೀಯ ಸಾಕ್ಷ್ಯ ಅಧಿನಿಯದ ಪ್ರಕಾರ ತಜ್ಞರ ವರದಿ ಕೇವಲ ಪೂರಕ ಪುರಾವೆಯಾಗಿದೆ.

ಕ್ಯಾನ್ಸರ್ ಮುಕ್ತ ಸಮಾಜಕ್ಕಾಗಿ ಜಾಗೃತಿ ಓಟ

• ಉದಯವಾಹಿನಿ, ಬೆಂಗಳೂರು

ನಗರದ ಕಂಠೀರವ ಕ್ರೀಡಾಂಗಣದ ಹೊರಾಂಗಣದಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ಆಯೋಜಿಸಿದ್ದ ಕ್ಯಾನ್ಸರ್ ಮುಕ್ತ ಸಮಾಜಕ್ಕಾಗಿ ಜಾಗೃತಿ ಓಟದಲ್ಲಿ ನೂರಾರು ಮಂದಿ ಪಾಲ್ಗೊಂಡರು.

ಕ್ರೀಡಾಂಗಣದಿಂದ ಆರಂಭವಾದ ಓಟವು ಕಸ್ತೂರಬಾ ರಸ್ತೆ, ಕಬ್ಬನ್‌ರಸ್ತೆ, ಜಿಪಿಒ, ಹೈಕೋರ್ಟ್, ಯುಬಿ ಸಿಟಿ ಮಾರ್ಗದಲ್ಲಿ ಸಾಗಿತು. 2 ಕಿ.ಮೀ, 5 ಕಿ.ಮೀ ಮತ್ತು 10 ಕಿ.ಮೀ ಓಟದಲ್ಲಿ ವಿದ್ಯಾರ್ಥಿಗಳು, ನಾಗರಿಕರು ಸ್ಪರ್ಧಿಸಿದ್ದರು. ಗೆದ್ದವರಿಗೆ ಬಹುಮಾನ, ಪ್ರಮಾಣ ಪತ್ರ ನೀಡಲಾಯಿತು. ಓಟಕ್ಕೆ ಚಾಲನೆ ನೀಡಿದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲಾಭಿವೃದ್ಧಿ ಸಚಿವ ಡಾ.ಶರಣ ಪ್ರಕಾಶ ಪಾಟೀಲ, 'ರಾಜ್ಯದಲ್ಲಿ ಕ್ಯಾನ್ಸರ್ ನಿಯಂತ್ರಣಕ್ಕೆ ತಪಾಸಣಾ ಶಿಬಿರಗಳನ್ನು ನಡೆಸಲಾಗುತ್ತಿದೆ. ಜನರು ಆರೋಗ್ಯಕರ ಜೀವನ ಶೈಲಿ ಅಳವಡಿಸಿಕೊಳ್ಳಬೇಕು. ನಾಗರಿಕರಲ್ಲಿ ಅರಿವು ಮೂಡಿಸಲು ಪ್ರತಿ ಜಿಲ್ಲೆಗಳಲ್ಲೂ ಜಾಗೃತಿ ಓಟಗಳನ್ನು ನಡೆಸಲಾಗುತ್ತಿದೆ. ಆರೋಗ್ಯಪೂರ್ಣ ಸಮಾಜ ನಿರ್ಮಾಣ ಇಲಾಖೆಯ ಗುರಿಯಾಗಿದೆ ಎಂದರು.

ಸಂಸ್ಥೆಯ ನಿರ್ದೇಶಕ ಡಾ.ಟಿ.ನವೀನ್ ಮಾತನಾಡಿ, 'ಕ್ಯಾನ್ಸರ್ ಬಂದರೆ ರೋಗಿಯ ಜೊತೆ ಇಡೀ ಕುಟುಂಬ ಮಾನಸಿಕವಾಗಿ ಕುಗ್ಗಿ ಹೋಗುತ್ತದೆ.

ಬೆನ್ನಿಗಾನಹಳ್ಳಿಯಲ್ಲಿ ಉಪನಗರ ಸಾರಿಗೆ ಯೋಜನೆಯ ಮೆಟ್ರೊ ಡಬಲ್ ಡೆಕರ್ ನಿರ್ಮಾಣ

• ಉದಯವಾಹಿನಿ, ಬೆಂಗಳೂರು

ಬೆನ್ನಿಗಾನಹಳ್ಳಿಯಲ್ಲಿ ಉಪನಗರ ಸಾರಿಗೆ ಯೋಜನೆಯ (ಬಿಎಸ್‌ಪಿ) ರೈಲು ಮತ್ತು ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತದ (ಬಿಎಂಆರ್‌ಸಿಎಲ್) ರೈಲು ಒಟ್ಟಿಗೆ ಸಂಚರಿಸಲು ಡಬಲ್ ಡೆಕರ್ (ರೈಲು ಮೇಲೆ ರೈಲು) ನಿರ್ಮಾಣಗೊಳ್ಳಲಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ 'ನಮ್ಮ ಮೆಟ್ರೊ' ನೀಲಿ ಮಾರ್ಗ ಮತ್ತು ಬೆಂಗಳೂರು ಉಪನಗರ ರೈಲು ಯೋಜನೆಯಡಿ ನಿರ್ಮಾಣಗೊಳ್ಳುತ್ತಿರುವ ಉಪನಗರ ಸಾರಿಗೆ ಯೋಜನೆಯ ಕಾರಿಡಾರ್-4 ರಾಜಾನುಕುಂಟೆ-ಹೀಲಲಿಗೆ ಕನಕ ಮಾರ್ಗವು ಬೆನ್ನಿಗಾನಹಳ್ಳಿಯಲ್ಲಿ ಅರ್ಧ ಕಿಲೋಮೀಟರ್ ಡಬಲ್ ಡೆಕರ್ ಆಗಿರಲಿದೆ. ನೆಲಮಟ್ಟದಲ್ಲಿ ರಸ್ತೆ ಇರಲಿದ್ದು, ಡಬಲ್ ಡೆಕರ್‌ನ ಮೊದಲ ಮೇಲ್ಸೇತುವೆಯಲ್ಲಿ ಕೆ-ರೈಡ್ ನಿರ್ಮಿಸುತ್ತಿರುವ ಬಿಎಸ್‌ಟಿಪಿ ರೈಲು ಸಂಚರಿಸಲಿದೆ. ಅದರ ಮೇಲೆ ನಿರ್ಮಾಣಗೊಳ್ಳಲಿರುವ ಸೇತುವೆಯಲ್ಲಿ ಮೆಟ್ರೊ ರೈಲು ಸಂಚರಿಸಲಿದೆ. ವಯಾಡಕ್ಟ್ (ಸಿಮೆಂಟ್ ತೊಲೆ) ಅನ್ನು ಬೆನ್ನಿಗಾನಹಳ್ಳಿ ಮೇಲ್ಸೇತುವೆ ಬಳಿ 'ನಮ್ಮ ಮೆಟ್ರೊ ನೀಲಿ ಮಾರ್ಗದ ವಯಾಡಕ್ಟ್‌ನ ಕೆಳಗೆ ನೇರವಾಗಿ ಇರಿಸಲಾಗಿದೆ.

ಬೆಂಗಳೂರು ಏರ್‌ಪೋರ್ಟ್‌ನಲ್ಲಿ 5.87 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ

• ಉದಯವಾಹಿನಿ, ಬೆಂಗಳೂರು

ಇಲ್ಲಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 5.87 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿಯಾಗಿದೆ. ಬೆಳ್ಳಂಬೆಳಿಗ್ಗೆ ವಿಮಾನ ನಿಲ್ದಾಣದ ಅಧಿಕಾರಿಗಳು ಭರ್ಜರಿ ದಾಳಿ ನಡೆಸಿದ್ದಾರೆ. ಬ್ಯಾಂಕಾಕ್‌ನಿಂದ ಬೆಂಗಳೂರಿಗೆ ಬಂದ ಪ್ರಯಾಣಿಕರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಗಾಂಜಾ ಸಾಗಿಸುತ್ತಿರುವುದು ಬೆಳಕಿಗೆ ಬಂದಿದೆ. ಈ ವೇಳೆ ಒಟ್ಟು 5.87 ಕೋಟಿ ರೂ. ಮೌಲ್ಯದ 16 ಕೆಜಿ 880 ಗ್ರಾಂ ಮಾದಕ ವಸ್ತುವನ್ನು ಜಪ್ತಿ ಮಾಡಿದ್ದಾರೆ. ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಕೋಟ್ಯಂತರ ರೂ. ಮೌಲ್ಯದ ಹೈಡ್ರೋಫೋನಿಕ್ ಗಾಂಜಾ ವಶಪಡಿಸಿಕೊಂಡಿದ್ದು, ಇಬ್ಬರು ಪ್ರಯಾಣಿಕರ ವಿರುದ್ಧ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಉದಯವಾಹಿನಿ ಚಿತ್ರ

ಬಿಡಿಎ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವುದು ತರವಲ್ಲ

• ಉದಯವಾಹಿನಿ,ಬೆಂಗಳೂರು

ಬೆಂಗಳೂರಿನಲ್ಲಿ ಹೊಸ ಬಡಾವಣೆಗಳನ್ನು ನಿರ್ಮಿಸಿ, ಬೆಂಗಳೂರು ನಗರವನ್ನು ವಿಸ್ತರಿಸುವ ಯೋಜನೆ ಹೊಂದಿರುವ ಬಿಡಿಎ, ಬಿಎಸ್ ಕೆ ಹಂತ, ಅರ್ಕಾವತಿ ಮತ್ತು ನಾಡಪ್ರಭು ಕೆಂಪೇಗೌಡ ಬಡಾವಣೆ ಅಭಿವೃದ್ಧಿ ಯೋಜನೆಗಳಲ್ಲಿ ದಯನೀಯವಾಗಿ ವಿಫಲವಾಗಿ, ಕೆಟ್ಟ ಹೆಸರು ಸಂಪಾದಿಸಿದೆ ಎಂದು ಶಾಸಕ ಸುರೇಶ್ ಕುಮಾರ್ ಹೇಳಿದ್ದಾರೆ.

ಸಾಮಾಜಿಕ ಜಾಲತಾಣ ಫೇಸ್ ಬುಕ್‌ನಲ್ಲಿ ಅವರು ಪತ್ರ ಬರೆದಿದ್ದು, ಕರ್ನಾಟಕ ಹೈಕೋರ್ಟ್ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ, 2016 (ರೇರಾ) ವನ್ನು ಬಿಡಿಎ ವಸತಿ ಲೇಔಟ್‌ಗಳಿಗೆ ಅದರಲ್ಲೂ ವಿಶೇಷವಾಗಿ ಎನ್.ಪಿಕೆಎಲ್‌ಗೆ ಅನ್ವಯಿಸದಂತೆ ತಡೆಯಾಜ್ಞೆ ನೀಡಿದೆ ಎಂದು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಈ ಸುದ್ದಿ ಓದಿದಾಗ ಆಘಾತ ಎನಿಸಿತು.

ತಾಂತ್ರಿಕ ಅಂಶಗಳಿಗಿಂತ ಹೆಚ್ಚಾಗಿ ಪ್ರತಿ ಬಾಧ್ಯಸ್ಥರೂ ಗ್ರಾಹಕರನ್ನು ರಕ್ಷಿಸಬೇಕು ಎಂಬ ಮನೋಭಾವದಿಂದ ರೇರಾ ಕಾಯ್ದೆಯನ್ನು ತರಲಾಗಿದ್ದು, ಇದೇ ದೃಷ್ಟಿಕೋನದಲ್ಲಿಯೇ ಘನವೆತ್ತ ಉಚ್ಚ ನ್ಯಾಯಾಲಯ ನೋಡಬೇಕಾಗಿತ್ತು ಎಂದಿದ್ದಾರೆ. ರೇರಾ ವ್ಯಾಪ್ತಿಯಿಂದ ತನಗೆ ವಿನಾಯಿತಿ ನೀಡುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕೇಳಿಕೊಂಡಿದೆ. ಇದು ನಿಜಕ್ಕೂ ಆಘಾತಕಾರಿ ವಿಚಾರ. ಬಿಡಿಎ ಒಂದು ಸರ್ಕಾರಿ ಸಂಸ್ಥೆಯಾಗಿದ್ದು, ಖಾಸಗಿ ಡೆವಲಪರ್‌ಗಳಂತೆ ಸ್ವತಃ ನಾಗರಿಕ ವಿರೋಧಿ ಮತ್ತು ಗ್ರಾಹಕ ವಿರೋಧಿ ಎಂದು ಪರಿಗಣಿಸುವುದು ಸೂಕ್ತವಲ್ಲ ಎಂದು ಕೇಳಿಕೊಂಡಿದೆ. ಬಿಡಿಎ ತನ್ನ ಕಾರ್ಯಕ್ಷಮತೆಯ ಲೋಪಕ್ಕೆ ನೆಪ ಹುಡುಕುವ ಬದಲು ಹಂಚಿಕೆದಾರರ ಜವಾಬ್ದಾರಿಗಳನ್ನು ಪೂರೈಸಬೇಕು ಎಂದು ತಿಳಿಸಿದ್ದಾರೆ. ಇದು ನಾಗರಿಕರು, ರಿಯಲ್ ಎಸ್ಟೇಟ್ ನಿಯಂತ್ರಕರು ಮತ್ತು ಕಾನೂನು ನಿರೂಪಕರು ಇಬ್ಬರಿಗೂ ಒಂದು ನಿರ್ದಿಷ್ಟ ಮಟ್ಟದ ಸ್ಪಷ್ಟತೆಯನ್ನು ನೀಡುತ್ತದೆ. ಬೆಂಗಳೂರಿನಲ್ಲಿ ಹೊಸ ಬಡಾವಣೆಗಳನ್ನು ನಿರ್ಮಿಸಿ, ಬೆಂಗಳೂರು ನಗರವನ್ನು ವಿಸ್ತರಿಸುವ ಯೋಜನೆ ಹೊಂದಿರುವ ಬಿಡಿಎ, ಬಿಎಸ್ ಕೆ ಹಂತ, ಅರ್ಕಾವತಿ ಮತ್ತು ನಾಡಪ್ರಭು ಕೆಂಪೇಗೌಡ ಬಡಾವಣೆ ಅಭಿವೃದ್ಧಿ ಯೋಜನೆಗಳಲ್ಲಿ ದಯನೀಯವಾಗಿ ವಿಫಲವಾಗಿ, ಕೆಟ್ಟ ಹೆಸರು ಸಂಪಾದಿಸಿದೆ ಎಂದು ಟೀಕಿಸಿದ್ದಾರೆ. ಭಾರತ ಸರ್ಕಾರದ ಒಡೆತನದ ಬಿಎಸ್‌ಎನ್‌ಎಲ್ -ಟ್ರಾಯ್ ವ್ಯಾಪ್ತಿಗೆ ಒಳಪಡುತ್ತದೆ. ಅದೇ ರೀತಿ ಸಾರ್ವಜನಿಕ ವಲಯದ ವಿಮಾ ಕಂಪನಿಗಳು (ಯುನೈಟೆಡ್, ಓರಿಯಂಟಲ್, ಐಆರ್.ಡಿಎಐ, ನ್ಯೂ ಇಂಡಿಯಾ) ನಿಯಂತ್ರಕರಿಂದ ನಿಯಂತ್ರಿಸಲ್ಪಡುತ್ತವೆ. ಆದರೆ ಬಿಡಿಎ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಮತ್ತು ರೇರಾ ವ್ಯಾಪ್ತಿಯಿಂದ ಹೊರಗುಳಿಯಬೇಕು ಎಂದು ಕೇಳುವುದು ಸೂಕ್ತವಲ್ಲ. ಬಿಡಿಎಯಿಂದ ಭೂಮಿ ಅಥವಾ ಫ್ಲ್ಯಾಟ್ ಖರೀದಿಸುವ ನಾಗರಿಕರು ಗ್ರಾಹಕರೇ ಆಗಿದ್ದಾರೆ ಮತ್ತು ಬಿಡಿಎ ಖರೀದಿದಾರರನ್ನು ಅಥವಾ ಹಂಚಿಕೆದಾರರನ್ನು ಗ್ರಾಹಕರಂತೆಯೇ ಪರಿಗಣಿಸಬೇಕು. ಬಿಡಿಎ ಸರ್ಕಾರಿ ಸಂಸ್ಥೆಯಾಗಿದ್ದು, ತನ್ನ ಹಂಚಿಕೆದಾರರಿಗೆ ಅನಾನುಕೂಲವಾದರೂ ಅವರು ತನ್ನನ್ನು ಪ್ರಶ್ನಿಸಲು ಬರುವುದಿಲ್ಲ ಎಂದು ಹೇಳಲು ಸಾಧ್ಯವಿಲ್ಲ ಮತ್ತು ಆದ್ದರಿಂದ ಇದು ನೆಲದ ಕಾನೂನಿಗಿಂತ ಮೇಲಿದೆ ಎಂದು ಪರಿಭಾವಿಸಬೇಕಿಲ್ಲ ಎಂದಿದ್ದಾರೆ.

ಬಿಡಿಎ ಮೂಲಸೌಕರ್ಯವನ್ನು ಒದಗಿಸುವಲ್ಲಿ ಸಂಪೂರ್ಣವಾಗಿ ವಿಫಲ

ಎನ್ ಪಿ ಕೆ ಎಲ್ ಬಡಾವಣೆಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿ ಎಂಟು- ಒಂಬತ್ತು ವರ್ಷಗಳೇ ಕಳೆದಿದ್ದರೂ, ಬಿಡಿಎ ಮೂಲಸೌಕರ್ಯವನ್ನು ಒದಗಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ರೇರಾ ಮತ್ತು ವಿಧಾನಸಭೆಯ ಅರ್ಜಿಗಳ ಸಮಿತಿಯು ಬಿಡಿಎಯನ್ನು ಹೊಣೆಗಾರಿಕೆಯನ್ನು ಅರ್ಥ ಮಾಡಿಸಿ, ಹಂಚಿಕೆದಾರರಿಗೆ ಆಶಾಕಿರಣವಾಗಿದೆ.

ದೃಷ್ಟಿಕೋನದಲ್ಲಿಯೇ ಘನವೆತ್ತ ಉಚ್ಚ ನ್ಯಾಯಾಲಯ ನೋಡಬೇಕಾಗಿತ್ತು ಎಂದಿದ್ದಾರೆ.

> ಬಿಎಸ್‌ಕೆ ಮತ್ತು ಅರ್ಕಾವತಿ ಬಡಾವಣೆ 20 ವರ್ಷಕ್ಕಿಂತ ಹಳೆಯದಾಗಿದ್ದು, ಅಲ್ಲಿನ ನಿವೇಶನ ಹಂಚಿಕೆದಾರರು ಮತ್ತು ಭೂ ಮಾಲೀಕ ವಿವಾದ, ರಸ್ತೆಗಳ ಕೊರತೆ, ಒಳಚರಂಡಿ ಮತ್ತು ಕುಡಿಯುವ ನೀರು ಪೂರೈಕೆಯಲ್ಲಿ ಅಸಮರ್ಪಕತೆ ಸೇರಿದಂತೆ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬಿಡಿಎ ಸಂಕುಚಿತ ದೃಷ್ಟಿಕೋನ ಬಿಟ್ಟು, ರಾಷ್ಟ್ರೀಯ ದೃಷ್ಟಿಕೋನದಲ್ಲಿ ತನ್ನನ್ನು ತಾನು ನೋಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ.



ಮೀನು ಮಾರುಕಟ್ಟೆಗೆ 1 ಕೋಟಿ ಅನುದಾನ, ಶಾಸಕ ರವಿಕುಮಾರ್ ಭರವಸೆ

• **ಉದಯವಾಹಿನಿ, ಮಂಡ್ಯ**

'ಮೀನು ಮಾರುಕಟ್ಟೆಗೆ ಕೆರೆ ಅಂಗಳದಲ್ಲಿ ಸ್ಥಳ ಗುರುತಿಸಿ 1 ಕೋಟಿ ಅನುದಾನ ಬಿಡುಗಡೆ ಮಾಡ ಲಾಗುವುದು. ಒಂದು ವರ್ಷದೊಳಗೆ ಮಾರುಕಟ್ಟೆ ನಿರ್ಮಿಸಲಾಗುವುದು' ಎಂದು ಶಾಸಕ ಪಿ.ರವಿಕುಮಾರ್ ಭರವಸೆ ನೀಡಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಜಿಲ್ಲಾ ಮಹಿಳಾ ಗಂಗಾಮತ (ಬೆಸ್ತರ) ಸಂಘದ ವತಿಯಿಂದ ಭಾನುವಾರ ನಡೆದ ಗಂಗಾ ಉತ್ಸವ-2026 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಈಗಾಗಲೇ ನಗರಸಭೆ ವತಿಯಿಂದ ಕೆರೆ ಅಂಗಳದಲ್ಲಿ ಸ್ಥಳ ಗುರುತಿಸಲಾಗಿದೆ. ಇನ್ನೂ ಅಂಬಿಗರ ಚೌಡಯ್ಯ ಅವರ ಪ್ರತಿಮೆ ನಿರ್ಮಾಣಕ್ಕೂ ನಗರ



ವ್ಯಾಪ್ತಿಯಲ್ಲಿ ಸ್ಥಳ ಗುರುತಿಸಿ ನಿರ್ಮಾಣ ಮಾಡಿಕೊಡಲಾಗುವುದು ಎಂದರು. ನಿಮ್ಮ ಸಮುದಾಯದವರಿಗೆ ಸ್ಥಾನಮಾನಗಳನ್ನು ನಮ್ಮ ಸರ್ಕಾರ ನೀಡಿದೆ. ಕೋಣನಹಳ್ಳಿ, ಬೂದನೂರು ಕೆರೆ ಅಭಿವೃದ್ಧಿಗೆ 5 ಕೋಟಿ ಅನುದಾನ ನೀಡಲಾಗಿದೆ. ಇಲ್ಲಿ ಕೆರೆ ಅಭಿವೃದ್ಧಿಯಾಗಿ ಮೀನು ಹೆಚ್ಚಾಗಿ ಸಿಗುತ್ತದೆ. ಹಾಗಾಗಿ ಮೀನು ಹಿಡಿಯುವವರಿಗೆ ಅನುಕೂಲವಾಗುತ್ತದೆ ಎಂದರು.

ಜಿಲ್ಲಾ ಮಹಿಳಾ ಗಂಗಾ ಮತ(ಬೆಸ್ತರ) ಸಂಘದ ಅಧ್ಯಕ್ಷೆ ಸಿ.ಗಾಯಿತ್ರಿ ಕೃಷ್ಣಪ್ಪ ಮಾತನಾಡಿ, 'ನಮ್ಮ ಸಮುದಾಯದವರಿಗೆ ರಾಜಕೀಯ ಸ್ಥಾನಮಾನ ಸಿಗಬೇಕು.

ಮೀನು ಮಾರಾಟಕ್ಕೆ ಅನುಕೂಲವಾಗುವಂತಹ ವಾತಾವರಣ ಸೃಷ್ಟಿಸಿಕೊಡಬೇಕು. ಸಮುದಾಯ ಭವನವನ್ನು ಶೀಘ್ರವಾಗಿ ಕಾಮಗಾರಿ ಪೂರ್ಣಗೊಳಿಸಬೇಕು. ಜೊತೆಗೆ ಮಹಿಳಾ ಸಭಾ ಭವನವನ್ನು ಕಟ್ಟಿಸಿಕೊಡಬೇಕು. ಇದರಿಂದ ನಮ್ಮ ಸಮುದಾಯದ ಮಹಿಳೆಯರಿಗೆ ಅನುಕೂಲವಾಗಲಿದೆ' ಎಂದು ಮನವಿ ಮಾಡಿದರು. ಹಾವೇರಿ ನಿಜ ಶರಣ ಅಂಬಿಗರ ಚೌಡಯ್ಯನವರ ಗುರುಪೀಠ ಸುಕ್ಷೇತ್ರದ ಶಾಂತ ಭೀಷ್ಮ ಚೌಡಯ್ಯ ಸ್ವಾಮೀಜಿ ಸಾನ್ನಿಧ್ಯವಹಿಸಿದ್ದರು.

ಬೂದನೂರು ಕೆರೆ ಅಭಿವೃದ್ಧಿಗೆ 5 ಕೋಟಿ ಅನುದಾನ

ಸಮಾಜ ಸೇವಕರಾದ ವರದರಾಜು,ಜಯರಾಮು, ಮುಖಂಡರಾದ ಕೃಷ್ಣಯ್ಯ, ಎಂ.ಶ್ರೀನಿವಾಸ್, ಉದಯ್ ಅಂಬಿಗರ್, ಬಿ.ಲಿಂಗಯ್ಯ, ಈರಯ್ಯ ಕನ್ನಲಿ, ಗಂಜಾಂ ಶಿವು, ಎಂ.ಪಿ.ಪೂರ್ಣಾನಂದ, ರಮೇಶ್ ಭಾಗವಹಿಸಿದ್ದರು.

ಜಮೀರ್ ಸಚಿವ ಸ್ಥಾನ ಯಾಕೆ ಕೈತಪ್ಪಿತೋ ಗೊತ್ತಿಲ್ಲ

• **ಉದಯವಾಹಿನಿ, ತುಮಕೂರು**

ಕಾಂಗ್ರೆಸ್ ಶಾಸಕ ಬಿಝೆಡ್ ಜಮೀರ್ ಅಹ್ಮದ್ ಖಾನ್ ಅವರು ಸಮರ್ಥ ನಾಯಕ ಆಗಿದ್ದು, ಅವರಿಗೆ ಸಚಿವ ಸ್ಥಾನ ನೀಡುವುದರಲ್ಲಿ ಯಾವುದೇ ತಪ್ಪಿಲ್ಲ ಎಂದು ಉಪಮುಖ್ಯಮಂತ್ರಿ ಜಿ. ಪರಮೇಶ್ವರ ಅವರು ಸೋಮವಾರ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅವರೊಬ್ಬ ಸಮರ್ಥ ನಾಯಕ, ವಿಶೇಷವಾಗಿ ಅಲ್ಪಸಂಖ್ಯಾತ ಸಮುದಾಯದ ಸಮರ್ಥ ನಾಯಕ. ಮೊದಲ ಹಂತದಲ್ಲಿ ಅವರಿಗೆ ಏಕೆ ಸಚಿವ ಸ್ಥಾನ ಕೈತಪ್ಪಿತು ಎಂಬುದು ನಮಗೆ ತಿಳಿದಿಲ್ಲ. ಎರಡನೇ ಹಂತದಲ್ಲಿ ಅವರಿಗೆ ಸಚಿವ ಸ್ಥಾನ ನೀಡುವಂತೆ ರಾಜ್ಯದಾದ್ಯಂತ ಬೇಡಿಕೆ ಇದೆ. ಹೈಕಮಾಂಡ್ ಅದನ್ನು ಪರಿಗಣಿಸುತ್ತದೆ ಎಂದು ನನಗೆ ತಿಳಿದಿದೆ' ಎಂದು ಹೇಳಿದರು.

ಅವರು ಸಮರ್ಥ ಸಚಿವರಾಗಿದ್ದರು ಮತ್ತು ಉತ್ತಮ ಕೆಲಸ ಮಾಡಿದರು. ಅವರಿಗೆ ಸಚಿವ ಸ್ಥಾನ ನೀಡುವುದರಲ್ಲಿ ಯಾವುದೇ ತಪ್ಪಿಲ್ಲ. ಹೈಕಮಾಂಡ್ ಶೀಘ್ರದಲ್ಲೇ ಎರಡನೇ ಹಂತದ ಸಚಿವ ಸಂಪುಟ ವಿಸ್ತರಣೆಯನ್ನು ಘೋಷಿಸುವುದಾಗಿ ಹೇಳಿದೆ ಎಂದು ಪರಮೇಶ್ವರ್ ತಿಳಿಸಿದರು. ನನ್ನನ್ನು ಉಪಮುಖ್ಯಮಂತ್ರಿಯನ್ನಾಗಿ ಮಾಡಿದ್ದಕ್ಕಾಗಿ ಹೈಕಮಾಂಡ್‌ಗೆ ಧನ್ಯವಾದ ಹೇಳಲು ನಾನು ದೆಹಲಿಗೆ ಹೋಗುತ್ತಿದ್ದೇನೆ' ಎಂದು ಹೇಳಿದರು. ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಜೂನ್ 3 ರಂದು ಪ್ರಮಾಣ ವಚನ ಸ್ವೀಕರಿಸುತ್ತಿದ್ದಂತೆ, ಮೊದಲ ಹಂತದಲ್ಲಿ 13 ಸಚಿವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಾಯಿತು. ಶೀಘ್ರದಲ್ಲೇ ಕಾಂಗ್ರೆಸ್ ಹೈಕಮಾಂಡ್ ಎರಡನೇ ಹಂತದ ಪಟ್ಟಿಯನ್ನು ಘೋಷಿಸಲು ಸಜ್ಜಾಗಿದೆ.

ಈಮಧ್ಯೆ, ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕಾಲುವೆ ಯೋಜನೆಗೆ ವಿರೋಧ ವ್ಯಕ್ತಪಡಿಸಿದ ಪ್ರತಿಭಟನೆಗಳನ್ನು ಉದ್ದೇಶಿಸಿ ಮಾತನಾಡಿದ ಜಿ ಪರಮೇಶ್ವರ, ರಾಜ್ಯ ಸರ್ಕಾರ ಭೂಸ್ವಾಧೀನ ಪ್ರಕ್ರಿಯೆಯನ್ನು ಮುಂದುವರೆಸುತ್ತದೆ ಮತ್ತು ಕೆಲಸವನ್ನು ಪುನರಾರಂಭಿಸುತ್ತದೆ ಎಂದು ಹೇಳಿದರು.

ಎಂಬಿ ಪಾಟೀಲ್ ಅವರಿಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ಮೂಲಸೌಕರ್ಯ ಅಭಿವೃದ್ಧಿ ಖಾತೆಯನ್ನು ನೀಡಲಾಗಿದೆ. ರಾಮಲಿಂಗಾ ರೆಡ್ಡಿ ಅವರಿಗೆ ಬೃಹತ್ ಮತ್ತು ಮಧ್ಯಮ ನೀರಾವರಿ ಖಾತೆಯನ್ನು ನೀಡಲಾಗಿದೆ. ಇಂಧನ ಮತ್ತು ಪ್ರವಾಸೋದ್ಯಮ ಖಾತೆಗಳನ್ನು ಕೆಜೆ ಜಾರ್ಜ್ ಅವರಿಗೆ ಹಂಚಿಕೆ ಮಾಡಲಾಗಿದೆ. ಕೃಷ್ಣ ಬೈರೇಗೌಡ ಅವರು ಬೆಂಗಳೂರು ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಮತ್ತು ಕೇಂದ್ರ ನಗರ ಪಾಲಿಕೆಗಳು, ಬಿಡಬ್ಲ್ಯುಎಸ್‌ಎಸ್‌ಬಿ ಮತ್ತು ಬಿಎಂಆರ್‌ಸಿಎಲ್ ಸೇರಿದಂತೆ ಗ್ರೇಟರ್ ಬೆಂಗಳೂರು ಅಭಿವೃದ್ಧಿಯ ಉಸ್ತುವಾರಿ ವಹಿಸಲಿದ್ದಾರೆ. ಯುಟಿ ಖಾದರ್ ಅವರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜವಾಬ್ದಾರಿ ವಹಿಸಲಾಗಿದೆ. ಅಲ್ಲದೆ, ಈಶ್ವರ್ ಖಂಡ್ರೆ, ಯತೀಂದ್ರ ಸಿದ್ದರಾಮಯ್ಯ, ಬೈರತಿ ಸುರೇಶ್ ಮತ್ತು ಶರಣ್ ಪ್ರಕಾಶ್ ಪಾಟೀಲ್ ಅವರಿಗೆ ಸಚಿವ ಸ್ಥಾನ ನೀಡಲಾಗಿದೆ.

> **ನಾವು ಅವರೆಲ್ಲರ ಮನವೊಲಿಸಲು ಪ್ರಯತ್ನಿಸುತ್ತೇವೆ. ಭೂಸ್ವಾಧೀನ ಪ್ರಕ್ರಿಯೆ ಸ್ವಲ್ಪ ಸ್ಥಗಿತಗೊಂಡಿತ್ತು. ಮುಖ್ಯಮಂತ್ರಿಗಳು ಈಗ ಅದನ್ನು ತ್ವರಿತವಾಗಿ ಪೂರ್ಣಗೊಳಿಸಲು ನಮಗೆ ಸೂಚನೆ ನೀಡಿದ್ದಾರೆ.**
> **ನಾವು ಭೂಸ್ವಾಧೀನ ಪ್ರಕ್ರಿಯೆಯನ್ನು ಮುಂದುವರಿಸುತ್ತೇವೆ ಮತ್ತು ಕೆಲಸವನ್ನು ಪುನರಾರಂಭಿಸುತ್ತೇವೆ. ನಾವು ರೈತ ಸಮುದಾಯವನ್ನು ಮನವೊಲಿಸುತ್ತೇವೆ' ಎಂದು ಉಪ ಮುಖ್ಯಮಂತ್ರಿ ಹೇಳಿದರು.**

ಉಪಮುಖ್ಯಮಂತ್ರಿ ಜಿ ಪರಮೇಶ್ವರ ಕ್ರೀಡಾ ಖಾತೆ

ಉಪಮುಖ್ಯಮಂತ್ರಿ ಜಿ ಪರಮೇಶ್ವರ ಅವರಿಗೆ ಕಂದಾಯ ಮತ್ತು ಕ್ರೀಡಾ ಖಾತೆಗಳನ್ನು ನೀಡಲಾಗಿದೆ. ಪ್ರಿಯಾಂಕ್ ಖರ್ಗೆ ಅವರಿಗೆ ಗೃಹ ಖಾತೆ (ಗುಪ್ತಚರ ಹೊರತುಪಡಿಸಿ), ಐಟಿ ಮತ್ತು ಬಿಟಿ ಮತ್ತು ಇ-ಆಡಳಿತ ಖಾತೆಗಳನ್ನು ನೀಡಲಾಗಿದೆ. ಸತೀಶ್ ಜಾರಕಿಹೊಳಿ ಅವರಿಗೆ ಲೋಕೋಪಯೋಗಿ ಇಲಾಖೆ ಜವಾಬ್ದಾರಿ ನೀಡಲಾಗಿದ್ದು, ಕೆಎಚ್ ಮುನಿಯಪ್ಪ ಅವರಿಗೆ ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಖಾತೆಯನ್ನು ನೀಡಲಾಗಿದೆ.

ಕನ್ನಡಕ್ಕಿರುವ ತಾಯ್ತನ ಬೇರೆ ಭಾಷೆಗಳಿಗಿಲ್ಲ : ಸಾಹಿತಿ ಕುಂ.ವೀರಭದ್ರಪ್ಪ

• **ಉದಯವಾಹಿನಿ, ಮಂಡ್ಯ**

ಕನ್ನಡಕ್ಕೆ ಅನ್ನ ಕೊಡುವ ಶಕ್ತಿ ಇಲ್ಲ ಅಂತ ಹೇಳುವವರು ಮುತ್ತಾಳರು. ಕನ್ನಡಕ್ಕಿರುವ ತಾಯ್ತನ ಬೇರೆ ಭಾಷೆಗಳಿಗಿಲ್ಲ ಎಂದು ಸಾಹಿತಿ ಕುಂ.ವೀರಭದ್ರಪ್ಪ ಹೇಳಿದ್ದಾರೆ.

ನಗರದ ಗಾಂಧಿ ಭವನದಲ್ಲಿ ಕನ್ನಡ ಕರ್ನಾಟಕ ಫೌಂಡೇಷನ್ ಮತ್ತು ಎಂಪ್ಟಿ ಪಾಕೆಟ್ ಗ್ರೀಮ್ಸ್ ಸಹಯೋಗದಲ್ಲಿ ಏರ್ಪಡಿಸಿದ್ದ 'ಆಪ್ತ ಸಂವಾದ' ಒಂದು ಪುಸ್ತಕ ಕ್ರಾಂತಿ ಕಾರ್ಯಕ್ರಮದ 5ನೇ ಆವೃತ್ತಿಯಲ್ಲಿ

ಅವರು ಅತಿಥಿ ಲೇಖಕರಾಗಿ ಮಾತನಾಡಿದರು. ಕನ್ನಡ ವಿನಾಶದ ಅಂಚಿನಲ್ಲಿರುವ ಭಾಷೆ ಎಂಬ ತಪ್ಪು ಕಲ್ಪನೆಯಿದೆ. ಪಂಪನ ಕಾಲದಿಂದ ಕನ್ನಡ ಭಾಷೆ ರೂಪಾಂತರಗೊಂಡು ಬೆಳೆಯುತ್ತಲೇ ಇದೆ. ಇತರ ಭಾಷೆಗಳ ಸಾರವನ್ನು ಹೀರಿಕೊಂಡು ಭಾಷೆ ಸಮೃದ್ಧ ಮತ್ತು ಸರ್ವಶ್ರೇಷ್ಠವಾಗಿದೆ. ಹೀಗಾಗಿ ಕನ್ನಡ ಭಾಷೆ ನಾಶವಾಗುವುದಿಲ್ಲ.

ಕನ್ನಡ ಭಾಷೆಗೆ ಸಾವಿಲ್ಲ. ಕನ್ನಡ ನಾಡು ತಮಿಳು, ತೆಲುಗು, ಹಿಂದಿ ಭಾಷಿಕರಿಗೂ ನೆಲೆ ಕೊಟ್ಟಿದೆ. ಕನ್ನಡಕ್ಕಿರುವ ತಾಯ್ತನ ಬೇರೆ ಭಾಷೆಗಳಿಗಿಲ್ಲ ಎಂದರು. 'ಕನ್ನಡಕ್ಕೆ ಅನ್ನ ಕೊಡುವ ಶಕ್ತಿ ಇಲ್ಲ ಅಂತ ಹೇಳಿದವರು ಮುಗ್ಧಾಳರು. ಅತಿ ಕಡಿಮೆ ಅಂಕ ಗಳಿಸಿ ಎಸ್ ಎಸ್‌ಎಲ್‌ಸಿ ಪಾಸಾದ ನನಗೆ ನೃಪತುಂಗ, ನಾಡೋಜ, ಡಾಕ್ಟೋರೇಟ್ ಮುಂತಾದ ಪ್ರಶಸ್ತಿಗಳು ಬಂದಿವೆ. ನನಗೆ ಸಿಕ್ಕಿರುವ ಜನಪ್ರಿಯತೆ, ಯಶಸ್ಸು ಎಲ್ಲವೂ ಕನ್ನಡದಿಂದಲೇ ಸಿಕ್ಕಿದೆ ಎಂದರು. ನನ್ನ ಪ್ರಕಾರ ಸಾಹಿತ್ಯ ಓದಿಲ್ಲದವರು ನಿರ್ಗತಿಕರು. ಸಾಹಿತ್ಯ ಓದಿದವರೇ ನಿಜವಾದ ಧನಿಕರು. ಈ ದೃಷ್ಟಿಯಿಂದ ಅಂಬಾನಿ ನಿರ್ಗತಿಕರು ಅನಿಸುತ್ತೆ. 72ನೇ ವಯಸ್ಸಿನಲ್ಲೂ ನನ್ನಲ್ಲಿ ಜೀವನೋತ್ಸಾಹ ತುಂಬಿರುವುದಕ್ಕೆ ಬಾಲ್ಯ ಕಾರಣ. ಬಾಲ್ಯದಲ್ಲಿ ಓದಿದ ಕುವೆಂಪು, ಬೇಂದ್ರೆ, ಕಾರಂತ, ಕೆಎಸ್‌ನ, ತೇಜಸ್ವಿ ನನ್ನೊಳಗೆ ಹಸಿರಾಗಿದ್ದಾರೆ. ಲೇಖಕನಿಗೆ ಕಲ್ಪನೆ, ಅಧ್ಯಯನ ಮತ್ತು ಅವಲೋಕನ ಈ ಮೂರು ಗುಣಗಳು ಬೇಕು ಎಂದು ಹೇಳಿದರು.

ಲೇಖಕನಾದವನು ಸರ್ಕಾರ ನೀಡುವ ಪ್ರಶಸ್ತಿ, ಸನ್ಮಾನ ಮತ್ತು ಅಧಿಕಾರ ಹಿಂದೆ ಬೀಳಬಾರದು.

ಚಲುವರಾಯಸ್ವಾಮಿ ಮತ್ತೆ ಸಚಿವ ಆಗುತ್ತಾರೆ: ಶಾಸಕ ರವಿಕುಮಾರ್

• **ಉದಯವಾಹಿನಿ, ಮಂಡ್ಯ**

ನಾಗಮಂಗಲದ ಶಾಸಕ ಎನ್.ಚಲುವರಾಯಸ್ವಾಮಿ ಅವರು ಮತ್ತೊಮ್ಮೆ ಸಚಿವರಾಗುತ್ತಾರೆ. ನಮ್ಮಲ್ಲಿ ಸಚಿವ ಸ್ಥಾನಕ್ಕೆ ಸಂಬಂಧಿಸಿದಂತೆ ಯಾವುದೇ ಗೊಂದಲವಿಲ್ಲ' ಎಂದು ಶಾಸಕ ಪಿ.ರವಿಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು. ನಗರದ 14ನೇ ವಾರ್ಡ್ ಕೆಐಬಿ ಕಾಲನಿಯಲ್ಲಿ 50 ಲಕ್ಷ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು. ಸಿದ್ದರಾಮಯ್ಯ ಅವರು ಸಿಎಂ ಆಗಿ ಅಧಿಕಾರ ಸ್ವೀಕರಿಸಿದ ನಂತರ ಎರಡನೇ ಪಟ್ಟಿಯಲ್ಲಿ ಚಲುವರಾಯಸ್ವಾಮಿ ಸಚಿವರಾಗಿದ್ದರು. ಅದೇ ರೀತಿ ಈ ಬಾರಿಯೂ ಆಗುತ್ತಾರೆ ಎನ್ನುವ ವಿಶ್ವಾಸವಿದೆ. ಜಿಲ್ಲೆಯನ್ನು ಅಭಿವೃದ್ಧಿ ಕಾರ್ಯಗಳಿಂದ ಮುನ್ನಡೆಸಿದ್ದಾರೆ ಎಂದರು. ಶ್ರೀರಂಗಪಟ್ಟಣ ಶಾಸಕ ರಮೇಶ ಬಂಡಿಸಿದ್ದೇಗೌಡ ಅವರೂ ಸಚಿವ ಸ್ಥಾನ ಕೇಳುತ್ತಿದ್ದಾರೆ. ಅವರಿಗೆ ಕೊಟ್ಟರೂ ಸಂತೋಷ. ಒಟ್ಟಾರೆ ಮಂಡ್ಯಕ್ಕೆ ಮಂತ್ರಿ ಸಿಕ್ಕರೆ ಸಾಕು ಎಂದು ಹೇಳಿದರು.

ಅರಮನೆ ಪರಂಪರೆಗೆ ಅನುಗುಣವಾಗಿ ಅಭಿವೃದ್ಧಿ; ಸಂಸದ ಯದುವೀರ್ ಒಡೆಯರ್

• **ಉದಯವಾಹಿನಿ, ಮೈಸೂರು**

ಕೆಂಪು ಚೆಲುವಾಜಮ್ಮಣ್ಣಿ ಅವರ ಆಧ್ಯಾತ್ಮಿಕ ಜೀವನ ಅರಮನೆ ಇತಿಹಾಸದಲ್ಲಿ ಮಾದರಿಯಾಗಿದೆ. ಬಾಲ್ಯ, ನಂತರದ ಜೀವನವನ್ನೂ ಅಧ್ಯಾತ್ಮ ಮತ್ತು ಅರಮನೆಯ ಪರಂಪರೆಗೆಮೀಸಲಾಗಿಟ್ಟಿದ್ದರು' ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಇಲ್ಲಿನ ಕೆಂಪು ಚೆಲುವಾಜಮ್ಮಣ್ಣಿನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಬೆಳ್ಳಿಹಬ್ಬದ ಅಂಗವಾಗಿ ನಡೆದ ಸಾಂಸ್ಕೃತಿಕ ಮೆರವಣಿಗೆ ಮತ್ತು ರಜತ ಮಾಲಿಕೆ' ಸ್ಮರಣ ಸಂಚಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅರಮನೆಗೆ ಚೆಲುವಾಜಮ್ಮಣ್ಣಿ ಅಪಾರ ಕೊಡುಗೆ

ನೀಡಿದ್ದಾರೆ. ಆಧುನಿಕ ಪದ್ಧತಿ ಅಳವಡಿಸಿಕೊಂಡು ಅರಮನೆ ಮೂಲ ಪರಂಪರೆ ಮುಂದುವರಿಸಬೇಕು ಎಂದು ಮಾದರಿ ರೂಪಿಸಿದ್ದಾರೆ. ಅವರ ಹೆಸರಿನಲ್ಲಿ ಈ ಬಡಾವಣೆ ಮುಂದುವರಿಯುತ್ತಿರುವುದು ಸಂತಸ ತಂದಿದೆ' ಎಂದರು. 'ಮೈಸೂರು ಯೋಗ ಕೇಂದ್ರ, ಸ್ವಾಗತ ಕಮಾನು, ರಸ್ತೆ ವಿಸ್ತರಣೆ, ಸಂಘದ ಕಚೇರಿ ನಿರ್ಮಾಣ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಶ್ರಮಿಸಲಾಗುವುದು ಎಂದು ಹೇಳಿದರು. ಮೈಸೂರಿನಲ್ಲಿ ಬಹಳಷ್ಟು ಕೆಲಸ ನಡೆಯುತ್ತಿವೆ. ಇಲ್ಲಿನ ವಾತಾವರಣ, ಪರಂಪರೆಗೆ ಅನುಗುಣವಾಗಿ ಕೆಲಸ ಮಾಡುವ ಗುರಿ ಇದೆ. ಪರಿಸರ, ಪ್ರಕೃತಿ ಜತೆಗೆ ಅಭಿವೃದ್ಧಿ ಬೇಕಿದೆ. ಪ್ರತಿಭಟನೆ ಮಾಡುವುದಕ್ಕೆ ನಮ್ಮ ವಿರೋಧ ಇಲ್ಲ. ಪರಿಸರದ ಜತೆಗೆ ಅಭಿವೃದ್ಧಿ ಮಾಡುವ ಉತ್ತಮ ವಾತಾವರಣ ಇಲ್ಲದೆ' ಎಂದು ತಿಳಿಸಿದರು.

ಇತಿಹಾಸಕಾರ ಧರ್ಮೇಂದ್ರ ಕುಮಾರ್ ಮಾತನಾಡಿ, 'ಚಾಮುಂಡಿ ಬೆಟ್ಟದ ಪಾದದಲ್ಲಿ ಬಡಾವಣೆ ನಿರ್ಮಾಣ ಬೇಡ, ಲಲಿತ ಮಹಲ್ ಕಟ್ಟಡಕ್ಕೆ ಧಕ್ಕೆಯಾಗಲಿದೆ ಎಂದು ಕೆಲವರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ನ್ಯಾಯಾಲಯ ಮತ್ತು ವಿಧಾನಸೌಧ ತಿರುಗಿ ಬಡಾವಣೆ ನಿರ್ಮಾಣಕ್ಕೆ ಕಾರಣರಾದ ತಿಮ್ಮೇಗೌಡ ಅವರನ್ನು ಬಡಾವಣೆ ನಿವಾಸಿಗಳು ಸ್ಮರಿಸಬೇಕು' ಎಂದು ಹೇಳಿದರು.

ಹೇಮಾವತಿ ಎಕ್ಸ್‌ಪ್ರೆಸ್ ಕೆನಾಲ್ ಕಾಮಗಾರಿ ಶೀಘ್ರ ಆರಂಭ

• **ಉದಯವಾಹಿನಿ, ತುಮಕೂರು**

ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ನಿರ್ಮಾಣ ಕಾಮಗಾರಿಯ ಭೂಸ್ವಾಧೀನ ಪ್ರಕ್ರಿಯೆ ಒಂದು ತಿಂಗಳಲ್ಲಿ ಪೂರ್ಣಗೊಳಿಸುವಂತೆ ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ ಅಧಿಕಾರಿಗಳಿಗೆ ಸೂಚಿಸಿದರು. ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಅಭಿವೃದ್ಧಿ ಕಾಮಗಾರಿ ಕುರಿತು ಪರಿಶೀಲನಾ ಸಭೆ ನಡೆಸಿ ಮಾತನಾಡಿದರು. 27 ಕಿ.ಮೀ. ವ್ಯಾಪ್ತಿಯಲ್ಲಿ 80 ಎಕರೆ ಭೂಸ್ವಾಧೀನ ನಡೆಸಬೇಕಿದೆ. ಈ ನಿಟ್ಟಿನಲ್ಲಿ ಅಗತ್ಯ ಕ್ರಮಕ್ಕೈಗೊಳ್ಳಲಾಗಿದೆ' ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಸಭೆಯ ಗಮನಕ್ಕೆ ತಂದರು.

ಅಧಿಕಾರಿಗಳು ಸುಮ್ಮನೆ ಕುಳಿತುಕೊಂಡ ಸಮಯ ವ್ಯರ್ಥ ಮಾಡುತ್ತಾರೆ. ಆಸಕ್ತಿ ಇಲ್ಲದಂತಾಗಿದೆ. ಭೂಸ್ವಾಧೀನ ಪ್ರಕ್ರಿಯೆ ಮುಗಿಸಿ, ಕಾಮಗಾರಿ ಆರಂಭಕ್ಕೆ ಸಿದ್ಧತೆ ಮಾಡಿಕೊಳ್ಳುವಂತೆ ಡಿಸಿಎಂ



ನಿರ್ದೇಶಿಸಿದರು. 2028ರ ಮಾರ್ಚ್ ಒಳಗೆ ಎಲ್ಲಾ ಕಾಮಗಾರಿ ಪೂರ್ಣಗೊಳಿಸಬೇಕು. ಲೋಕೋಪಯೋಗಿ ಇಲಾಖೆ, ಸಣ್ಣ ನೀರಾವರಿ, ಜಿಲ್ಲಾ ಪಂಚಾಯಿತಿ ಇಂಜಿನಿಯರ್‌ಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಭೂಮಿ ಪೂಜೆ ನೆರವೇರಿಸಿದ ಒಂದು ವಾರದಲ್ಲಿ ಕೆಲಸ ಪ್ರಾರಂಭಿಸಬೇಕು. ಕೆಲವು ಕಡೆಗಳಲ್ಲಿ ಶಂಕು ಸ್ಥಾಪನೆ ಆಗಿ ಮೂರು ತಿಂಗಳು ಕಳೆದರೂ ಕಾಮಗಾರಿ ಆರಂಭವಾಗಿಲ್ಲ. ಹೀಗಾದರೆ ನಾನು ಭೂಮಿ ಪೂಜೆಗೆ ಬರುವುದಿಲ್ಲ. ವಿಳಂಬ ಮಾಡಿದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಎಚ್ಚರಿಸಿದರು.

ಜಿಲ್ಲೆಯ ಅಭಿವೃದ್ಧಿ ಕಾಮಗಾರಿ ಕುರಿತು ಪರಿಶೀಲನಾ ಸಭೆ ನಡೆಸಿ ಸಭೆಗೂ ಮುನ್ನ ಜಿ.ಪರಮೇಶ್ವರ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಿ ಸಿದ್ದಲಿಂಗ ಸ್ವಾಮೀಜಿ ಆಶೀರ್ವಾದ ಪಡೆದರು. ನಂತರ ಬಾಬು ಜಗಜೀವನ್ ರಾಮ್ ಭವನ ನಿರ್ಮಾಣ ನಿವೇಶನದ ಬಳಿ ಕಾಂಪೌಂಡ್ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿದರು. ಮಹಾನಗರ ಪಾಲಿಕೆ ಆವರಣದಲ್ಲಿ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಿದರು. ಬಿಎಂಟಿಸಿ ಉಪಾಧ್ಯಕ್ಷ ನಿಕೇತ್‌ರಾಜ್ ಮೌರ್ಯ, ಜಿ.ಪಂ ಸಿಇಒ ಬಿ.ವಿ.ಅಶ್ವಿಜ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್, ಹೆಚ್ಚುವರಿ ಜಿಲ್ಲಾಧಿಕಾರಿ ಎನ್.ತಿಪ್ಪೇಸ್ವಾಮಿ ಇತರರು ಭಾಗವಹಿಸಿದ್ದರು.

ಟಾಸ್ಕ್‌ಫೋರ್ಸ್ ರಚನೆ

ಅಭಿವೃದ್ಧಿ ಕಾಮಗಾರಿ ಕುರಿತು ಚರ್ಚಿಸಲು ಜಿಲ್ಲಾಧಿಕಾರಿ ನೇತೃತ್ವದಲ್ಲಿ ಟಾಸ್ಕ್‌ಫೋರ್ಸ್ ಸಮಿತಿ ರಚಿಸಲಾಗುವುದು. ಇಲಾಖಾವಾರು ನಡೆದ ಪ್ರಗತಿ ಬಗ್ಗೆ ಪ್ರತಿ ತಿಂಗಳ ಕೊನೆಯಲ್ಲಿ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಬೇಕು. ಕಾಮಗಾರಿ ಬಾಕಿ, ಪ್ರಗತಿ, ಮುಕ್ತಾಯದ ಮಾಹಿತಿ ಹಂಚಿಕೊಳ್ಳಬೇಕು ಎಂದರು.

ಸುಕ್ಷೇತ್ರ ಕನಕಪುರದಲ್ಲಿ ಸಿಎಂ ಕೃತಜ್ಞತೆ ಸಮರ್ಪಣಾ ಪ್ರವಾಸ

• **ಉದಯವಾಹಿನಿ,ರಾಮನಗರ**

ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ ಸ್ವಕ್ಷೇತ್ರಕ್ಕೆ ಭೇಟಿ ನೀಡಿದ ಡಿ.ಕೆ.ಶಿವಕುಮಾರ್ ಅವರಿಗೆ ಅಭಿಮಾನಿಗಳಿಂದ ಅಭೂತಪೂರ್ವ ಸ್ವಾಗತ ದೊರೆಯಿತು. ಅಭಿಮಾನಿಗಳ ಹರ್ಷೋದ್ಗಾರದಲ್ಲಿ ಡಿ.ಕೆ. ಶಿವಕುಮಾರ್ ಮಿಂದೆದ್ದರು. ಡಿಕೆ, ಡಿಕೆ ಎನ್ನುವ ಘೋಷಣೆ ಮುಗಿಲು ಮುಟ್ಟುತ್ತಿದ್ದಂತೆ ಮುಖ್ಯಮಂತ್ರಿ ಭಾವುಕರಾದರು.

ನಿಮ್ಮ ಪ್ರೀತಿಗೆ ಆಭಾರಿ. ನಿಮ್ಮಿಂದ ನಾನು ವಿಧಾನಸೌಧದ ಮೂರನೇ ಮಹಡಿಯಲ್ಲಿದ್ದೇನೆ. ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದೇನೆ. ನಿಮಗೆಲ್ಲರಿಗೂ ಕೋಟಿ, ಕೋಟಿ ವಂದನೆಗಳು. ನಿಮ್ಮ ಪಾಲಿಗೆ ನಾನು ಸಿಎಂ ಅಲ್ಲ, ಸೇವಕ. ನನ್ನ ಕೊನೆಯುಸಿರು ಇರುವವರೆಗೂ ನಿಮ್ಮ ಮನೆ ಮಗನಾಗಿ ಸೇವೆ ಮಾಡುವೆ. ಸ್ವಂತ ಮಗನಂತೆ ನನ್ನನ್ನು ಬೆಳೆಸಿದ್ದೀರಿ. ನನ್ನ ಕ್ಷೇತ್ರದ ಪ್ರತಿಯೊಬ್ಬರಿಗೂ ಸಾಷ್ಟಾಂಗ ನಮಸ್ಕಾರಗಳು. ನಾನು ಈ ಕ್ಷೇತ್ರ ದಾಟಿ ಹೋದಾಗ ಮಾತ್ರ ಮುಖ್ಯಮಂತ್ರಿ. ಇಲ್ಲಿಗೆ ಬಂದಾಗ ನಿಮ್ಮ ಮನೆ ಸೇವಕ ಎನ್ನುವ ಮಾತನ್ನು ಭೇಟಿ ಕೊಟ್ಟ ಪ್ರತಿ ಊರಿನಲ್ಲೂ ಒತ್ತಿ, ಒತ್ತಿ ಹೇಳಿದರು.

ನನ್ನ ಶಕ್ತಿ ನೀವೇ, ಬದುಕು ನೀವೇ, ಉಸಿರು ನೀವೇ. ನನ್ನ ಬದುಕಿನ ಕಷ್ಟ ಕಾಲದಲ್ಲಿ ನೀವು ನನಗೆ ನೆರಳಾಗಿದ್ದೀರಿ. ನಿಮ್ಮ ಸೇವಕನಾಗಿ ಮುಂದುವರಿದು, ಋಣ ತೀರಿಸುತ್ತೇನೆ ಎಂದು

ಭರವಸೆ ನೀಡಿದರು. **ಒಣ-ಹಸಿ ಮೆಣಸಿನಕಾಯಿ, ಬೆಳ್ಳುಳ್ಳಿ ಹಾರ:** ನೂತನ ಸಿಎಂ ಅವರಿಗೆ ಯಾರ ದೃಷ್ಟಿಯೂ ತಾಕದಿರಲಿ ಎಂದು ಮೆಣಸಿನಕಾಯಿ ಹಾಗೂ ಬೆಳ್ಳುಳ್ಳಿ ಪೋಣಿಸಿ ಮಾಡಿದ್ದ ಬೃಹತ್ ಹಾರವನ್ನು ಡಿಕೆಶಿ ಅವರಿಗೆ ಹಾರೋಹಳ್ಳಿಯ ಜನರು ಹಾಕಿದ್ದು ವಿಶೇಷವಾಗಿತ್ತು. ಸುಮಾರು 50 ಕೆ.ಜಿ ಒಣ ಮೆಣಸಿನಕಾಯಿ 70 ಕೆಜಿಗೂ ಹೆಚ್ಚು ಹಸಿಮೆಣಸಿನಕಾಯಿ ಮತ್ತು 50 ಕೆ.ಜಿಗೂ ಹೆಚ್ಚು ಬೆಳ್ಳುಳ್ಳಿ ಬಳಸಲಾಗಿತ್ತು. ಹಾಗೆಯೇ ಕ್ರೇನ್ ಮೂಲಕ ಬೃಹತ್ ಸೇಬಿನ ಹಾರವನ್ನು ಹಾಕಿ ಅಭಿಮಾನಿಗಳು ಸಂಭ್ರಮಿಸಿದರು. ಕಗ್ಗಲೀಪುರ, ತುಂಗಣಿ, ನಾರಾಯಣಪುರಗಳಲ್ಲಿ ಅಭಿಮಾನಿಗಳು ಸುಮಾರು 500 ಕೆಜಿಗೂ ಹೆಚ್ಚು ಸೇಬು ಬಳಸಿ ಬೃಹತ್ ಹಾರಗಳನ್ನು ಮಾಡಿಸಿ ಡಿ.ಕೆ. ಶಿವಕುಮಾರ್ ಅವರ ಮೇಲಿನ ಅಭಿಮಾನ ಮೆರೆದರು. ತುಂಗಣಿಯಲ್ಲಿ ಎರಡು ಸೇಬಿನ ಹಾರಗಳು ಇದ್ದಿದ್ದು ವಿಶೇಷವಾಗಿತ್ತು. ಹೆರಿಂದ್ಯಾಪನಹಳ್ಳಿಯಲ್ಲಿ ಮಾಡಿದ್ದ ಸೇಬಿನ ಹಾರ 30 ಅಡಿಗೂ ಹೆಚ್ಚು ಉದ್ದವಾಗಿತ್ತು.

ಸಿಎಂ ಸ್ವಾಗತಕ್ಕೆ ಜಾನಪದ ಮೆರುಗು, ಪೂರ್ಣಕುಂಭ ಸ್ವಾಗತ: ನಾರಾಯಣಪುರದಲ್ಲಿ ಪೂಜಾಕುಣಿತ ಕಲಾವಿದರು ಸ್ವಾಗತಿಸಿದರೆ, ಕೊಳಗೊಂಡನಹಳ್ಳಿಯಲ್ಲಿ ನಂದಿಧ್ವಜ, ಪಟ ಕುಣಿತ, ನಂದಿಧ್ವಜ ಹೊತ್ತ ಕಲಾವಿದರು ಸ್ವಾಗತಿಸಿದರು. ಪ್ರತಿ ಊರಿನಲ್ಲೂ ತಮಟೆ, ನಗಾರಿ ಸದ್ದು ಮೇಳೈಸಿತ್ತು. ಬೇಕುಪ್ಪೆಯಲ್ಲಿ ಮನೆದೇವರು ಕೆಂಕೇರಮ್ಮನಿಗೆ ಹಾಗೂ ತುಂಗಣಿಯಲ್ಲಿ ಚಾಮುಂಡೇಶ್ವರಿ ದೇವಾಲಯದಲ್ಲಿ ಸಹೋದರ ಡಿ.ಕೆ.ಸುರೇಶ್ ಅವರ ಜೊತೆಗೂಡಿ ಪೂಜೆ ಸಲ್ಲಿಸಿದರು. ಕ್ಷೇತ್ರದ ಗಡಿ ಭಾಗದಲ್ಲಿ ಮಹಿಳೆಯರು ಪೂರ್ಣಕುಂಭ ಸ್ವಾಗತ ನೀಡಿದರು.

ನಾರಾಯಣಪುರ, ಸಂತೆ ಕೋಡಿಹಳ್ಳಿ, ಹೆರಿಂದ್ಯಾಪನಹಳ್ಳಿಯಲ್ಲಿ ಮಾತನಾಡಿದ ಡಿ.ಕೆ.ಶಿವಕುಮಾರ್ ಅವರು, ತಿಹಾರ್ ಜೈಲಿನಲ್ಲಿ ಇದ್ದಾಗ ನನ್ನ ಕ್ಷೇತ್ರದ ಜನರು ಕಣ್ಣೀರು ಸುರಿಸಿ ಪ್ರಾರ್ಥನೆ ಮಾಡಿದರು. ಆ ಪ್ರಾರ್ಥನೆ ನನ್ನನ್ನು ಕಾಪಾಡಿದೆ. ನೀವು ನನ್ನ ಪರವಾಗಿ ಕೊರಗಿದ್ದು ನನ್ನ ರಕ್ಷಿಸಿದೆ. ನನಗೆ ಹಣದ, ಅಧಿಕಾರದ ಅವಶ್ಯಕತೆ ಬೇಕಾಗಿಲ್ಲ. ನಿಮ್ಮ ಜೀವನದಲ್ಲಿ ಬದಲಾವಣೆ ಉಂಟಾಗಬೇಕು ಎಂಬುದೇ ನನ್ನ ಧ್ಯೇಯ ಎಂದರು.

ಅಜ್ಜಯ್ಯನ ಮಾರ್ಗದರ್ಶನ ಇರಲಿದೆ

ಸಿಎಂ ರೋಡ್ ಶೋ ನಡೆಸಿದ ವಾಹನದ ಮುಂಭಾಗದಲ್ಲಿ ಅಜ್ಜಯ್ಯನ ಫೋಟೊ ಅಳವಡಿಸಿದ್ದು ವಿಶೇಷವಾಗಿತ್ತು. ವೀರ ಗಂಗಾಧರ ಅಜ್ಜಯ್ಯನ ಮಾರ್ಗದರ್ಶನದಲ್ಲಿ ಮುನ್ನಡೆಯುವ ಸಂದೇಶ ಕೊಟ್ಟರು. ನನ್ನ ಮನೆ ಬಾಗಿಲು ನಿಮಗೂ ತೆರೆದಿದೆ. ಬೇಕುಪ್ಪೆ ಗ್ರಾಮದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡುತ್ತಿದ್ದ ವೇಳೆ ಆಂಬ್ಯುಲೆನ್ಸ್ ಬಂದ ಕಾರಣಕ್ಕೆ ಮಧ್ಯದಲ್ಲೇ ಭಾಷಣ ನಿಲ್ಲಿಸಿದ ಮುಖ್ಯಮಂತ್ರಿಯವರು ಜನರಿಗೆ ದಾರಿ ಬಿಡುವಂತೆ ಸೂಚಿಸಿದರು.

ಆಂಬ್ಯುಲೆನ್ಸ್ ಹೋದ ನಂತರ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು.ಜನತಾ ದಳದ ಕಾರ್ಯಕರ್ತರಿಗೂ ಈ ಡಿ.ಕೆ. ಶಿವಕುಮಾರ್ ಇದ್ದಾನೆ. ನನ್ನ ಮನೆ ಬಾಗಿಲು ನಿಮಗೂ ತೆರೆದಿದೆ. ನೀವು ನನ್ನನ್ನು ಬಳಸಿಕೊಂಡು, ಸಹಾಯ ಪಡೆಯಬಹುದು ಎಂದು ಇದೇ ವೇಳೆ ಡಿಕೆಶಿ ತಿಳಿಸಿದರು.

ಮಿನಿ ನ್ಯೂಸ್

ಬರಗಿಯಲ್ಲಿ ಕೆನರಾ ಬ್ಯಾಂಕ್ ನೂತನ ಕಟ್ಟಡ ಉದ್ಘಾಟನೆ

• **ಉದಯವಾಹಿನಿ, ಗುಂಡ್ಲುಪೇಟೆ**

ತಾಲ್ಲೂಕಿನ ಬರಗಿ ಗ್ರಾಮದ ಕೆನರಾ ಬ್ಯಾಂಕ್ ಶಾಖೆಯ ನೂತನ ಕಟ್ಟಡವನ್ನ ಡಿವಿಜನಲ್ ವ್ಯವಸ್ಥಾಪಕ ಉತ್ತಮ್ ಕುಮಾರ್ ಸುದಾನ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಗುಂಡ್ಲುಪೇಟೆ ಶಾಖೆ ವ್ಯವಸ್ಥಾಪಕ ಅಶೋತ್ಸ್ ಮಿಶ್ರ, ರಾಹುಲ್ ಕಪೂರ್, ಬರಗಿ ಕೃಷಿಪತ್ತಿನ ಸಹಕಾರ ಸಂಘ ಅಧ್ಯಕ್ಷ ಬಸವರಾಜು, ಕಾರ್ಯದರ್ಶಿ ಮಂಜುನಾಥ್, ಬ್ಯಾಂಕ್ ಮಿತ್ರರಾದ ಕುಮಾರ್, ಮಹದೇವಸ್ವಾಮಿ, ವಿಕಾಸ ಸೇವಾ ಟ್ರಸ್ಟ್ ಮಹದೇವಪ್ರಸಾದ್, ಸಿಬ್ಬಂದಿ ಯಾದವ್, ರಂಗಸ್ವಾಮಿ, ಭಗತ್ ರಾಜ್ ಹಾಜರಿದ್ದರು.

ಪ್ರಿಸ್ಬಿ ಕ್ರೀಡೆಗೆ ಆಯ್ಕೆಯಾದ ಶಿಂಡನಪುರದ ವಿದ್ಯಾರ್ಥಿನಿಗೆ ಶಾಸಕ ಗಣೇಶ್ ಅಭಿನಂದನೆ

• **ಉದಯವಾಹಿನಿ, ಗುಂಡ್ಲುಪೇಟೆ**

ಮಲೇಶಿಯದಲ್ಲಿ ನಡೆಯಲಿರುವ ಪ್ರಿಸ್ಬಿ ಕ್ರೀಡೆ ಭಾರತ ತಂಡದ ಆಟಗಾರ್ತಿಯಾಗಿ ಆಯ್ಕೆಯಾಗಿರುವ ವಿದ್ಯಾರ್ಥಿನಿಯನ್ನು ಶಾಸಕ ಎಚ್.ಎಂ.ಗಣೇಶ್‌ಪ್ರಸಾದ್ ಮೈಸೂರಿನ ತಮ್ಮ ನಿವಾಸದಲ್ಲಿ ಅಭಿನಂದಿಸಿ, ವಿಮಾನ ಪ್ರಯಾಣದ ಖರ್ಚು ಭರಿಸಿದರು.

ಶಿಂಡನಪುರ ಗ್ರಾಮದ ರೈತ ಕುಟುಂಬದ ಸಂಧ್ಯಾ ಮಲೇಶಿಯದಲ್ಲಿ ನಡೆಯಲಿರುವ ಪ್ರಿಸ್ಬಿ ಕ್ರೀಡೆಗೆ ಭಾರತ ತಂಡದ ಆಟಗಾರರಲ್ಲಿ ಒಬ್ಬರಾಗಿ ಆಯ್ಕೆಯಾಗಿದ್ದಾಳೆ. ವಿದ್ಯಾರ್ಥಿನಿಯ ಸಾಧನೆ ನಮ್ಮೆಲ್ಲರ ಹೆಮ್ಮೆಯ ವಿಚಾರ. ನಮ್ಮ ತಾಲ್ಲೂಕಿನ ಮನೆ ಮಗಳಾದ ಸಂಧ್ಯಾ, ವಿದೇಶದಲ್ಲೂ ತನ್ನ ಪ್ರತಿಭೆ ಪ್ರದರ್ಶಿಸಲಿ ಎಂದು ಹಾರೈಸಿದರು. ರೈತರ ಮಗಳು ಕ್ರೀಡೆಯಲ್ಲಿ ಪಾಲ್ಗೊಳ್ಳಲು ವಿದೇಶಕ್ಕೆ ತೆರಳುತ್ತಿರುವುದರಿಂದ ಸ್ವಪ್ರೇರಣೆಯಿಂದ ವಿಮಾನ ಪ್ರಯಾಣದ ಖರ್ಚು ಭರಿಸಿದ್ದೇನೆ ಎಂದು ತಿಳಿಸಿ, ಕ್ರೀಡಾಪಟು ಉತ್ತಮ ಸಾಧನೆ ಮಾಡಲಿ ಎಂದು ಹಾರೈಸಿದರು.

ಬಂಡೀಪುರದಲ್ಲಿ ರಣಹದ್ದುಗಳ ದರ್ಶನ : ಮೃತಪಟ್ಟ ಪ್ರಾಣಿಯ ಮಾಂಸವನ್ನ ಹೆಕ್ಕಿತಿಂದ ದೃಶ್ಯ ಸೆರೆ



• **ಉದಯವಾಹಿನಿ, ಗುಂಡ್ಲುಪೇಟೆ**

ಪ್ರತಿಷ್ಠಿತ ಹುಲಿ ರಕ್ಷಿತಾರಣ್ಯ ಬಂಡೀಪುರದ ಸಫಾರಿ ಮಾರ್ಗದ ಕೆರೆಯ ಬಳಿ ಮೃತಪಟ್ಟ ಪ್ರಾಣಿಯೊಂದರ ಶವವನ್ನ ರಣಹದ್ದುಗಳ ಹಿಂಡು ಹೆಕ್ಕಿ ತಿನ್ನುತ್ತಿರುವ ಅಪರೂಪದ ದೃಶ್ಯ ಸೆರೆಯಾಗಿದ್ದು ನೈಸರ್ಗಿಕ ಸ್ವಚ್ಛತಾ ಬಾರಿ ಪಕ್ಷಿ ಸಂಕುಲ ಬಂಡೀಪುರದಲ್ಲಿದೆ ಎಂಬುದು ಖಾತ್ರಿಯಾಗಿದೆ.

ಅವಸಾನದ ಹಂಚಿನಲ್ಲಿರುವ ರಣಹದ್ದುಗಳ ಸಂತತಿ ಬಂಡೀಪುರದಲ್ಲಿ ಜೀವಂತವಾಗಿ ಉಳಿದಿವೆ ಎನ್ನಲಾಗುತ್ತಿದೆ, ಪರಿಸರದಲ್ಲಿನ ಸ್ವಚ್ಛತೆಗೆ ತಮ್ಮದೇ ಆದ ಕೊಡುಗೆ ನೀಡುವ ರಣಹದ್ದುಗಳು ಪರಿಸರ ಸಂರಕ್ಷಣೆಯಲ್ಲಿ ಮಹತ್ವದ ಪಾತ್ರವಹಿಸುತ್ತವೆ, ಅರಣ್ಯ ಪ್ರದೇಶದಲ್ಲಿ ಸತ್ತ ಪ್ರಾಣಿಗಳ ಶವಗಳನ್ನ ತಿನ್ನುವುದರಿಂದ ರೋಗಗಳು ವಿಸ್ತಾರವಾಗುವುದನ್ನ ತಡೆಯುತ್ತವೆ.

ಮೃತ ಪ್ರಾಣಿಗಳ ದೇಹದಲ್ಲಿ ಉತ್ಪತ್ತಿಯಾಗುವ ಮಾರಕ ರೋಗಾಣುಗಳನ್ನ ನಾಶಪಡಿಸಿ ಸುತ್ತಲಿನ ಪರಿಸರವನ್ನ ಸ್ವಚ್ಛವಾಗಿರುಸುತ್ತವೆ ಎಂದು ವನ್ಯಜೀವಿ ತಜ್ಞ ಛಾಯಾಗ್ರಾಹಕ ಆರ್. ಕೆ.ಮದು ತಿಳಿಸಿದ್ದಾರೆ.

ಸರ್ಕಾರಿ ಶಾಲೆಗಳಲ್ಲಿ ಇಲ್ಲ ಶಿಕ್ಷಕರು, ಶುದ್ಧ ಕುಡಿಯುವ ನೀರು

• **ಉದಯವಾಹಿನಿ, ಗೌರಿಬಿದನೂರು**

ಬೇಸಿಗೆ ರಜೆ ಮುಗಿದು ಇನ್ನೇನು ಶಾಲೆಗಳು ಪುನರಾರಂಭವಾಗಿವೆ. ಇದರಿಂದಾಗಿ ಶಾಲಾ ಆವರಣಗಳು ಮಕ್ಕಳ ಕಲರವದಿಂದ ಕಂಗೊಳಿಸುತ್ತಿವೆ.

ಆದರೆ, ತಾಲ್ಲೂಕಿನ ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಹತ್ತಾರು ಮೂಲ ಸೌಕರ್ಯಗಳ ಕೊರತೆ ಎದ್ದು ಕಾಣುತ್ತಿದೆ. ಖ್ಯಾತ ಶಿಕ್ಷಣ ತಜ್ಞರಾದ ಡಾ.ಎಚ್. ನರಸಿಂಹಯ್ಯ ಅವರು ಹುಟ್ಟಿ ಬೆಳೆದ ತಾಲ್ಲೂಕು ಇಂದಿಗೂ ಶೈಕ್ಷಣಿಕವಾಗಿ ತೀರಾ ಹಿಂದುಳಿದಿದೆ. ತಾಲ್ಲೂಕಿನ ಬಹುತೇಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ, ಶಾಲಾ ಕೊಠಡಿಗಳ ದುರಸ್ತಿ, ಶೌಚಾಲಯಗಳ ಕೊರತೆ, ಶುದ್ಧ ಕುಡಿಯುವ ನೀರಿನ ಘಟಕಗಳ ಕೊರತೆ ಸೇರಿದಂತೆ ಹೀಗೆ ಹತ್ತಾರು ಸಮಸ್ಯೆಗಳಿವೆ ಎಂದು ಶಿಕ್ಷಣ ಪ್ರೇಮಿಗಳು ಬೇಸರ ವ್ಯಕ್ತಪಡಿಸುತ್ತಾರೆ. ತಾಲ್ಲೂಕಿನಲ್ಲಿ ಕಿರಿಯ, ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆ, ಅನುದಾನಿತ ಮತ್ತು ಅನುದಾನ ರಹಿತ ಶಾಲೆ, ಬುಡಕಟ್ಟು ಕಲ್ಯಾಣ, ಸಮಾಜ ಕಲ್ಯಾಣ, ಕೆಪಿಎಸ್, ಪಿಎಂಶ್ರೀ ಮತ್ತು ಪಿಎಬಿ ಸೇರಿದಂತೆ 366 ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಪ್ರಾಥಮಿಕ ಶಾಲೆಗಳಲ್ಲಿ 192, ಪ್ರೌಢ ಶಾಲೆಗಳಲ್ಲಿ 76 ಹುದ್ದೆಗಳು ಖಾಲಿ ಇವೆ. ನಲಿ ಕಲಿ 6 ಹುದ್ದೆ ಜೊತೆಗೆ ಸಿಆರ್‌ಪಿ 11, ಬಿಆರ್‌ಪಿ 5 ಹುದ್ದೆಗಳು ಭರ್ತಿಯಾಗಬೇಕಿದೆ. ತಾಲ್ಲೂಕಿನಲ್ಲಿ ಶತಮಾನ ಕಂಡ ಶಾಲೆಗಳಿವೆ. ಈ ಶಾಲೆಗಳಿಂದ ಅನೇಕ ಸಾಧಕರು ಅನೇಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ. ಆದರೆ ಹಲವು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಬೇಕಾದ ಕಲಿಕಾ ವಾತಾವರಣ ಇಂದಿಗೂ ಇಲ್ಲ. ಬಡ ಮಕ್ಕಳಿಗೆ ಶಿಕ್ಷಣ ಒಂದೇ ಆಯುಧ. ಸರ್ಕಾರಿ ಶಾಲೆಗಳಿಗೆ ಅಗತ್ಯವಿರುವ ಸೌಲಭ್ಯಗಳನ್ನು ನೀಡಿದಾಗ ಮಾತ್ರವೇ ಸರ್ಕಾರಿ ಶಾಲೆ ಮಕ್ಕಳಿಗೆ ಗುಣಮಟ್ಟದ ಮತ್ತು ಮೌಲ್ಯಯುತ ಶಿಕ್ಷಣ ಕಲ್ಪಿಸುವುದು ಸಾಧ್ಯ.

ಅಂತರಾಳದಿಂದ..
EDITORIAL

ವಿದೇಶಗಳಲ್ಲಿ ಹೆಚ್ಚುತ್ತಿರುವ ಜನಾಂಗೀಯ ದ್ವೇಷ: ನಾವೆಷ್ಟು ಹೊಣೆ?

ಅಮೆರಿಕದ ಫಿಲಡೆಲ್ಫಿಯಾದಲ್ಲಿ ತೆಲಂಗಾಣ ಮೂಲದ 28 ವರ್ಷದ ಯುವಕನ ಬರ್ಬರ ಹತ್ಯೆಯಾಗಿದೆ. ಪಿಜ್ಜಾ ಆರ್ಡರ್ ನೆಪದಲ್ಲಿ ಕರೆಸಿಕೊಂಡ ದುಷ್ಕರ್ಮಿಗಳು ಗುಂಡು ಹಾರಿಸಿ ಯುವಕನನ್ನು ಹತ್ಯೆಗೈದಿದ್ದಾರೆ. ಮೃತ ಅಂಶುಲ್ ಬಹುರಾಷ್ಟ್ರೀಯ ಕಂಪೆನಿಯೊಂದರಲ್ಲಿ ಉದ್ಯೋಗಿಯಾಗಿದ್ದು, ಹೆಚ್ಚುವರಿ ಆದಾಯಕ್ಕಾಗಿ ವಾರಾಂತ್ಯಗಳಲ್ಲಿ ಪಿಜ್ಜಾಡೆಲಿವರಿ ಸಿಬ್ಬಂದಿಯಾಗಿ ಅರೆಕಾಲಿಕ ಕೆಲಸ ಮಾಡುತ್ತಿದ್ದ ಎಂದು ಕುಟುಂಬ ಮೂಲಗಳು ಹೇಳಿವೆ. ಯಾವುದೇ ದರೋಡೆ ನಡೆದಿಲ್ಲದ ಕಾರಣಕ್ಕಾಗಿ, ಜನಾಂಗೀಯ ಕಾರಣಕ್ಕಾಗಿಯೇ ಹತ್ಯೆ ನಡೆದಿರಬಹುದು ಎಂದು ಶಂಕಿಸಲಾಗಿದೆ. ಡೊನಾಲ್ಡ್ ಟ್ರಂಪ್ ಅಧ್ಯಕ್ಷರಾಗಿ ಆಯ್ಕೆಯಾದ ದಿನದಿಂದ ಅಮೆರಿಕ ಜನಾಂಗೀಯ ಹಲ್ಲೆ, ಹತ್ಯೆಗಳಿಗೆ ಕುಖ್ಯಾತವಾಗುತ್ತಿದೆ. ಟ್ರಂಪ್ ಆಡಳಿತವೇ ಜನಾಂಗೀಯವಾದಿ ನಿಲುವನ್ನು ಹೊಂದಿದೆ ಎನ್ನುವ ಆರೋಪವಿರುವಾಗ, ಇಂತಹ ಕೃತ್ಯಗಳು ಹೆಚ್ಚುತ್ತಿರುವುದರಲ್ಲಿ ಅಚ್ಚರಿಯೇನೂ ಇಲ್ಲ. ಅಂಶುಲ್ ಅವರು ಕಳೆದ ನಾಲ್ಕು ವರ್ಷಗಳಿಂದ ಅಮೆರಿಕದಲ್ಲಿ ವಾಸಿಸುತ್ತಿದ್ದರು. ಆತನ ಸಹೋದರಿ ಹೇಳುವಂತೆ ಇದೊಂದು ಜನಾಂಗೀಯ ಹತ್ಯೆಯಾಗಿದೆ. ಅಮೆರಿಕಕ್ಕೆ ಹೋಗುವುದು ಬೇಡವೆಂದು ನಾವು ಒತ್ತಡ ಹಾಕಿದ್ದರೂ ಆತ ಮಹತ್ವಾಕಾಂಕ್ಷೆಯಿಂದ ದೇಶ ತೊರೆದಿದ್ದ. ಕನಸುಗಳನ್ನು ಹೊತ್ತು ಅಮೆರಿಕ ತೆರಳುವವರಿಗೆಲ್ಲ ಇದು ಪಾಠವಾಗಿದೆ. ದಯವಿಟ್ಟು ನಿಮ್ಮ ಮಕ್ಕಳನ್ನು ಅಮೆರಿಕಕ್ಕೆ ಕಳುಹಿಸಬೇಡಿ ಎಂದು ಗೋಗರೆದಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಅಮೆರಿಕ ಮಾತ್ರವಲ್ಲ, ಇತರ ಹಲವು ದೇಶಗಳಲ್ಲಿ ಭಾರತೀಯರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿವೆ. ಜಾಗತಿಕವಾಗಿ ಹೆಚ್ಚುತ್ತಿರುವ ಆರ್ಥಿಕ ಬಿಕ್ಕಟ್ಟು ಹೆಚ್ಚುತ್ತಿರುವ ನಿರುದ್ಯೋಗ ಇವೆಲ್ಲವೂ ಸ್ಥಳೀಯರಲ್ಲಿ ಜನಾಂಗೀಯವಾದ ಹೆಚ್ಚುವುದಕ್ಕೆ ಕಾರಣವಾಗಿರಬಹುದು. ವಿದೇಶಗಳಲ್ಲಿ 2019ರಿಂದ ಜನಾಂಗೀಯ ದಾಳಿಗಳು ತೀವ್ರವಾಗಿ ಹೆಚ್ಚಳಗೊಂಡಿವೆ. ಕಳೆದ ಹತ್ತು ವರ್ಷಗಳಲ್ಲಿ ಕೆನಡಾದಲ್ಲಿ ಜನಾಂಗೀಯ ಕಾರಣಕ್ಕಾಗಿ ನಡೆದ ದಾಳಿಗೆ ಸಂಬಂಧಿಸಿ 40ಕ್ಕೂ ಅಧಿಕ ಪ್ರಕರಣಗಳು ದಾಖಲಾಗಿವೆ. ಅಮೆರಿಕದಲ್ಲಿ 15 ಪ್ರಕರಣಗಳು ದಾಖಲಾಗಿದ್ದರೆ, ಜರ್ಮನಿಯಲ್ಲಿ 14 ಪ್ರಕರಣಗಳು ದಾಖಲಾಗಿವೆ. ಸಿಂಗಾಪುರದಲ್ಲಿ ಭಾರತೀಯ ಸಮುದಾಯವನ್ನೇ ಗುರಿಯಾಗಿಸಿಕೊಂಡು ಆನ್‌ಲೈನ್‌ನಲ್ಲಿ ಜನಾಂಗೀಯ ದ್ವೇಷ ಮತ್ತು ಪ್ರಚೋದನಕಾರಿ ವೀಡಿಯೊಗಳನ್ನು ಹರಡಲಾಗುತ್ತಿರುವ ಬಗ್ಗೆ ವರದಿಯಾಗಿವೆ. ಸಾಮಾಜಿಕ ಸಾಮರಸ್ಯಕ್ಕೆ ಧಕ್ಕೆ ತರುತ್ತಿದ್ದ ಇಂತಹ 14 ವೀಡಿಯೊ ಪೋಸ್ಟ್‌ಗಳನ್ನು ಸಿಂಗಾಪುರ ಸರಕಾರ ಇತ್ತೀಚೆಗೆ ಬ್ಲಾಕ್ ಮಾಡಲು ಆದೇಶಿದೆ. 2025ರ ಅಂಕಿಅಂಶಗಳ ಪ್ರಕಾರ ವಿದೇಶಗಳಲ್ಲಿ ಓದುತ್ತಿರುವ ಭಾರತೀಯ ವಿದ್ಯಾರ್ಥಿಗಳಿಂದ ದಾಖಲಾದ ಒಟ್ಟು ದೂರುಗಳ ಸಂಖ್ಯೆ 350 ದಾಟಿದೆ. ಕೇವಲ ಮಾಸ್ಕೊದಿಂದಲೇ ಅತಿ ಹೆಚ್ಚು ಅಂದರೆ 201 ದೂರುಗಳು ದಾಖಲಾಗಿರುವ ಬಗ್ಗೆ ಮಾಹಿತಿಗಳಿವೆ. ಕಳೆದ ಹತ್ತು ವರ್ಷಗಳಲ್ಲಿ ಭಾರತೀಯರ ಕುರಿತಂತೆ ವಿದೇಶಗಳಲ್ಲಿ ಅಸಹನೆ ಹೆಚ್ಚುವುದಕ್ಕೆ ಕಾರಣಗಳನ್ನು ಕಂಡುಕೊಳ್ಳುವುದು ಅತ್ಯಗತ್ಯವಾಗಿದೆ.

ಹಿಂಸಾಚಾರದಲ್ಲಿ ತೀವ್ರ ಹೆಚ್ಚಳ

ಬೇರೆ ದೇಶಗಳಿಂದ ಬಂದ ಜನರು ತಮ್ಮ ಉದ್ಯೋಗ, ಸಂಪನ್ಮೂಲಗಳನ್ನು ಕಸಿಯುತ್ತಿರುವುದೇ ತಮ್ಮ ಸ್ಥಿತಿಗೆ ಕಾರಣ ಎಂದು ಅವರು ತಪ್ಪು ತಿಳಿದುಕೊಂಡು ವಲಸಿಗರನ್ನು ದ್ವೇಷಿಸಬಹುದು. ವಿದೇಶಗಳಲ್ಲಿ ಇತ್ತೀಚೆಗೆ ಭಾರತೀಯರ ಮೇಲೆ ನಡೆಯುತ್ತಿರುವ ಹಿಂಸಾಚಾರದಲ್ಲಿ ತೀವ್ರ ಹೆಚ್ಚಳವಾಗಿರುವುದನ್ನು ಭಾರತ ಒಪ್ಪಿಕೊಂಡಿದೆ. ಆದರೆ ಇದಕ್ಕೆ ಜನಾಂಗೀಯ ದ್ವೇಷವೇ ಕಾರಣ ಎನ್ನುವಂತಿಲ್ಲ ಎಂದೂ ಸರಕಾರ ಅಭಿಪ್ರಾಯ ಪಡುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ವಿದೇಶಗಳಲ್ಲಿ ರಸ್ತೆ ಅಪಘಾತಗಳಲ್ಲಿ 1,622 ಜನರು ಮೃತಪಟ್ಟಿದ್ದರೆ, 1,736 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸಾವಿರಾರು ಯುವಕರು ಅಮೆರಿಕ ಸೇರಿದಂತೆ ಪಾಶ್ಚಿಮಾತ್ಯ ದೇಶಗಳಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಒಂದು ಕಾಲದಲ್ಲಿ ಭಾರತೀಯ ಪ್ರತಿಭೆಗಳ ಬಗ್ಗೆ ವಿದೇಶಗಳಲ್ಲೂ ಸಾಕಷ್ಟು ಗೌರವವಿತ್ತು. ಆದರೆ ಇಂದು ಭಾರತೀಯ ವಿದ್ಯಾರ್ಥಿಗಳು ಮತ್ತು ಯುವಕರ ಬಗ್ಗೆ ವಿದೇಶಗಳಲ್ಲಿ ಪೂರ್ವಾಗ್ರಹ ಹೆಚ್ಚುತ್ತಿದೆ.

ಇದಕ್ಕಾಗಿ ವಿದೇಶಗಳಲ್ಲಿ ಹೆಚ್ಚುತ್ತಿರುವ ಜನಾಂಗೀಯ ದ್ವೇಷವನ್ನಷ್ಟೇ ಹೊಣೆ ಮಾಡಿ ನಾವು ನುಣುಚಿಕೊಳ್ಳುವಂತಿಲ್ಲ. ಈ ಜನಾಂಗೀಯ ದ್ವೇಷಗಳಿಗೆ ಭಾರತೀಯರ ಕೊಡುಗೆಗಳೂ ಇವೆ. ಕಳೆದ ಹತ್ತು ವರ್ಷಗಳಲ್ಲಿ ಭಾರತದ ವರ್ಚಸ್ಸು ವಿದೇಶಗಳಲ್ಲಿ ಇಳಿಕೆಯಾಗುತ್ತಿರುವುದು ಇಂತಹ ದಾಳಿ ಹೆಚ್ಚುವುದಕ್ಕೆ ಪ್ರಮುಖ ಕಾರಣವಾಗಿದೆ. ಅಮೆರಿಕ ಸೇರಿದಂತೆ ಪಾಶ್ಚಿಮಾತ್ಯ ದೇಶಗಳಿಗೆ ವಲಸೆ ಹೋಗುತ್ತಿರುವ ಭಾರತೀಯರ ಸಂಖ್ಯೆ ಹೆಚ್ಚುತ್ತಿರುವುದು ಮತ್ತು ಅಕ್ರಮವಾಗಿ ವಲಸೆ ಹೋಗುವವರ ಸಂಖ್ಯೆಯೂ ಅಧಿಕವಾಗಿರುವುದು ಸ್ಥಳೀಯರಲ್ಲಿ ಅಸಹನೆ ಹೆಚ್ಚುವುದಕ್ಕೆ ಕಾರಣವಾಗಿದೆ.

ಅಂತರಂಗದ ಮಾತು

ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

ಪೈಲ್ವಾನರ ಬಾಹುಬಲದ ಗುಟ್ಟು: ಒಳಿಕೆ ದಂಡ

ತೋಳುಗಳ ಮೇಲೆ ದೇಹದ ಭಾರ ಬಿದ್ದಾಗ ಭುಜದ ಸ್ನಾಯುಗಳು ಕಲ್ಲಿನಂತೆ ಗಟ್ಟಿಯಾಗಿ, ಎದುರಾಳಿಯನ್ನು ಎತ್ತಿ ಎಸೆಯುವ ಮಿಂಚಿನ ಶಕ್ತಿ ಸಿಗುತ್ತದೆ. ಕಮಾನಿನಂತೆ ಬಾಗುವ ಈ ದಂಡ ಬೆನ್ನುಮೂಳೆಗೆ ನಮ್ಯತೆ ಕೊಟ್ಟು ರಕ್ತದ ಹರಿವನ್ನು ಚುರುಕುಗೊಳಿಸುತ್ತದೆ. ಬೆನ್ನು ನೋವಿಗೆ ಮದ್ದಾಗಿ, ಎದುರಾಳಿಯ ಒತ್ತಡವನ್ನು ತಡೆದು ಮೈಯನ್ನು ಕಾಪಾಡುವ ಗುರಾಣಿಯಾಗುತ್ತದೆ.

ಕೆಮ್ಮಣ್ಣಿನ ಗರಡಿಯಲ್ಲಿ ಬೆಳೆದ ಪೈಲ್ವಾನನ ಮೈ ಕೇವಲ ಮಾಂಸದ ಗುಪ್ಪೆಯಲ್ಲ, ಅದು ಶ್ರಮದಿಂದ ರೂಪಿಸಿದ ಶಕ್ತಿಯ ಕಲಶ. ಕುಸ್ತಿ ಅಖಾಡದಲ್ಲಿ ಎದುರಾಳಿಯ ಬಿಗಿ ಹಿಡಿತವನ್ನು ಕ್ಷಣದಲ್ಲಿ ಮುರಿದು ಗೆಲುವು ಸಾಧಿಸಲು ಹಿರಿಯರು ಕೊಟ್ಟ ಉಡುಗೊರೆಯೇ ಒಳಿಕೆ ದಂಡ. ಇದು ಸಾಮಾನ್ಯ ಕಸರತ್ತಲ್ಲ, ದೇಹವನ್ನು ವಜ್ರದಂತೆ ಗಟ್ಟಿಯಾಗಿಸುವ ನಮ್ಮ ನೆಲದ ಕಲೆ. ಪರ್ವತದಂತೆ ನಿಂತು ಹಾವಿನಂತೆ ಎದೆಯನ್ನು ನೆಲಕ್ಕೆ ತೀಡಿ ಮುನ್ನುಗ್ಗುವ ಈ ಚಲನೆ ಮೈಯ ಎಲ್ಲಾ ಕೀಲುಗಳಿಗೂ ಚುರುಕು ನೀಡುತ್ತದೆ. ಅಖಾಡದಲ್ಲಿ ಕೆಳಗೆ ಬಿದ್ದಾಗ ಜಾಣತನದಿಂದ ನುಸುಳಿ ಹೊರಬರುವ ಚಾಕಚಕ್ಯತೆಯನ್ನು ಇದೇ ಕಲಿಸುತ್ತದೆ. ಹೊಟ್ಟೆಯ ಸ್ನಾಯುಗಳಿಗೆ ಮೃದುವಾಗಿ ಒತ್ತಡ ಬಿದ್ದು ಹಸಿವು ಹೆಚ್ಚುತ್ತದೆ, ಹಾಲು-ತುಪ್ಪದ ಪೋಷಕಾಂಶ ಮೈಗೆ ಸೇರುತ್ತದೆ.ಆದರೆ ಇದು ಕಷ್ಟದ ಅಭ್ಯಾಸ.

ಗರಡಿಯ ಗುರುಗಳ ಎದುರೇ ಕಲಿಯಿರಿ. ಮೊದಲು ದೇಹವನ್ನು ಬೆಚ್ಚಗಾಗಿಸಿ, ಉಸಿರಾಟವನ್ನು ನಿಯಂತ್ರಿಸಿ. ಕುತ್ತಿಗೆ-ಬೆನ್ನನ್ನು ಅತಿಯಾಗಿ ಹಿಂದಕ್ಕೆ ಬಾಗಿಸಿ ನೋವು ಮಾಡಿಕೊಳ್ಳಬೇಡಿ.ಯಂತ್ರಗಳ ಜಿಮ್ ವ್ಯಾಮೋಹದ ಕಾಲದಲ್ಲಿ, ಒಳಿಕೆ ದಂಡವೇ ನಮ್ಮ ಮಣ್ಣಿನ ಪರಿಹಾರ. ಇದು ದೇಹದ ಸೌಂದರ್ಯವಷ್ಟೇ ಅಲ್ಲ, ಮನಸ್ಸಿಗೆ ಏಕಾಗ್ರತೆ, ತಾಳ್ಮೆ ಕಲಿಸುವ ಸಾಧನೆ. ಪೈಲ್ವಾನರ ಈ ಪಾರಂಪರಿಕ ಶಕ್ತಿ ನಮ್ಮನ್ನು ಬಲಿಷ್ಠ ದೇಹದ ಕಡೆಗೆ ಕೊಂಡೊಯ್ಯುವುದರಲ್ಲಿ ಅನುಮಾನವಿಲ್ಲ.



ಹೊಟ್ಟೆಯಲ್ಲಿ ನೆಲ್ಲಿಕಾಯಿ ಸೇವನೆ ಮಾಡಿದರೆ ಈ ಆರೋಗ್ಯ ಲಾಭ ಸಿಗಲಿದೆ!

ಕೆಲಸದ ಒತ್ತಡ, ಆಧುನಿಕ ಆಹಾರ ಪದ್ಧತಿಯಿಂದಾಗಿ ಅನೇಕರು ನಾನಾ ರೀತಿಯ ಆರೋಗ್ಯ ಸಮಸ್ಯೆಗೆ ತುತ್ತಾಗುತ್ತಿದ್ದಾರೆ. ಅದರಲ್ಲೂ ಅನಾರೋಗ್ಯಕ್ಕೆ ತುತ್ತಾಗಿದ್ದೇವೆ ಎಂದಾಗ ದುಬಾರಿ ಚಿಕಿತ್ಸೆಯ ಮೊರೆ ಹೋಗುತ್ತೇವೆ. ಆದರೆ ಕೆಲವೊಮ್ಮೆ ನಮ್ಮ ಅಡುಗೆ ಮನೆಯಲ್ಲೇ ಸಿಗುವ ಸುಲಭ ಆಹಾರದ ಮೂಲಕ ಚಿಕಿತ್ಸೆ ಪಡೆಯಬಹುದು. ಅದರಲ್ಲಿ ಪ್ರಮುಖವಾಗಿ ನೆಲ್ಲಿಕಾಯಿ ಕೂಡ ಒಂದಾಗಿದ್ದು ಗಾತ್ರದಲ್ಲಿ ಚಿಕ್ಕದಾಗಿದ್ದರೂ, ಇದು ವಿಟಮಿನ್ ಸಿ, ಉತ್ಕರ್ಷಣ ನಿರೋಧಕಗಳನ್ನು ನೀಡುತ್ತವೆ. ಆರೋಗ್ಯ ತಜ್ಞರ ಸಲಹೆಯಂತೆ ಪ್ರತಿದಿನ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಹಸಿ ನೆಲ್ಲಿಕಾಯಿ ಸೇವನೆ ಮಾಡಿದರೆ ಹಲವು ಆರೋಗ್ಯ ಲಾಭವನ್ನು ಪಡೆಯಬಹುದು. ಸಾಮಾನ್ಯವಾಗಿ ಸಕ್ಕರೆ ಪ್ರಮಾಣ ದೇಹದಲ್ಲಿ ಹೆಚ್ಚಿರುತ್ತದೆ. ಇದನ್ನು ತಡೆಯಲು ನೀವು ನೆಲ್ಲಿಕಾಯಿ ಬಳಕೆ ಮಾಡ ಬಹುದು. ಹಣ್ಣಿನಲ್ಲಿರುವ ನಾರಿನ ಅಂಶವವು ದೇಹದಲ್ಲಿ ಸಕ್ಕರೆ ಅಂಶ ತ್ವರಿತವಾಗಿ ಕರಗುವಂತೆ ಮಾಡುತ್ತದೆ. ಇದು ರಕ್ತದಲ್ಲಿನ ಸಕ್ಕರೆಯ ಪ್ರಮಾಣವನ್ನು ಇದ್ದಕ್ಕಿದ್ದಂತೆ ಏರಿಕೆಯಾಗದಂತೆ ತಡೆಯಲು ಸಹಕಾರಿಯಾಗುತ್ತದೆ. ಆಮ್ಲವು ಚರ್ಮದ ರಕ್ಷಣೆಗೆ ಹೆಸರುವಾಸಿಯಾಗಿದೆ. ಹೆಚ್ಚಿನ ವಿಟಮಿನ್ ಸಿ ಅಂಶವು ದೇಹಕ್ಕೆ ಕಾಲಜನ್ ಅನ್ನು ಉತ್ಪಾದಿಸಲು ಸಹಾಯ ಮಾಡುತ್ತದೆ.

ಇದು ಚರ್ಮವನ್ನು ರಕ್ಷಣೆ ಮಾಡಿ ಕೂದಲನ್ನು ಹೊಳೆಯುವಂತೆ ಮಾಡುತ್ತದೆ. ಜೀರ್ಣಕ್ರಿಯೆಗೆ, ಆಮ್ಲಾ ನೈಸರ್ಗಿಕ ಕ್ಲೆನ್ಸರ್ ಆಗಿಯೂ ಕಾರ್ಯನಿರ್ವಹಿಸುತ್ತದೆ. ಇದು ಕರುಳಿನ ಆರೋಗ್ಯವನ್ನು ಸುಧಾರಿಸಿ, ಜೀರ್ಣಕ್ರಿಯೆಯನ್ನು ಸರಾಗವಾಗಿ ಪ್ರೇರಿಪಿಸುತ್ತದೆ. ಖಾಲಿ ಹೊಟ್ಟೆಯಲ್ಲಿ ಆಮ್ಲಾ ಸೇವಿಸುವುದು ಜೀರ್ಣಕಾರಿ ರಸವನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ.

ಆಮ್ಲಾವು ಯಕೃತ್ತಿಗೆ ಹೆಚ್ಚು ಉಪಯೋಗಕಾರಿಯಾಗಿದೆ. ಆಮ್ಲಾದಲ್ಲಿರುವ ಕೆಲವು ಸಂಯುಕ್ತಗಳು ಯಕೃತ್ತು ತನ್ನ ನೈಸರ್ಗಿಕ ಪ್ರಕ್ರಿಯೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಹಾಯ ಮಾಡುತ್ತದೆ.

ಮಹಾಭಾರತ ಯುದ್ಧವು ಮುಗಿದಿತ್ತು. ಅದರಿಂದ ಉಂಟಾದ ಮಹಾ ವಿನಾಶವು ಎಲ್ಲೆಲ್ಲೂ ಕಂಡುಬರುತ್ತಿತ್ತು. ವಾತಾವರಣದಲ್ಲಿ ದುಃಖ-ದುಮ್ಮಾನಗಳು ದಟ್ಟವಾಗಿ ವ್ಯಾಪಿಸಿದ್ದವು. ಮಹಾಭಾರತ ಯುದ್ಧವು ಸಾವನ್ನು ತರದ ಯಾವುದೇ ಒಂದು ಮನೆಯು ಭರತವರ್ಷದಲ್ಲಿ ಇರಲಿಲ್ಲ ಎಂದೇ ಹೇಳಬಹುದು.

ಪ್ರತಿಯೊಬ್ಬನಿಗೂ ಒಂದಿಲ್ಲೊಂದು ನಷ್ಟ ಆಗಿಯೇ ಆಗಿತ್ತು. ಯುದ್ಧದಲ್ಲಿ ವಿಜಯ ದೊರೆತು ಸಾಮ್ರಾಜ್ಯವು ಕೈವಶವಾಗಿದ್ದರೂ ಚಕ್ರವರ್ತಿ ಯುಧಿಷ್ಠಿರನ ಮನಸ್ಸಿಗೆ ನೆಮ್ಮದಿ ಇಲ್ಲವಾಯ್ತು. ಯುದ್ಧವು ತಂದಿರುವ ಜೀವ ಹಾನಿ ಹಾಗೂ ಆಸ್ತಿಪಾಸ್ತಿ ಹಾನಿಯಿಂದ ಅವನಿಗೆ ದುಃಖವಾಗಿತ್ತು. ಯುದ್ಧದಲ್ಲಿ ಸತ್ತ ವೀರ ಅಭಿಮನ್ಯುವಿನ ಹೆಂಡತಿ ಉತ್ತರೆಯು ಗರ್ಭಿಣಿಯಾಗಿದ್ದಳು.

ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

ಕುರುಕ್ಷೇತ್ರ ಯುದ್ಧದ ಪರಿಣಾಮ....

ಪಾಂಡವರ ಮುಂದಿನ ಪೀಳಿಗೆಯ ಬಾಕಿಯುಳಿದ ಒಂದೇ ಒಂದು ಪಿಂಡ ಅವಳ ಗರ್ಭದಲ್ಲಿತ್ತು. ಇದರಿಂದ ದ್ರೋಣಾಚಾರ್ಯನ ಮಗ ಅಶ್ವತ್ಥಾಮನಿಗೆ ಅಸಮಾಧಾನವೂ ಆಗಿತ್ತು. ಅವನಿಗೆ ಪಾಂಡವರ ಬಗ್ಗೆ ಅಸೂಯೆಯೂ ಪ್ರತೀಕಾರ ಭಾವನೆಯೂ ತೀವ್ರವಾಗಿತ್ತು. ಉತ್ತರೆಯ ಗರ್ಭದಲ್ಲಿ ಬೆಳೆಯುತ್ತಿರುವ ಪಾಂಡವರ ಏಕೈಕ ಕುಡಿಯನ್ನು ಕಮರಿಸಲು ಅವನು ಹೊಂಚು ಹಾಕುತ್ತಿದ್ದ. ಅತ್ತ ಪಾಂಡವರು ಧೃತರಾಷ್ಟ್ರನ ಯಾವೊಂದು ಸಂತಾನವೂ ಉಳಿಯದಂತೆ ಹೊಸಕಿ ಹಾಕಿದ್ದರು. ಅದೇ ಗತಿ ಪಾಂಡವರಿಗೂ ಬರಬೇಕೆಂದು ಅಶ್ವತ್ಥಾಮ ಬಯಸಿದ್ದ. ದ್ರೌಪದಿಯ ಐವರು ಮಕ್ಕಳನ್ನು – ಅವರು ನಿದ್ರೆಯಲ್ಲಿದ್ದಾಗ – ಅಶ್ವತ್ಥಾಮನು ಕೊಂದು ಹಾಕಿದ್ದ. ಉತ್ತರೆಯ ಗರ್ಭದಲ್ಲಿದ್ದ ಭ್ರೂಣವನ್ನು ಅವನು ನಾಶ ಮಾಡಿದ್ದರೆ ಅಲ್ಲಿಗೆ ಪಾಂಡವರ ವಂಶವೂ ಮುರುಟಿ ಹೋಗುತ್ತಿತ್ತು. ಅವರ ವಂಶದ ರಾಜ್ಯಭಾರ ಅಲ್ಲಿಗೇ ಮುಗಿಯುತ್ತಿತ್ತು. ಆದರೆ ಪಾಂಡವರಿಗೆ ಕೃಷ್ಣ ಪರಮಾತ್ಮನ ರಕ್ಷಣೆಯಿತ್ತು.

ಅಶ್ವತ್ಥಾಮನು ತನ್ನ ಮಾರಕವಾದ ಬ್ರಹ್ಮಾಸ್ತ್ರವನ್ನು ಉತ್ತರೆಯ ಗರ್ಭದತ್ತ ಹೊಡೆದಾಗ ಶ್ರೀಕೃಷ್ಣನು ಅದನ್ನು ತನ್ನ ದೈವೀಶಕ್ತಿಯಿಂದ ತಡೆದು ನಿಲ್ಲಿಸಿದ್ದ. ಆಗ ಆ ಭ್ರೂಣದ ಸುತ್ತಲೂ ದೈವೀ ಶಕ್ತಿಯ ಭದ್ರವಾದ ರಕ್ಷಣಾ ಪೊರೆಯೊಂದು ನಿರ್ಮಾಣವಾಗಿತ್ತು. ಇದು ಆ ಶಿಶುವನ್ನು ಜನ್ಮ ತಳೆಯುವುದಕ್ಕೆ ಮೊದಲೇ ಶ್ರೀಕೃಷ್ಣನ ಪರಮ ಭಕ್ತನನ್ನಾಗಿ ಮಾಡಿತ್ತು. ನವಮಾಸ ತುಂಬಿದಾಗ ಉತ್ತರೆಯು ಆರೋಗ್ಯಶಾಲಿಯಾದ ಗಂಡು ಶಿಶುವಿಗೆ ಜನ್ಮವಿತ್ತಳು. ಅಶ್ವತ್ಥಾಮನ ಬ್ರಹ್ಮಾಸ್ತ್ರದ ಯಾವುದೇ ಪ್ರತಿಕೂಲ ಪರಿಣಾಮಗಳು ಅದರ ಮೇಲೆ ಕಂಡು ಬರಲಿಲ್ಲ. ಮನೆಯಲ್ಲಿ ಪುತ್ರ ಸಂತಾನವಾದುದು ಯುಧಿಷ್ಠಿರನಿಗೆ ಸ್ವಲ್ಪ ಮಟ್ಟಿಗೆ ಸಮಾಧಾನವಾಯಿತು. ನವಜಾತ ಶಿಶುವಿನ ಜನ್ಮ ಕುಂಡಲಿ ನೋಡಲು ಅವನು ಜ್ಯೋತಿಷಿಗಳನ್ನು ಕರೆಸಿದ. ''ಈ ಹುಡುಗ ಬಲು ಕೀರ್ತಿವಂತನಾದ ರಾಜನಾಗುವನು. ಇವನು ದೈವಭಕ್ತನೂ ಧರ್ಮಬೀರುವೂ ಪ್ರಜೆಗಳ ಕ್ಷೇಮಾಭ್ಯುದಯ ಹಾರೈಸುವವನೂ ಆಗಿರುತ್ತಾನೆ. ಅವನು ಪಾಂಡವರ ಕೀರ್ತಿಯನ್ನು ನಾಡಿನ ಉದ್ದಗಲಕ್ಕೂ ಬೆಳಗುವನು'' ಎಂದು ಜ್ಯೋತಿಷಿಗಳು ಹೇಳಿದರು. ಇದರಿಂದ ಪಾಂಡವರಿಗೆ ಆತಂಕ ನಿವಾರಣೆಯಾಯಿತು. ರಾಜಕುಮಾರನಿಗೆ ಪರೀಕ್ಷಿತನೆಂದು ಹೆಸರಿಟ್ಟರು. ಅವನು ಸರ್ವ ವಿದ್ಯೆಗಳನ್ನೂ ಕರಗತ ಮಾಡಿಕೊಂಡು ಸಮರ್ಥನಾದ ಯುವಕನಾಗಿ ಬೆಳೆದುನಿಂತ. ಒಬ್ಬ ಋಷಿಯ ಶಾಪದ ನಿಮಿತ್ತ ಅವನು ಸಾವನ್ನು ಪಡೆದರೂ ಅದಕ್ಕೆ ಮೊದಲೇ ಜೀವನದಲ್ಲಿ ಬಹಳಷ್ಟು ಸಾಧನೆಗಳನ್ನು ಮಾಡಿದ. ಜ್ಯೋತಿಷಿಗಳು ನುಡಿದ ಭವಿಷ್ಯ ವಾಣಿಯನ್ನೆಲ್ಲ ನಿಜ ಮಾಡಿದ. ಇಂದ್ರಪ್ರಸ್ಥ-ಹಸ್ತಿನಾಪುರ ರಾಜ್ಯದ ದೊರೆಯಾಗಿ ಅವನು ಅಪಾರ ಕೀರ್ತಿಯನ್ನು ಪಡೆದ. ಮಹಾಭಾರತ ಯುದ್ಧದ ಕಹಿಭಾವನೆಗಳನ್ನು ಪ್ರಜಾಜನರ ಮನಸ್ಸಿನಿಂದ ಅಳಿಸಿ ಹಾಕಲು ಅವನು ತನ್ನ ಉತ್ತಮ ರಾಜ್ಯಭಾರದಿಂದ ಸಾಕಷ್ಟು ಪ್ರಯತ್ನಪಟ್ಟ. ಯಾದವರ ಈ ರೀತಿಯ ಅವನತಿಯು ಶ್ರೀಕೃಷ್ಣನಿಗೆ ಅಪಾರ ದುಃಖವನ್ನು ಉಂಟು ಮಾಡಿತು. ಪರಸ್ಪರ ಬಡಿದಾಟ, ಹೋರಾಟಗಳಲ್ಲಿ ಯಾದವ ನಾಯಕರು ಒಬ್ಬನಾದ ನಂತರ ಒಬ್ಬ ಸಾಯುತ್ತಿರುವುದನ್ನು ಕೃಷ್ಣನು ಅಸಹಾಯಕನಾಗಿ ನೋಡ ಬೇಕಾಯಿತು. ಅವನೂ ನಿವೃತ್ತಿ ಬಯಸಿ ತನ್ನ ಮೂಲ ನಿವಾಸಕ್ಕೆ ಅಂದರೆ ವಿಷ್ಣು ಲೋಕಕ್ಕೆ ಹೋಗಲು ಬಯಸಿದ. ಭೂಲೋಕದಲ್ಲಿ ಈಗ ಅವನು ಮಾಡಬೇಕಾದುದು ಏನೂ ಉಳಿದಿರಲಿಲ್ಲ. ವಿದುರನು ತೀರ್ಥಯಾತ್ರೆಯಿಂದ ವಾಪಸು ಬಂದ. ಕೌರವರ ತಂದೆ ಧೃತರಾಷ್ಟ್ರ ಇನ್ನೂ ಹಸ್ತಿನಾಪುರದಲ್ಲೇ ವಾಸ ಮಾಡುತ್ತಿದ್ದ. ಅವನ ಸ್ಥಿತಿಯನ್ನು ಕಂಡು ವಿದುರನು ಅವನಿಗೆ ಹೀಗೆ ಹೇಳಿದ : ''ಪೂಜ್ಯನೆ, ನಾವೆಲ್ಲರೂ ವೃದ್ಧರಾಗಿದ್ದೇವೆ. ಇನ್ನೇನು ಇಂದೋ ನಾಳೆಯೋ ಸಾವು ಬರಬಹುದು. ಹಾಗಾಗಿ ನಾವು ದಿಕ್ಕು-ದೆಸೆಯಿಲ್ಲದೆ ಹಸ್ತಿನಾಪುರಿಯಲ್ಲಿ ಏನು ಮಾಡೋಣ? ನಮ್ಮ ಜೀವನಕ್ಕೆ ಏನಾದರೂ ಅರ್ಥವಿದೆಯೆ? ನಾವು ಇಲ್ಲಿಂದ ಹೊರಟು ಹೋಗೋಣ. ನಿನ್ನ ಸ್ಥಿತಿಯಂತೂ ಬಲು ದಯನೀಯವಾಗಿದೆ.

ಇತ್ತ ಯುಧಿಷ್ಠಿರನು ಮಹಾಭಾರತ ಯುದ್ಧಾನಂತರ ಶ್ರೀಕೃಷ್ಣನ ಸಲಹೆಯ ಮೇರೆಗೆ ಮೂರು ಅಶ್ವಮೇಧ ಯಾಗಗಳನ್ನು ಮಾಡಿದ. ಆದರೂ ಮಹಾಭಾರತ ಯುದ್ಧದಿಂದ ಆದ ಜೀವಹಾನಿಯಿಂದ ಉಂಟಾದ ಅವನ ಮನಸ್ಥಿತಿ ಸಂಪೂರ್ಣವಾಗಿ ತಿಳಿಯಾಗಲಿಲ್ಲ. ಅವನ ಅಪರಾಧ ಪ್ರಜ್ಞೆಯೂ ಸಂಪೂರ್ಣ ಅಳಿಸಿ ಹೋಗಲಿಲ್ಲ. ಇದಾದ ಮೇಲೆ ಕೆಲವು ದಿನಗಳ ನಂತರ ಶ್ರೀಕೃಷ್ಣ ತನ್ನ ರಾಜಧಾನಿಯಾದ ದ್ವಾರಕೆಗೆ ಹೊರಟುಹೋದ. ಅವನ ರಾಜ್ಯದಲ್ಲಿಯೂ ಪರಿಸ್ಥಿತಿ ನೆಟ್ಟಗಿರಲಿಲ್ಲ. ಒಬ್ಬ ಋಷಿಯ ಶಾಪದ ನಿಮಿತ್ತ ಯಾದವ ಕುಲದವರೆಲ್ಲ, ಕುಡಿತ, ಜೂಜು, ಹಾದರ, ಕೊಲೆ, ಸುಲಿಗೆ ಇತ್ಯಾದಿ ದುರ್ಗುಣ, ದುಷ್ಕೃತ್ಯಗಳಲ್ಲಿ ಮುಳುಗಿಹೋಗಿದ್ದರು. ಪರಸ್ಪರರನ್ನು ನಾಶ ಮಾಡುವುದೇ ಯಾದವರ ಪರಮ ಗುರಿಯಾಗಿದೆಯೋ ಎಂಬಂತೆ ಭಾಸವಾಗುತ್ತಿತ್ತು. ವಾಪಸು ಚೇತರಿಸಿಕೊಳ್ಳಲಾರದಂತಹ ವಿನಾಶದ ಪ್ರಪಾತದ ಕಡೆಗೆ ಯಾದವ ಕುಲ ನಾಗಾಲೋಟದಿಂದ ಸಾಗುತ್ತಿತ್ತು.

ವಿದುರನು ಹೀಗೆ ಛೇಡಿಸಿದಾಗ ಧೃತರಾಷ್ಟ್ರನಿಗೆ ಅವನ ಮಾತು ಸರಿಯೆನಿಸಿತು. ಅವನ ಪುತ್ರ ಶೋಕ ಇನ್ನೂ ಹೋಗಿರಲಿಲ್ಲ. ಬೇರಾವುದನ್ನೂ ಚಿಂತಿಸಲು ಅವನಿಗೆ ಸಾಧ್ಯವೇ ಆಗದ ಸ್ಥಿತಿಯಲ್ಲಿದ್ದನವನು. ವಿದುರನ ಮಾತು ಚಾಟಿಯೇಟಿನಂತೆ ಅವನನ್ನು ಬಡಿದೆಬ್ಬಿಸಿತು. ಅವನು ಕೂಡಲೇ ಪತ್ನಿ ಗಾಂಧಾರಿಯನ್ನೂ ವಿದುರನನ್ನೂ ಕೂಡಿಕೊಂಡು ಕಾಡಿಗೆ ಹೊರಟ. ಅಚ್ಚರಿಯೆಂದರೆ ಪಾಂಡವರ ತಾಯಿ ಕುಂತಿಯೂ ಈ ಮೂವರ ಜತೆ ಕಾಡಿಗೆ ಹೊರಟಳು. ಹೋಗಬೇಡವೆಂದು ಯುಧಿಷ್ಠಿರ ಪರಿಪರಿಯಿಂದ ಬೇಡಿಕೊಂಡರೂ ಅವಳು ಕೇಳಲಿಲ್ಲ. ಕೆಲ ಕಾಲದಲ್ಲೇ ಈ ವೃದ್ಧರೆಲ್ಲ ಕಾಡಿನಲ್ಲಿ ಮರಣ ಹೊಂದಿದರು. ಈ ವಾರ್ತೆಯಿಂದ ಯುಧಿಷ್ಠಿರನಿಗೆ ದುಃಖವಾಯಿತು. ಅವನು ಇನ್ನಷ್ಟು ಏಕಾಂತ ಪ್ರಿಯನೂ ಮೂಕನೂ ಆದ. ಇದರ ಜತೆಗೆ ದ್ವಾರಕೆಯಲ್ಲಿ ಯಾದವರೆಲ್ಲ ತಮ್ಮ ತಮ್ಮಲ್ಲೇ ಬಡಿದಾಡಿ ಸತ್ತು ಹೋಗಿದ್ದರು. ಶ್ರೀಕೃಷ್ಣನೂ ದೇಹತ್ಯಾಗ ಮಾಡಿ ವೈಕುಂಠಕ್ಕೆ ವಾಪಸು ಹೋಗಿದ್ದ. ಕೃಷ್ಣ ಇಲ್ಲದ ಪ್ರಪಂಚದಲ್ಲಿ ಇನ್ನು ತಮಗೆ ಬದುಕಾದರೂ ಎಲ್ಲಿದೆ ಎಂದು ಪಾಂಡವರು ವ್ಯಥೆ ಪಟ್ಟರು. ದ್ರೌಪದಿಯ ಅಳುವಿಗೆ ಸಾಂತ್ವನ ಹೇಳುವವರೇ ಇರಲಿಲ್ಲ. ಪಾಂಡವರಿಗೆ ಈಗ ದಾತಾರರೇ ಇರಲಿಲ್ಲ.

ಯುಧಿಷ್ಠಿರನ ಬಾಳಿನಲ್ಲಿ ಕತ್ತಲೆ ಕವಿಯಿತು. ಕೃಷ್ಣನೆಂಬ ಬೆಳಕು ಆರಿಹೋಗಿತ್ತು. ಯುಧಿಷ್ಠಿರನೂ ಅವನ ತಮ್ಮಂದಿರೂ ನಂತರ ಬಲು ಬೇಗನೇ ವೃದ್ಧರಾದರು. ಯುಧಿಷ್ಠಿರನು ಪರೀಕ್ಷಿತನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕ ಮಾಡಿದ. ನಂತರ ಸ್ವರ್ಗಾರೋಹಣ ಕಾರ್ಯ ಸುಲಭವಾಗಲೆಂದು ಅವನು ತಮ್ಮಂದಿರು ಹಾಗೂ ಪತ್ನಿ ದ್ರೌಪದಿಯೊಡನೆ ಹಿಮಾಲಯಕ್ಕೆ ಹೊರಟುಹೋದ. ಕಾಲನ ಮಹಿಮೆಯನ್ನು ಕಂಡವರಾರು? ದೇವರ ಅವತಾರಗಳನ್ನೂ ಅದು ಬಿಡದು.

ರಾಮಾಯಣ

ತನ್ನ ಕುರುಹಾಗಿ ಜನಕಜೆಯು ಹನುಮನಿಗೆ ತನ್ನ ಶಿರೋರತ್ನವನ್ನಿತ್ತು ಅವನನ್ನು ಬೀಳ್ಕೊಟ್ಟದು

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ತನ್ನ ಬಿಲ್ಲಿನಿಂದ ಠೇಂಕಾರ ಮಾಡಿ, ಗುಡುಗಿನಂತೆ ಹೂಂಕಾರಗೈಯುತ್ತ ಒಂದೇ ಬಾರಿಗೆ ಎಂಟು ಬಾಣಗಳನ್ನು ಹೂಡಿ ಬಾಣಗಳ ಮಳೆಗರೆದ; ಅದನ್ನು ಕಂಡು ದೇವತೆಗಳು ತಲ್ಲಣಗೊಂಡರು. ಆಗ ಮರುತ್ತಂಭೂತನು ಆಗಸದಿಂದ ಕೆಳಗಿಳಿದು ಬಂದು ಒಂದು ದೊಡ್ಡ ಸಾಲವೃಕ್ಷವನ್ನು ಕಿತ್ತು ಹೊಡೆಯಲು ಬಂದಾಗ ಗಂಡುಗಲಿಯಾದ ದೈತ್ಯನು ಕೆಂಗರಿಬಾಣಗಳಿಂದ ಆ ಮರ ವನ್ನು ತುಂಡುತುಂಡು ಮಾಡಿಬಿಟ್ಟ ಜಗತ್ತಿನಲ್ಲಿ ಕಾಳರುದ್ರನನ್ನು ಕೆಣಕಿ ಬದುಕಿದವರುಂಟೇ? ಹನುಮನ ಜೊತೆ ಸೆಣಸಿ ಈ ದೈತ್ಯಕುವರನು ಹೇಗೆ ಉಳಿದಾನು' ಎಂದು ಸುರರಲ್ಲರೂ ಆಡಿಕೊಳ್ಳುತ್ತಿರಲು, ಜಂಬುಮಾಲಿಯು ಗದೆಯನ್ನು ಹಿಡಿದು ಏರಿ ಬರಲು ಆಂಜನಾಸುತನು ಒಂದು ಗಿರಿಶಿಖರವನ್ನೇ ಕಿತ್ತು ಅವನ ಮೇಲೆಸೆಯಲು ಅಸುರಪಡೆ ತಲ್ಲಣಿಸಿತು. ಮಹಾವೀರನ ಆ ಹೊಡೆತದಿಂದ ರಥಸಾರಥಿ ಬಿಲ್ಲುಬಾಣಗಳೊಡನೆ ಜಂಬುಮಾಲಿಯು ದೈತ್ಯಪಡೆಗೆ ಕಾಣದಾಯಿತು, ಹಲವು ಬಗೆಯ ಭೀತಿ ಅವರನ್ನಾವರಿಸಿತು. ಕಲಿಯಾದ ಮರುತ್ತುತನು ಅರೆನಿಮಿಷದಲ್ಲಿಯೇ ಪ್ರಹಸ್ತಾತ್ಮಭವನ ಕುಲವನ್ನು ಒರೆಸಿ ಹಾಕಿದನೆಂದ ಮೇಲೆ ಅವನ ಪೌರುಷವೆಂತಹುದು ಬದುಕಿ ಉಳಿದಿದ್ದ ಒಬ್ಬ ಅಸುರನು ಆದ ಹಾನಿಯನ್ನೆಲ್ಲ ಕಂಡು ವಿಷಯವನ್ನು ದಶಕಂಧರನಿಗೆ ಅರುಹಿದ. ಆಗ ರಾವಣನ ಕೋಪದ ಬೆಂಕಿಗೆ ತುಪ್ಪ ಸುರಿದಂತಾಯಿತು; ಹನುಮನ ಮೇಲೆ ದಾಳಿ ಮಾಡಲು ಏಳು ಮಂದಿ ಮಂತ್ರಿಸುತರನ್ನು ಕಳಿಸಿದ. ಅವರೆಲ್ಲರೂ ಅಮಿತ ಸೇನೆಯೊಂದಿಗೆ ತಕ್ಷಣವೇ ಹೊರಟು ಅಂಜನಾಪುತ್ರನೆಡೆಗೆ ಬಂದರು. ಆನೆಗಳಂತೆ ಬೃಹದಾಕಾರದಿಂದ ಕೂಡಿ ಸಿಂಹದಂತೆ ಗರ್ಜಿಸುತ್ತ ಬಿಲ್ಲನ್ನು ಜೇವಡೆಯುತ್ತ ಆಗಸದಲ್ಲೆಲ್ಲ ಶಬ್ದವನ್ನು ತುಂಬಿ ಬರುತ್ತಿರಲು ಭೂಮಿ ಕಂಪಿಸಿತು, ದಿಕ್ಪಾಲಕರು ದಿಕ್ಕುಗೆಟ್ಟರು, ಸುರರು ಮರುಗಿದರು, ಪಾಪ, ಹನುಮನಿಗೆ ಈಗ ಗೆಲುವು ಹೇಗೆ ಸಿಕ್ಕೀತು!'' ಎಂದು ಮುನಿವರರು ಚಿಂತೆಗೊಳಗಾದರು. ಮಂತ್ರಿಸುತರೆಲ್ಲ ಬಂದು ವನದ ತೋರಣದಲ್ಲಿ ಕುಳಿತಿದ್ದ ವೀರಕಪಿಯನ್ನು ಕಂಡು ಅವನ ಮೇಲೆ ಬಾಣಗಳ ಮಳೆಗರೆದರು. ಅವರ ಕೈಚಳಕವನ್ನು ಗಮನಿಸಿದ ಹನುಮಂತನು ಅವರನ್ನು ಹೇಗೆ ಧ್ವಂಸ ಮಾಡಬೇಕೆಂದು ಆಲೋಚಿಸಿತ್ತ ತೋರಣದಿಂದ ಇಳಿದು ಬಂದ. ಮರದ ಕೊಂಬೆಯಿಂದ ಆ ಆನೆಗಳ ಹಿಂಡನ್ನು ಸದೆಬಡಿದು, ಕುದುರೆಗಳನ್ನು ಹೋಳುಮಾಡಿ. ರಥಗಳನ್ನು ಪುಡಿಪುಡಿ ಮಾಡಿ, ಪ್ರಳಯಭೈರವನು ಕಲ್ಪಾಂತಸಮಯದಲ್ಲಿ ಎಲ್ಲವನ್ನೂ ಸುಡುವ ರೀತಿಯಲ್ಲಿ ದೈತ್ಯ ಬಲವನ್ನೆಲ್ಲ ಧೂಳೀಪಟಮಾಡಿ, ಅಮಾತ್ಯಸುತರನ್ನು ಹಿಡಿಯಲು ಸಿದ್ಧನಾದ. ತಮ್ಮನ್ನು ಹಿಡಿಯಲು ಬರುತ್ತಿರುವ ಕಪಿಯನ್ನು ನೋಡಿದ ರಕ್ಕಸರು ಹರಿತ ಬಾಣಗಳಿಂದ ಅವನನ್ನು ಗಾಸಿಗೊಳಿಸುತ್ತ ಕತ್ತಿ ಶೂಲಗಳಿಂದ ಹೊಡೆಯುತ್ತ. ಬೊಬ್ಬಿರಿದರು. ಅಗಸ್ತ್ಯನು ಕಡಲ ಸಾಹಸಕ್ಕೆ ಹೆದರುವನೇ, ಹಿಮಗಿರಿಯು ಬೆಂಕಿಗೆ ಬೆದರುವುದೇ, ರಕ್ಕಸರ ದಾಳಿಗೆ ಮರುತಸುತ ಅಳುಕಿಯಾನೇ? ಬಾಣದ ಮಳೆಯನ್ನು ತಡೆದು, ರಥಗಳನ್ನು ಮುರಿದು ಹುಡಿಗುಟ್ಟಿ. ಒಬ್ಬೊಬ್ಬರನ್ನೂ ಹಿಡಿದು ನೆಲಕ್ಕೆ ಅಪ್ಪಳಿಸಿ, ದೈತ್ಯಬಲವನ್ನೆಲ್ಲ ಕಾಲಿಂದ ಒರೆಸಿ, ಕಾಲು ಕೈ ಮುಷ್ಟಿಗಳಿಂದ ಹೊಡೆದು ಅರೆನಿಮಿಷದಲ್ಲಿ ಎಲ್ಲವನ್ನು ಮಣ್ಣುಪಾಲು ಮಾಡಿ ಮತ್ತೆ ತೋರಣದ ಮೇಲೆ ಹೋಗಿ ನಿರುಮ್ಮಳನಾಗಿ ಕುಳಿತ. ದಾನವ ಮಂತ್ರಿಸುತರೆಲ್ಲರೂ ಕಪಿಯ ಕೋಪಬೆಂಕಿಗೆ ಆಹುತಿಯಾಗಲು, ಒಬ್ಬ ಉಳಿದವನಿಂದ ಕ್ಷಣಾರ್ಧದಲ್ಲಿ ಈ ವಿಷಯವೆಲ್ಲ ನಗರಾಧಿನಾಥನಾದ ದಶಾನನನಿಗೆ ತಿಳಿಯಿತು. ಅದನ್ನು ಕೇಳಿದಾಗ, 'ಇದೇನಾಶ್ಚರ್ಯ' ಎಂಬ ಉದ್ಗಾರ ಅವನ ಬಾಯಿಂದ ಹೊರಬಂತು; ಮುಂದಿನ ಗತಿ ತಿಳಿಯದೆ ಆಲೋಚಿಸುತ್ತ ನಿಂತ. ಒಂದು ಕೋಡಗವು ಬಂದು ಲಂಕಾನಗರಿಯನ್ನು ಹೊಕ್ಕುದು ಹೇಗೆ, ಅಶೋಕವನವನ್ನು ಮುರಿದದ್ದು ಎಂತು, ದೈತ್ಯರನ್ನು ಮಡುಹಿ ಜಂಬುಮಾಲಿಯನ್ನು ತರಿದು ಮಂತ್ರಿಸುತರನ್ನೆಲ್ಲ ಮಣ್ಣುಮುಕ್ಕಿಸಿದ್ದು ಹೇಗೆ, ಇದರ ನಿವಾರಣೆ ಯಾವ ರೀತಿ!' ಎಂದು ಆಲೋಚಿಸಿದ. ದೇವೇಂದ್ರನೇ ಮೊದಲಾದ ದಿಕ್ಪಾಲಕರು ಈ ಕಪಿರೂಪ ಧರಿಸಿ ಬಂದಿರಬೇಕು, ಇಲ್ಲದಿದ್ದರೆ ಶ್ರೀಹರಿಯೇ ವೈಕುಂಠದಿಂದ ವಾನರ ವೇಷವನ್ನು ತಾಳಿ ಇಳಿದು ಬಂದು ನಮ್ಮ ನಗರವನ್ನು ಹೊಕ್ಕು ರಕ್ಕಸಕುಲವನ್ನು ಕಣ್ಣು ಮುಚ್ಚಿ ಬಿಚ್ಚುವನಿತು ಬೇಗ ನಾಶಮಾಡಿರಬೇಕು. ಕಾಲವಶವನ್ನು ಮೀರಲು ಯಾರಿಗಾದರೂ ಸಾಧ್ಯವೇ? ಎಂದು ಚಿಂತಿಸಿದ. ''ಜಗದೀಶ ರಾಮನಿಂದ ನಾನು ಪ್ರಾಣಬಿಡಬೇಕೆಂದು ಬಯಸಿದುದಕ್ಕೆ ಅನುಗುಣವಾಗಿ ಲೋಕೇಶನು ಕೃಪೆಯಿಟ್ಟು ಕಪಿರೂಪದಿಂದ ಇಲ್ಲಿಗೆ ಬಂದಿರುವುದು ಸತ್ಯ, ಜಗತ್ತಿನಲ್ಲಿ ನಾನೇ ಧನ್ಯ, ನನ್ನ ಇಷ್ಟ ನೆರವೇರುವ ಕಾಲ ಸನ್ನಿಹಿತವಾಯಿತು ಎಂದು ಅಪರಿಮಿತ ಹರ್ಷದಿಂದ ದಶಕಂಠನು ನಸುನಗುತ್ತ
ಶ್ರೀರಾಮಪುರದರಸನೊಡನೆ ಸೆಣಸಲು ಸಂತಸಗೊಂಡ.

ಮುಂದುವರೆಯುವುದು

ದೇಶದ ಭದ್ರತೆಗೆ ಪೂರಕವಾಗಿರುವ ಜೋಜಿಲಾ ಸುರಂಗ ಕಾಮಗಾರಿ ಅಂತಿಮ ಘಟ್ಟ: ಭಾರತದ ಮೂಲಸೌಕರ್ಯ ಇತಿಹಾಸದಲ್ಲಿ ಹೊಸ ಅಧ್ಯಾಯ

ಜಮ್ಮು-ಕಾಶ್ಮೀರ ಮತ್ತು ಲಡಾಖ್ ನಡುವಿನ ಸಂಪರ್ಕಕ್ಕೆ ಹೊಸ ದಿಕ್ಕು ನೀಡಲಿರುವ ಮತ್ತು ದೇಶದ ಭದ್ರತೆಯಲ್ಲಿ ಪ್ರಮುಖ ಪಾತ್ರವಹಿಸಲಿರುವ ಜೋಜಿಲಾ ರಸ್ತೆ ಸುರಂಗ ಯೋಜನೆ ಮಹತ್ವದ ಮೈಲಿಗಲ್ಲು ತಲುಪಿದೆ.

13.153 ಕಿ.ಮೀ. ಉದ್ದದ ಜೋಜಿಲಾ ಸುರಂಗವನ್ನು ಬೇಧಿಸುವ ಕ್ಷಣಕ್ಕೆ ಸಾಕ್ಷಿಯಾಗಲಿದೆ. ಇದು ಭಾರತದ ಮೂಲಸೌಕರ್ಯ ಇತಿಹಾಸದಲ್ಲಿ ಐತಿಹಾಸಿಕ ಕ್ಷಣವೆಂದು ಪರಿಗಣಿಸಲಾಗಿದೆ.

ಸಮುದ್ರ ಮಟ್ಟದಿಂದ ಸುಮಾರು 11,578 ಅಡಿ ಎತ್ತರದಲ್ಲಿರುವ ಈ ಸುರಂಗವು ವಿಶ್ವದ ಅತಿ ಎತ್ತರದಲ್ಲಿರುವ ಅತಿ ಉದ್ದದ ಏಕ-ಟ್ಯೂಬ್ ದ್ವಿಮುಖ ರಸ್ತೆ ಸುರಂಗ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಶ್ರೀನಗರದ ಸಮೀಪದ ಸೋನ್‌ಮಾರ್ಗ್‌ನ ಬಾಲ್ತಾಲ್ ಮತ್ತು ದ್ರಾಸ್-ಕಾರ್ಗಿಲ್ ಪ್ರದೇಶದ ಮೀನಾಮಾರ್ಗ್ ನಡುವಿನ ಈ ಯೋಜನೆ, ಹಲವು ತಿಂಗಳುಗಳ ಕಾಲ ಹಿಮಪಾತ ಹಾಗೂ ಹಿಮಪಾತದ ಅಪಾಯದಿಂದ ಕಡಿತಗೊಳ್ಳುವ ಸಂಪರ್ಕ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಲಿದೆ.

ರಾಷ್ಟ್ರೀಯ ಹೆದ್ದಾರಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ (ಎನ್‌ಎಚ್‌ಐಡಿಸಿಎಲ್) ಪರವಾಗಿ ಮೆಘಾ ಇಂಜಿನಿಯರಿಂಗ್ ಅಂಡ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಎಂಇಐಎಲ್) ಈ ಮಹತ್ವಾಕಾಂಕ್ಷಿ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದೆ. ಹಿಮಾಲಯದ ಸಂಕೀರ್ಣ ಭೂವೈಜ್ಞಾನಿಕ ಪರಿಸ್ಥಿತಿಗೆ ಅನುಗುಣವಾಗಿ ''ನ್ಯೂ ಆಸ್ಟ್ರಿಯನ್ ಟನ್ನೆಲಿಂಗ್ ಮೆಥಡ್'' (ತಂತ್ರಜ್ಞಾನ ಬಳಸಿ ಈ ಸುರಂಗ ನಿರ್ಮಿಸಲಾಗಿದೆ.

365 ದಿನಗಳ ಸಂಪರ್ಕಕ್ಕೆ ರಹದಾರಿ: ಈ ಸುರಂಗ ಮಾರ್ಗ ಪೂರ್ಣಗೊಂಡ ಬಳಿಕ ಶ್ರೀನಗರ ಮತ್ತು ಲಡಾಖ್ ನಡುವಿನ ಸಂಪರ್ಕ ವರ್ಷಪೂರ್ತಿ ಲಭ್ಯವಾಗಲಿದೆ. ದ್ರಾಸ್, ಕಾರ್ಗಿಲ್, ಲೇಹ್ ಸೇರಿದಂತೆ ಗಡಿಯ ಸೂಕ್ಷ್ಮ ಪ್ರದೇಶಗಳಿಗೆ ಜನರ ಹಾಗೂ ಸರಕುಗಳ ಸಂಚಾರ ಸುಗಮವಾಗಲಿದ್ದು, ಪ್ರವಾಸೋದ್ಯಮ, ವ್ಯಾಪಾರ ಹಾಗೂ ತುರ್ತು ಸೇವೆಗಳಿಗೆ ಉತ್ತೇಜನ ಸಿಗಲಿದೆ. ರಾಷ್ಟ್ರದ ಭದ್ರತೆ ಮತ್ತು ಸೇನಾ ಲಾಜಿಸ್ಟಿಕ್ಸ್ ದೃಷ್ಟಿಯಿಂದಲೂ ಈ ಸುರಂಗ ಅತ್ಯಂತ ಮಹತ್ವದ್ದಾಗಿದೆ.

ಸವಾಲುಗಳ ನಡುವಿನ ಕಾಮಗಾರಿ: ಜೋಜಿಲಾ ಯೋಜನೆಯ ಕಾಮಗಾರಿ ಪಶ್ಚಿಮ ಹಿಮಾಲಯದ ಅತ್ಯಂತ ಕಠಿಣ ಪರಿಸ್ಥಿತಿಗಳಲ್ಲಿ ನಡೆದಿದ್ದು, -20 (ಮೈನಸ್ 20) ರಿಂದ -30 (ಮೈನಸ್ 30) ಡಿಗ್ರಿ ಸೆಲ್ಸಿಯಸ್ ತಾಪಮಾನ, ಭಾರೀ ಹಿಮಪಾತ, ಹಿಮಕುಸಿತ ಹಾಗೂ ದುರ್ಬಲ ಶಿಲಾ ರಚನೆಗಳ ನಡುವೆಯೂ ಕಾಮಗಾರಿ ಯಶಸ್ವಿಯಾಗಿ ಪೂರ್ಣಗೊಳ್ಳುತ್ತಿದೆ. ಕಳೆದ ಐದು ವರ್ಷಗಳಲ್ಲಿ ಯೋಜನಾ ಪ್ರದೇಶದಲ್ಲಿ ಐದು ಪ್ರಮುಖ ಹಿಮಕುಸಿತ ಘಟನೆಗಳು ಸಂಭವಿಸಿದ್ದವು. 2023ರ ಜನವರಿಯಲ್ಲಿ ಸಂಭವಿಸಿದ ಭಾರೀ ಹಿಮಕುಸಿತದಲ್ಲಿ 172 ಕಾರ್ಮಿಕರನ್ನು ಭಾರತೀಯ ಸೇನೆ ಸುರಕ್ಷಿತವಾಗಿ ರಕ್ಷಿಸಿತ್ತು. ಆದಾಗ್ಯೂ, ಯೋಜನಾ ತಂಡ ನಿರಂತರವಾಗಿ ಕಾಮಗಾರಿ ಮುಂದುವರಿಸಿ ಇದೀಗ ಐತಿಹಾಸಿಕ ಸಾಧನೆಗೆ ಸಾಕ್ಷಿಯಾಗಲು ಸಜ್ಜಾಗಿದೆ.

ಯೋಜನೆಯ ಪ್ರಮುಖ ಅಂಕಿ-ಅಂಶಗಳು

★ ಒಟ್ಟು ಯೋಜನಾ ಉದ್ದ: 30.894 ಕಿ.ಮೀ.
★ ಮುಖ್ಯ ಜೋಜಿಲಾ ಸುರಂಗ: 13.153 ಕಿ.ಮೀ.
★ ನಿಲ್‌ಗ್ರಾರ್ ಜೋಡಿ ಸುರಂಗಗಳು: 457 ಮೀ. ಹಾಗೂ 1.95 ಕಿ.ಮೀ.★ 3 ಸೇತುವೆಗಳು: ಒಟ್ಟು 460 ಮೀ.
★ 3 ಲಂಬ ಶಾಫ್ಟ್‌ಗಳು (ವೆಂಟಿಲೇಷನ್ ಮತ್ತು ತುರ್ತು ಸುರಕ್ಷತೆಗಾಗಿ) ★ ಭಾರತದಲ್ಲೇ ಅತಿ ಉದ್ದದ ಲಂಬ ಶಾಫ್ಟ್: 474.30 ಮೀ.★ 7 ಕಟ್-ಅಂಡ್-ಕವರ್ ರಚನೆಗಳು: 2.35 ಕಿ.ಮೀ.
★ ಹಿಮ ರಕ್ಷಣಾ ಗ್ಯಾಲರಿ: 450 ಮೀ.

ಕಾಮಗಾರಿ ಮೈಲಿಗಲ್ಲುಗಳು

ಯೋಜನೆ ಆರಂಭ: ಅಕ್ಟೋಬರ್ 1, 2020
★ ನಿಲ್‌ಗ್ರಾರ್ ಸುರಂಗಗಳ ಬ್ರೇಕ್‌ಥ್ರೂ: 2021-22ರಲ್ಲಿ ಪೂರ್ಣ
★ ಶಾಫ್ಟ್-3 ಬ್ರೇಕ್‌ಥ್ರೂ: ನವೆಂಬರ್ 15, 2023
★ ಶಾಫ್ಟ್-1 ಬ್ರೇಕ್‌ಥ್ರೂ: ಜುಲೈ 28, 2025★ ಜೋಜಿಲಾ ಮುಖ್ಯ ಸುರಂಗ ಅಂತಿಮ ಬ್ರೇಕ್‌ಥ್ರೂ: ಜೂನ್ 9, 2026

10 ಮಿಲಿಯನ್ ಸುರಕ್ಷಿತ ಮಾನವ-ಗಂಟೆಗಳ ದಾಖಲೆ

ಯೋಜನೆಯಲ್ಲಿ ಇದುವರೆಗೆ 10 ಮಿಲಿಯನ್‌ಗಿಂತ ಹೆಚ್ಚು ಸುರಕ್ಷಿತ ಮಾನವ-ಗಂಟೆಗಳ ಕಾರ್ಯನಿರ್ವಹಣೆ ದಾಖಲಾಗಿದ್ದು, 1,200ಕ್ಕೂ ಹೆಚ್ಚು ಸಿಬ್ಬಂದಿ ಯೋಜನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇವರಲ್ಲಿ ಶೇ.80ರಷ್ಟು ಸ್ಥಳೀಯ ನಿವಾಸಿಗಳಾಗಿದ್ದಾರೆ.ಜೋಜಿಲಾ ಸುರಂಗದ ಅಂತಿಮ ಬ್ರೇಕ್‌ಥ್ರೂ (ಬೇಧಿಸುವ) ಭಾರತದ ಸುರಂಗ ನಿರ್ಮಾಣ ಕ್ಷೇತ್ರದ ಮಹತ್ವದ ಸಾಧನೆಯಾಗಿದ್ದು, ಕಾಶ್ಮೀರ ಮತ್ತು ಲಡಾಖ್ ನಡುವಿನ ಸರ್ವಋತು ಸಂಪರ್ಕದ ದೀರ್ಘಕಾಲದ ಕನಸನ್ನು ನನಸಾಗಿಸುವತ್ತ ಮಹತ್ವದ ಹೆಜ್ಜೆಯಾಗಿದೆ. ಇದು ದೇಶದ ಮೂಲಸೌಕರ್ಯ ಅಭಿವೃದ್ಧಿ ಸಾಮರ್ಥ್ಯಕ್ಕೆ ಮತ್ತೊಂದು ಹೆಮ್ಮೆಯ ಗರಿಯಾಗಿದೆ.

ಈ ಬಾರಿ 10 ಸಾವಿರ ಕ್ವಿಂಟಾಲ್‌ಗಿಂತ ಅಧಿಕ ಸೋಯಾಬಿನ್ ಬಿತ್ತನೆ ಬೀಜ ವಿತರಣೆ ಮಾಡಿದ್ದೇವೆ. ಬಿತ್ತನೆ ಬೀಜ ಹಾಗೂ ಗೊಬ್ಬರ ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನಿದೆ

ಬಿತ್ತನೆ ಬೀಜ, ಗೊಬ್ಬರ ಕೊರತೆ: ಹಾವೇರಿ ರೈತರ ಆರೋಪ ತಳ್ಳಿಹಾಕಿದ ಜಿಲ್ಲಾಧಿಕಾರಿ

• **ಉದಯವಾಹಿನಿ, ಹಾವೇರಿ:**

ಗೊಬ್ಬರ ಮತ್ತು ಬಿತ್ತನೆ ಬೀಜಕ್ಕಾಗಿ ಹೋರಾಟ ನಡೆಸಿ ರೈತರು ಹುತಾತ್ಮರಾದ ಜಿಲ್ಲೆ ಹಾವೇರಿ. 2008ರ ಜೂನ್ 10ರಂದು ನಡೆದ ಪ್ರತಿಭಟನೆ ಹಿಂಸಾತ್ಮಕ ರೂಪ ತಾಳಿ ಇಬ್ಬರು ರೈತರು ಗೋಲಿಬಾರ್‌ಗೆ ಬಲಿಯಾಗಿದ್ದರು. ಅಂದು ಕಾಣಿಸಿಕೊಂಡಿದ್ದ ಬಿತ್ತನೆ ಬೀಜ ಮತ್ತು ಗೊಬ್ಬರದ ಕೊರತೆ ಈಗಲೂ ಇದೆ. ಇದರ ನಡುವೆ ನಕಲಿ ಬಿತ್ತನೆ ಬೀಜ ಮತ್ತು ಗೊಬ್ಬರ ಹಾವಳಿ ಹೆಚ್ಚಾಗಿದೆ ಎಂಬ ಆರೋಪ ಕೇಳಿಬಂದಿದೆ.

ವಿಶೇಷವಾಗಿ ನ್ಯಾಷನಲ್ ಮಿಷನ್ ಐಲ್ ಸೀಡ್

ವಿಶೇಷವಾಗಿ ನ್ಯಾಷನಲ್ ಮಿಷನ್ ಐಲ್ ಸೀಡ್ಸ್ ನಿಗಮ ನೀಡಿದ್ದ ಬೀಜವನ್ನು ವಿತರಿಸಿದ್ದೇವೆ. ಜಿಲ್ಲೆಗೆ ಸಾಕಷ್ಟು ಪ್ರಮಾಣದಲ್ಲಿ ರಿಯಾಯಿತಿ ದರದಲ್ಲಿ ಸೋಯಾಬಿನ್ ಬಿತ್ತನೆ ಬೀಜ ನೀಡಿದ್ದೇವೆ. ಕಳೆದ ವರ್ಷದ ಲೆಕ್ಕಾಚಾರದಲ್ಲಿ ಈ ವರ್ಷ 10 ಸಾವಿರ ಟನ್ ಬಿತ್ತನೆ ಬೀಜ ವಿತರಿಸಿದ್ದೇವೆ. ಈ ಸಲ 12 ಸಾವಿರ ಕ್ವಿಂಟಾಲ್ ಬೀಜಕ್ಕೆ ಬೇಡಿಕೆ ಇದೆ. ಈ ಕುರಿತಂತೆ ಮಾತನಾಡಿದ್ದೇನೆ. ರೈತರಿಗೆ ಬೇಕಾದರೆ ಬಿತ್ತನೆ ಬೀಜ ತರಿಸಿ ಕೊಡುತ್ತೇವೆ ಎಂದು ಹೇಳಿದರು.

ಉದಯವಾಹಿನಿ ಚಿತ್ರ

ಉತ್ತರ ಕರ್ನಾಟಕದ ಹೆಬ್ಬಾಗಿಲು ಹಾವೇರಿ ಜಿಲ್ಲೆಯಲ್ಲಿ ಶೇ.65ಕ್ಕಿಂತ ಅಧಿಕ ಜನ ಕೃಷಿಯನ್ನೇ ಅವಲಂಬಿಸಿದ್ದಾರೆ. ಒಂದು ಕಾಲದಲ್ಲಿ ಬಿಳಿಚಿನ್ನ ಹತ್ತಿಯ ಕಣಜವಾಗಿದ್ದ ಜಿಲ್ಲೆ ಈಗ ಮೆಕ್ಕೆಜೋಳದ ಕಣಜವಾಗಿ ಮಾರ್ಪಟ್ಟಿದೆ. ಆದರೆ ಕಳೆದ ವರ್ಷ ಮೆಕ್ಕೆಜೋಳದಲ್ಲಿ ಇಳುವರಿ ಕುಂಠಿತವಾಗಿದ್ದು, ಇಳುವರಿ ಬಂದರೂ ಉತ್ತಮ ಬೆಲೆ ಸಿಗದೆ ಕಂಗೆಟ್ಟ ರೈತರು ಈ ಬಾರಿ ಸೋಯಾಬಿನ್ ನತ್ತ ಮುಖಮಾಡಿದ್ದಾರೆ. ಸೋಯಾಬಿನ್ ಮೂರು ತಿಂಗಳಲ್ಲೇ ಕೈಗೆ ಬರುವ ಬೆಳೆಯಾಗಿರುವುದು ಇದಕ್ಕೆ ಕಾರಣವಾಗಿದೆ. ಒಂದು ಕಾಲದಲ್ಲಿ ಏಷ್ಯಾದಲ್ಲಿಯೇ ಅತಿ ಹೆಚ್ಚು ಹತ್ತಿ ಬೆಳೆಯುತ್ತಿದ್ದ ಜಿಲ್ಲೆ ಇದೀಗ ಸೋಯಾಬಿನ್ ಕಡೆಗೆ ವಾಲುತ್ತಿದೆ.

ಬಿತ್ತನೆ ಬೀಜ, ಗೊಬ್ಬರದ ಕೊರತೆ: ನಕಲಿ ಬಿತ್ತನೆ ಬೀಜ ಮತ್ತು ಗೊಬ್ಬರ ಹಾವಳಿ ಮಧ್ಯೆ, ರಸಗೊಬ್ಬರ ಮಾರಾಟಗಾರರು ತಾವು ಕೇಳಿದ ಗೊಬ್ಬರ ನೀಡುತ್ತಿಲ್ಲ, ಡೀಲರ್‌ಗಳು ಯಾವ ಗೊಬ್ಬರ ನೀಡುತ್ತಾರೆಯೋ ಅದನ್ನು ಖರೀದಿಸಬೇಕು. ಪ್ರಶ್ನಿಸಿದರೆ ನಮ್ಮ ಅಂಗಡಿಯಲ್ಲಿ ಗೊಬ್ಬರ ಖಾಲಿಯಾಗಿದೆ ಎಂದು ಉತ್ತರಿಸುತ್ತಾರೆ ಎಂದು ರೈತರು ಆರೋಪಿಸಿದ್ದಾರೆ.

ಒಂದು ಗೊಬ್ಬರ ತೆಗೆದುಕೊಂಡರೆ ಮತ್ತೊಂದು ಗೊಬ್ಬರದ ಲಿಂಕ್ ಬರುತ್ತೆ. ಎರಡನೇ ಗೊಬ್ಬರ ತೆಗೆದುಕೊಂಡರೆ ಮಾತ್ರ ಮೊದಲನೇ ಗೊಬ್ಬರ ನೀಡುತ್ತಾರೆ. ಅಲ್ಲದೆ, ಸರ್ಕಾರ ನಿಗದಿಪಡಿಸಿದ ದರಕ್ಕಿಂತ ಅಧಿಕ ಬೆಲೆಗೆ ಡೀಲರ್‌ಗಳು ಗೊಬ್ಬರ ಮಾರಾಟ ಮಾಡುತ್ತಾರೆ. ಈ ಕುರಿತಂತೆ ರಶೀದಿ ಕೇಳಿದರೆ ನೀಡುವುದಿಲ್ಲ. ನಿನಗೆ ರಶೀದಿ ಬೇಕಾ? ಗೊಬ್ಬರ ಬೇಕಾ? ಎಂದು ಕೇಳುತ್ತಾರೆ ಎಂದು ರೈತರು ದೂರಿದ್ದಾರೆ.

ರೈತರ ಆರೋಪಕ್ಕೆ ಅಧಿಕಾರಿಗಳ ಪ್ರತಿಕ್ರಿಯೆ: ರೈತರ ಆರೋಪಗಳನ್ನು ಜಿಲ್ಲಾಧಿಕಾರಿ ಡಾ.ವಿಜಯ ಮಹಾಂತೇಶ್ ತಳ್ಳಿಹಾಕಿದ್ದಾರೆ. ಹಾವೇರಿ ಜಿಲ್ಲೆಯಲ್ಲಿ ರೈತರಿಗೆ ಅವಶ್ಯಕವಾದ ಬಿತ್ತನೆ ಬೀಜ ಮತ್ತು ರಸಗೊಬ್ಬರ ಪೂರೈಸಲಾಗುತ್ತಿದೆ. ರಿಯಾಯಿತಿ ದರದಲ್ಲಿ ಸೋಯಾಬಿನ್, ಶೇಂಗಾ ಬಿತ್ತನೆ ಬೀಜ ವಿತರಿಸಲಾಗಿದೆ. ಕಳೆದ ವರ್ಷ ಹಾವೇರಿ ಜಿಲ್ಲೆಯಲ್ಲಿ 10 ಸಾವಿರ ಹೆಕ್ಟೇರ್‌ಗೆ 7,740 ಕ್ವಿಂಟಾಲ್ ಸೋಯಾಬಿನ್ ಬಿತ್ತನೆ ಬೀಜ ವಿತರಣೆ ಮಾಡಲಾಗಿತ್ತು. ಈ ಬಾರಿ 10 ಸಾವಿರ ಕ್ವಿಂಟಾಲ್‌ಗಿಂತ ಅಧಿಕ ಸೋಯಾಬಿನ್ ಬಿತ್ತನೆ ಬೀಜ ವಿತರಿಸಿದ್ದೇವೆ ಎಂದು ತಿಳಿಸಿದರು. ಗೊಬ್ಬರ ಸಹ ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಇದೆ. ಗೊಬ್ಬರದ ಲಿಂಕ್ ಮಾಡುವ ಕುರಿತಂತೆ ಅಧಿಕ ದರ ಮಾರಾಟ ಕುರಿತಂತೆ ರೈತರು ಸಾಕ್ಷ್ಯಗಳನ್ನು ನೀಡಿದರೆ, ಅಂತಹ ವರ್ತಕರ ಮೇಲೆ ಕ್ರಮ ಕೈಗೊಳ್ಳಲಾಗುವುದು. ಆ ರೀತಿ ಅಧಿಕ ದರದಲ್ಲಿ ಗೊಬ್ಬರ ಖರೀದಿಸಿದ ರಶೀದಿಗಳನ್ನು ವರ್ತಕರಿಂದ ಪಡೆದು ನಮಗೆ ನೀಡಿದರೆ ಅವರ ಮೇಲೆ ಕ್ರಮ ವಹಿಸುತ್ತೇವೆ. ದಾಖಲಾತಿ ಇಲ್ಲದೆ ಏನೂ ಮಾಡಲು ಸಾಧ್ಯವಿಲ್ಲ. ಪ್ರಕರಣ ದಾಖಲಿಸಲು ಸಹ ವರ್ತಕರಿಂದ ಪಡೆದ ರಶೀದಿಗಳು ಬೇಕಾಗುತ್ತದೆ. ಈ ರೀತಿಯ ಕೃತ್ಯಗಳನ್ನು ತಡೆಯುವುದು ರೈತರು, ಅಧಿಕಾರಿಗಳು ಹಾಗೂ ವರ್ತಕರ ಜವಾಬ್ದಾರಿಯಾಗಿದೆ ಎಂದರು.

ಜಿಲ್ಲಾಡಳಿತ ಈ ಕುರಿತಂತೆ ಹಲವು ಕ್ರಮ ಕೈಗೊಂಡಿದೆ. ಜಿಲ್ಲೆಯಲ್ಲಿ ಮಾರಾಟ ಮಾಡುತ್ತಿದ್ದ ನಕಲಿ ಗೊಬ್ಬರ ಪಾಕೆಟ್ ಹಿಡಿದು ಅವರ ಮೇಲೆ ಪ್ರಕರಣ ದಾಖಲಿಸಲಾಗಿದೆ. ರಾಣೆಬೆನ್ನೂರಲ್ಲಿ ಹದಿನೇಳೂವರೆ ಕ್ವಿಂಟಾಲ್ ಕಳಪೆ ಬಿತ್ತನೆ ಬೀಜ ಸೀಜ್ ಮಾಡಲಾಗಿದೆ. ರೈತರು, ಜನಸಾಮಾನ್ಯರು ಈ ಕುರಿತಂತೆ ಸೂಕ್ತ ಸಾಕ್ಷ್ಯಗಳನ್ನು ನೀಡಿದರೆ ವರ್ತಕರ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಉದಯ ವಾಹಿನಿ

ಪ್ರಾದೇಶಿಕ

ಮಂಗಳವಾರ
09 ಜೂನ್ 2026

05

ಮಿನಿ ನ್ಯೂಸ್

ಕನಕ ಭವನ ನಿರ್ಮಾಣದ ಭೂಮಿ ಪೂಜೆ

ಉದಯವಾಹಿನಿ ಚಿತ್ರ

• **ಉದಯವಾಹಿನಿ ,ಕಾರಟಗಿ**

ಇಲ್ಲಿನ ಶ್ರೀ ಕನಕ ಭವನ ನಿರ್ಮಾಣದ ಭೂಮಿ ಪೂಜೆ ಕಾರ್ಯಕ್ರಮ ಶನಿವಾರ ವಿಜೃಂಭಣೆಯಿಂದ ಜರುಗಿತು. ಕನಕ ಭವನ ನಿರ್ಮಾಣಕ್ಕಾಗಿ 200 ಲಕ್ಷ ರೂ.ಗಳ ಅನುದಾನ ಮಂಜೂರಾಗಿದ್ದು.ಕಾರ್ಯಕ್ರಮದಲ್ಲಿ ಗೌರವಾನ್ವಿತ ಜನಪ್ರಿಯ ಶಾಸಕ ಶ್ರೀ ಶಿವರಾಜ ಎಸ್ ತಂಗಡಗಿ ಅವರು ಭಾಗವಹಿಸಿ ಭೂಮಿ ಪೂಜೆಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕುರುಬ ಸಮಾಜದ ಪೂಜ್ಯ ಗುರುಗಳಾದ ಶ್ರೀ ಸಿದ್ದರಾಮಯ್ಯ ಸ್ವಾಮಿಗಳು, ಕೊಪ್ಪಳ ಜನಪ್ರಿಯ ಸಂಸದರಾದ ಶ್ರೀ ಕೆ. ರಾಜಶೇಖರ ಹಿಟ್ನಾಳ್, ಕಾರಟಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಕಾರಟಗಿ ಪುರಸಭೆ ಅಧ್ಯಕ್ಷರು, ಸದಸ್ಯರು, ಅನೇಕ ಹಿರಿಯ ಮುಖಂಡರು, ಜನಪ್ರತಿನಿಧಿಗಳು ಹಾಗೂ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಧಾರ್ಮಿಕ ಹಾಗೂ ಸಾಮಾಜಿಕ ಕಳಕಳಿಯ ಈ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನಡೆಯಿತು. ಕಾರ್ಯಕ್ರಮದಲ್ಲಿ ನೆರೆದಿದ್ದ ಗಣ್ಯರಿಗೆ ಶಾಸಕ ಶಿವರಾಜ ತಂಗಡಗಿ ಅವರನ್ನು ಹೂಮಾಲೆ ಹಾಕಿ ಸನ್ಮಾನಿಸಲಾಯಿತು.

ದುರಾಸೆ ಬಿಟ್ಟು ಪರಿಸರ ಸ್ನೇಹಿ ಜೀವನ ನಡೆಸಿ

• **ಉದಯವಾಹಿನಿ, ಮುದ್ದೇಬಿಹಾಳ:**

ಭೂ ತಾಯಿಗೆ ನಮ್ಮೆಲ್ಲ ಅಗತ್ಯಗಳನ್ನು ಈಡೇರಿಸುವ ಶಕ್ತಿ ಇದೆ, ಆದರೆ ಮನುಷ್ಯನ ದುರಾಶೆಗಳನ್ನಲ್ಲ. ಪ್ರಕೃತಿಯನ್ನು ಅತಿಯಾಗಿ ಲೂಟಿ ಮಾಡಿದರೆ ಕರೋನಾ, ಪ್ರವಾಹ ಹಾಗೂ ಭೂಕುಸಿತದಂತಹ ದುರಂತಗಳ ಮೂಲಕ ಪ್ರಕೃತಿ ನಮಗೆ ಎಚ್ಚರಿಕೆ ನೀಡುತ್ತಿರುತ್ತದೆ ಎಂದು ಆಲಮಟ್ಟಿ ಕೃಷ್ಣಾ ಜಲ ಭಾಗ್ಯ ನಿಗಮದ ಸಹಾಯಕ ಅರಣ್ಯಾಧಿಕಾರಿ ಶಿವಾನಂದ ಜಿಡ್ಡಿಮನಿ ಹೇಳಿದರು ಪಟ್ಟಣದ 'ಹಸಿರು ತೋರಣ ಗೆಳೆಯರ ಬಳಗ' ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು. ಮುಂದಿನ ಭವಿಷ್ಯಕ್ಕಾಗಿ ಉತ್ತಮ ಹವಾಮಾನ ಕಾಯ್ದುಕೊಳ್ಳುವುದು ನಮ್ಮ ಜವಾಬ್ದಾರಿ ಎಂದರು. ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಬಸನಗೌಡ ಬಿರಾದಾರ ಪ್ಲಾಸ್ಟಿಕ್ ಬಳಕೆ ಹಾಗೂ ತ್ಯಾಜ್ಯಕ್ಕೆ ಬೆಂಕಿ ಹಚ್ಚುವುದರಿಂದ ಪರಿಸರದ ಸಮತೋಲನ ತಪ್ಪುತ್ತದೆ.

ಪ್ರಕೃತಿಯನ್ನು ಹಾಳು ಮಾಡದ ಜೀವನಶೈಲಿ ನಮಗೆ ಅಗತ್ಯವೆಂದರೆ ಸಾಮಾಜಿಕ ವಲಯ ಅರಣ್ಯಾಧಿಕಾರಿ ಗಿರೀಶ ಆಲಕುಡೆ ಪ್ಲಾಸ್ಟಿಕ್ ನಿಷೇಧ, ಮಣ್ಣಿನ ಗಣಪತಿ ಪ್ರತಿಷ್ಠಾಪನೆ ಹಾಗೂ ಪಟಾಕಿ ಮುಕ್ತ ಹಬ್ಬಗಳ ಆಚರಣೆ ಇಂದಿನ ತುರ್ತು ಅಗತ್ಯವಾಗಿದೆ ಎಂದರು. ಪುರಸಭೆ ಮುಖ್ಯಾಧಿಕಾರಿ ಮಲ್ಲನಗೌಡ ಬಿರಾದಾರ ಪುರಸಭೆ ವತಿಯಿಂದ ಈ ವರ್ಷ 3,000 ಗಿಡಗಳನ್ನು ನೆಡುವ ಗುರಿ ಹೊಂದಲಾಗಿದ್ದು, ಇದಕ್ಕೆ ಹಸಿರು ತೋರಣ ಬಳಗದ ಸಹಯೋಗ ಪಡೆಯಲಾಗುವುದು. ಬಳಗದ ಪರಿಸರ ಕಾಳಜಿ ಹೆಮ್ಮೆಯ ತರುವಂತಹದು ಎಂದರು.

ಪರಿಸರ ರಕ್ಷಕ' ಪ್ರಶಸ್ತಿ ಪ್ರದಾನ:

ಪರಿಸರ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಿಥುನ ನೇಮಪ್ಪ ಚವ್ಹಾಣ, ಸಂಗಪ್ಪ ನಂದಪ್ಪ ನಾಗಾವಿ, ಮಾನಪ್ಪ ಸಂಜೀವಪ್ಪ ಕರಡಿ, ರಾಮಣ್ಣ ಪರಪ್ಪಗೋಳ ಹಾಗೂ ವಿಠ್ಠಲ ತೆಗ್ಗಿ ಅವರಿಗೆ 2026ನೇ ಸಾಲಿನ ಪರಿಸರ ರಕ್ಷಕ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಬಳಗದ ಅಧ್ಯಕ್ಷ ಅಮರೇಶ ಗೂಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಅರಣ್ಯ ಇಲಾಖೆ, ಪುರಸಭೆ ಹಾಗೂ ಸಾರ್ವಜನಿಕರ ಮಧ್ಯೆ ಸೇತುವೆಯಾಗಿ ನಮ್ಮ ಬಳಗ ಕಾರ್ಯನಿರ್ವಹಿಸುತ್ತಿದ್ದು,

ಉದಯವಾಹಿನಿ ಚಿತ್ರ

ಪಟ್ಟಣವನ್ನು ಮತ್ತಷ್ಟು ಹಸಿರಾಗಿಸಲು ಶ್ರಮಿಸುತ್ತೇವೆ ಎಂದರು.

ಕಾರ್ಯಕ್ರಮದಲ್ಲಿ ಅರಣ್ಯ ಇಲಾಖೆ, ಪುರಸಭೆ ಹಾಗೂ ವರಮಾರುತೇಶ್ವರ ದೇಗುಲ ಸಮಿತಿ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಗಣ್ಯರು ಉಪಸ್ಥಿತರಿದ್ದರು. ಮಾಣಿಕ್ಯಮ್ಮ ಪ್ರಾರ್ಥಿಸಿದರು, ನಾಗಭೂಷಣ ವಚನ ಗೀತೆ ಹಾಡಿದರು, ಡಾ. ವೀರೇಶ ಇಟಗಿ ಸ್ವಾಗತಿಸಿದರು, ಮಹಾಬಲೇಶ್ವರ ಗಡೇದ ನಿರೂಪಿಸಿದರು ಹಾಗೂ ಕಾರ್ಯದರ್ಶಿ ಬಸವರಾಜ ಬಿಜ್ಜೂರ ವಂದಿಸಿದರು.

ಕ್ವಾರಿಯಲ್ಲಿ ಕಾಲು ಜಾರಿ ಬಿದ್ದು ಮೂವರು ಸಾವು

• **ಉದಯವಾಹಿನಿ, ವಡಗೇರಾ:**

ತಾಲ್ಲೂಕಿನ ಬಸವನಗರ ಗ್ರಾಮದ ಮರಮ್ ಕ್ವಾರಿಯ ಗುಂಡಿಯಲ್ಲಿ ಕಾಲುಜಾರಿ ಬಿದ್ದು ನೀರಿನಲ್ಲಿ ಮುಳುಗಿ ಮೂವರು ಮೃತಪಟ್ಟಿದ್ದಾರೆ. ಗುಂಡಮ್ಮ (35), ಸುಜಾತಾ (9) ಶಿವಲೀಲಾ (ಶಿವಕಾಂತಮ್ಮ) (10) ಮೃತರು ಎಂದು ತಿಳಿದು ಬಂದಿದೆ. ಗ್ರಾಮದಲ್ಲಿ ಸಮರ್ಪಕವಾಗಿ ನೀರು ಬಾರದ ಕಾರಣ ಸಂಜೆ 4 ಗಂಟೆ ಸುಮಾರಿಗೆ ಬಟ್ಟೆ ತೊಳೆಯಲೆಂದು ಗುಂಡಮ್ಮ, ಸುಜಾತಾ ಹಾಗೂ ಶಿವಲೀಲಾ ಕ್ವಾರಿ ಗುಂಡಿಗೆ ಹೋಗಿದ್ದಾರೆ.ಬಟ್ಟೆ ತೊಳೆಯುವಾಗ ಸುಜಾತಾ ಮತ್ತು ಶಿವಲೀಲಾ ಕಾಲುಜಾರಿ ಗುಂಡಿಯಲ್ಲಿ ಬಿದ್ದಿದ್ದಾರೆ.

ಗುಂಡಮ್ಮ ನೀರಿಗೆ ಜಿಗಿದು ಇಬ್ಬರು ಬಾಲಕಿಯರನ್ನು ರಕ್ಷಿಸಲು ಪ್ರಯತ್ನಿಸಿದ್ದಾರೆ. ಸಾಧ್ಯವಾಗದೇ ಮೂವರೂ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಈ ಕುರಿತು ವಡಗೇರಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಯಿಮ್ಸ್ ಆಸ್ಪತ್ರೆಗೆ ಶಾಸಕರ ಭೇಟಿ ಕ್ವಾರಿಯಲ್ಲಿ ಮುಳುಗಿ ಸಾವನ್ನಪ್ಪಿದ ಮೃತದೇಹಗಳ ಶವಪರೀಕ್ಷೆಗಾಗಿ ಇಲ್ಲಿನ ಮುನ್ನಾಳ ಸಮೀಪದ ಯಿಮ್ಸ್ ಆಸ್ಪತ್ರೆಗೆ ಮೂರು ಜನರ ಮೃತದೇಹಗಳನ್ನು ತರಲಾಗಿದ್ದು ಸುದ್ದಿ ತಿಳಿದ ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರ ಅವರು ಅಲ್ಲಿಗೆ ಭೇಟಿ ನೀಡಿದ್ದಾರೆ.

ಮೋದಿ ಅಭಿವೃದ್ಧಿಗೆ ನಿರಂತರ ಶ್ರಮ

• **ಉದಯವಾಹಿನಿ ವಡಗೇರಾ**


ಉದಯವಾಹಿನಿ ಚಿತ್ರ

ನರೇಂದ್ರ ಮೋದಿ ಪ್ರಧಾನಿಯಾಗಿ 12 ವರ್ಷದ ಸಾಧನೆ ಪ್ರಯುಕ್ತ ಯಾದಗಿರಿ ಗ್ರಾಮೀಣ ಮಂಡಲದ ವತಿಯಿಂದ ಪಟ್ಟಣದ ಸರ್ಕಾರಿ ಮಾದರಿಯ ಪ್ರಾಥಮಿಕ ಶಾಲೆಯಲ್ಲಿ ಸಸಿ ನೆಡುವ ಕಾರ್ಯಕ್ರಮ ನಡೆಯಿತು.ಬಿಜೆಪಿ ಹಿರಿಯ ಮುಖಂಡ ಸಿದ್ದಣ್ಣಗೌಡ ಕಾಡಂನೋರ ಮಾತನಾಡಿ, 'ಕಳೆದ 12 ವರ್ಷಗಳಿಂದ ಪ್ರಧಾನಿ ನರೇಂದ್ರ ಮೋದಿ ದೇಶಕ್ಕಾಗಿ ಹಾಗೂ ದೀನದಲಿತರ, ಹಿಂದುಳಿದವರ ಅಭಿವೃದ್ಧಿಗೆ ನಿರಂತರ ಶ್ರಮಿಸುತ್ತಿದ್ದಾರೆ. ಮೋದಿಯವರ ನೇತೃತ್ವದಲ್ಲಿ ಮುಂಬರುವ ದಿನಗಳಲ್ಲಿ ಭಾರತವು ವಿಶ್ವದಲ್ಲಿಯೇ ಉನ್ನತ ಸ್ಥಾನ ಹೊಂದುತ್ತದೆ' ಎಂದರು. ಯಾದಗಿರಿ ಗ್ರಾಮೀಣ ಮಂಡಲ ಅಧ್ಯಕ್ಷ ರಾಜಶೇಖರ ಕಾಡಂನೋರ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಬಸವರಾಜ ಸಾಹು ಸೊನ್ನದ, ಯಂಕಣ್ಣ ಬಸವಂತಪೂರ, ಡಮರಿಯಪ್ಪ ನಾಟೇಕಾರ, ಮಂಡಲ ಪ್ರಧಾನ ಕಾರ್ಯದರ್ಶಿ ಶಿವುಕುಮಾರ ಕೊಂಕಲ್, ಎಸ್‌ಡಿಎಂಸಿ ಅಧ್ಯಕ್ಷ ನಾಗಪ್ಪ ಬಸವಂತಪೂರ, ಮುಖ್ಯಶಿಕ್ಷಕ ಮುದುಕಪ್ಪ, ಶಿಕ್ಷಕಿ ಬಸ್ಸಮ್ಮ, ಗೌರಮ್ಮ, ಶಾರದಾ, ಶಿವಪ್ಪ ಡುರ್ರೆ, ಹೊನ್ನಪ್ಪ ಕಡೇಚೂರು ಸೇರಿದಂತೆ ಅನೇಕರು ಹಾಜರಿದ್ದರು.

ಹದಗೆಟ್ಟ ರಸ್ತೆ: ಕಳಕೋಡು ಗ್ರಾಮಸ್ಥರಿಂದ ಶ್ರಮದಾನ

• **ಉದಯವಾಹಿನಿ, ಚಿಕ್ಕಮಗಳೂರು:**

ಸರ್ಕಾರ ಮತ್ತು ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಿ ಸಾಕಾದ ಕಳಸ ತಾಲ್ಲೂಕಿನ ಕುಗ್ರಾಮವೊಂದರ ನಿವಾಸಿಗಳು, ಕೊನೆಗೂ ವ್ಯವಸ್ಥೆಯ ಬೇಜವಾಬ್ದಾರಿತನದ ವಿರುದ್ಧ ತೊಡೆತಟ್ಟಿ ತಮ್ಮೂರಿನ ರಸ್ತೆಯನ್ನು ತಾವೇ ಶ್ರಮದಾನದ ಮೂಲಕ ದುರಸ್ತಿ ಮಾಡಿಕೊಂಡ ಪ್ರಸಂಗ ಬೆಳಕಿಗೆ ಕಳಸ ತಾಲ್ಲೂಕಿನ ಸಂಸೆ ಸಮೀಪದ ಕಳಕೋಡು ಗ್ರಾಮದಲ್ಲಿ ಈ ಶ್ಲಾಘನೀಯ ಹಾಗೂ ಆಡಳಿತ ವ್ಯವಸ್ಥೆಗೆ ಚಾಟಿ ಬೀಸುವಂತಹ ಘಟನೆ ನಡೆದಿದೆ. ಮಳೆಗಾಲದಲ್ಲಿ ದಾಖಲೆ ಪ್ರಮಾಣದ ಮಳೆ ಬೀಳುವ ಈ ಭಾಗದಲ್ಲಿ, ಪ್ರತಿ ವರ್ಷವೂ ರಸ್ತೆಗಳು ಕೆಸರುಗದ್ದೆಯಾಗುತ್ತವೆ. ಜನಪ್ರತಿನಿಧಿಗಳು ಇತ್ತ ತಲೆಹಾಕದ ಕಾರಣ ಬೇಸತ್ತ ಗ್ರಾಮಸ್ಥರು ಒಗ್ಗಟ್ಟಾಗಿ ನಿಂತು ಕೈಗೊಂಡಿದ್ದಾರೆ.

ಸ್ವಾತಂತ್ರ್ಯ ಬಂದರೂ ಸಿಗದ ರಸ್ತೆ ಭಾಗ್ಯ, ದೇಶಕ್ಕೆ ಸ್ವಾತಂತ್ರ್ಯ ಬಂದು ದಶಕಗಳೇ ಕಳೆದಿದ್ದರೂ, ಈ ಮಲೆನಾಡಿನ ಕುಗ್ರಾಮದ ಜನರಿಗೆ ಇಂದಿಗೂ ಸುಸಜ್ಜಿತ ರಸ್ತೆ ಭಾಗ್ಯ ಸಿಕ್ಕಿಲ್ಲ. ಕಳಸ ಪಟ್ಟಣದಿಂದ ಐದಾರು ಹಳ್ಳಿಗಳಿಗೆ ಸಂಪರ್ಕ ಕಲ್ಪಿಸುವ ಈ ಪ್ರಮುಖ ರಸ್ತೆಯು ಇಲ್ಲಿನ ನಿವಾಸಿಗಳ ದೈನಂದಿನ ಬದುಕಿಗೆ ಅತ್ಯಂತ ಅನಿವಾರ್ಯವಾಗಿದೆ. ಆದರೆ, ಇಷ್ಟು ವರ್ಷ ಕಳೆದರೂ ರಸ್ತೆಗೆ ಕಾಂಕ್ರೀಟ್ ಅಥವಾ ಡಾಂಬರೀಕರಣ ಮಾಡದ ಲೋಕೋಪಯೋಗಿ ಇಲಾಖೆಯ ನಡೆಗೆ ಗ್ರಾಮಸ್ಥರು ತೀವ್ರ ಆಕ್ರೋಶ ಹೊರಹಾಕಿದ್ದಾರೆ.

ವಿದ್ಯಾರ್ಥಿಗಳ ನಿತ್ಯ ಗೋಳಾಟ, ನೆಟ್‌ವರ್ಕ್ ಇಲ್ಲದ ಕತ್ತಲೆ


ಉದಯವಾಹಿನಿ ಚಿತ್ರ

ರಸ್ತೆಯ ದುಸ್ಥಿತಿಯಿಂದಾಗಿ ಶಾಲಾ-ಕಾಲೇಜು ವಿದ್ಯಾರ್ಥಿಗಳು ಪ್ರತಿನಿತ್ಯ 8 ರಿಂದ 10 ಕಿಲೋಮೀಟರ್ ಕಡಿದಾದ ಹಾದಿಯಲ್ಲಿ ನಡೆದುಕೊಂಡೇ ಹೋಗಬೇಕಾದ ಅನಿವಾರ್ಯತೆ ಇದೆ.

ಇನ್ನು ಮಳೆಗಾಲದಲ್ಲಿ ವಿದ್ಯುತ್ ಕೈಕೊಟ್ಟರೆ ಇಡೀ ಗ್ರಾಮವೇ ಕತ್ತಲೆಯಲ್ಲಿ ಮುಳುಗುತ್ತದೆ. ತುರ್ತು ಸಂದರ್ಭದಲ್ಲಿ ಮೊಬೈಲ್ ನೆಟ್‌ವರ್ಕ್ ಕೂಡ ಸಿಗದೆ ಹಳ್ಳಿಗಳು ಬಾಹ್ಯ ಪ್ರಪಂಚದಿಂದ ಸಂಪೂರ್ಣವಾಗಿ ಕಡಿತಗೊಳ್ಳುತ್ತವೆ.

ತುರ್ತು ಸಂದರ್ಭದಲ್ಲಿ ಗ್ರಾಮಕ್ಕೆ ಬರಲು ವಾಹನ ಸವಾರರು ತೀವ್ರ ಹಿಂದೇಟು ಹಾಕುತ್ತಿದ್ದರು. ಹತ್ತಾರು ಬಾರಿ ಅಧಿಕಾರಿಗಳಿಗೆ ಮಾಹಿತಿ ನೀಡಿದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಹೀಗಾಗಿ ಮಳೆಗಾಲದ ಭೀಕರ ಪರಿಸ್ಥಿತಿಯನ್ನು ಎದುರಿಸಲು ಗ್ರಾಮಸ್ಥರೇ ರಸ್ತೆಯ ಹೊಂಡಗಳನ್ನು ಮುಚ್ಚಲು ಮುಂದಾಗಿದ್ದಾರೆ.

ಮುಲ್ಲಾಮಾರಿ ಮುಖ್ಯ ಕಾಲುವೆ ಒಡೆದು ಹಾಳು

• **ಉದಯವಾಹಿನಿ, ಚಿಂಚೋಳಿ:**

ತಾಲ್ಲೂಕಿನ ನಾಗರಾಳ ಜಲಾಶಯದ ನೀರು ರೈತರ ಹೊಲಗದ್ದೆಗಳಿಗೆ ಹೋಗಲು ಮುಖ್ಯ ಕಾಲುವೆ ಮರಿಕಾಲುವೆ ನಿರ್ಮಿಸಿದ್ದು ಆದರೆ ಚಿಮ್ಮಾನಚೋಡ ನರನಾಳ ಮಾರ್ಗಮಧ್ಯೆ ಹಾದು ಹೋಗಿರುವ ಮುಖ್ಯ ಕಾಲುವೆಯು ಯಾರೋ ಕಿಡಿಗೇಡಿಗಳು ಒಡೆದು ಹಾಳು ಮಾಡಿದ್ದಾರೆ ಇದನ್ನು ಸೂಕ್ತ ತನಿಖೆ ನಡೆಸಿ ತಪ್ಪಿಸ್ಥರ ವಿರುದ್ಧ ಕ್ರಮಕೈಗೊಳ್ಳಬೇಕು ಇಲ್ಲದಿದ್ದರೆ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಯುವ ರೈತ ಹೋರಾಟಗಾರ ಎಂ.ಪಿ.ಗೋಪಾಲ ಆಗ್ರಹಿಸಿದ್ದಾರೆ.ಸ್ಥಳ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,ಈಗಾಗಲೇ ಮಳೆ ರಭಸಕ್ಕೆ ಚಿಮ್ಮಾನಚೋಡ ನರನಾಳ ಮಧ್ಯೆ,ವಿರುವ ಕಾಲುವೆ ಸೇತುವೆ ಕುಸಿತವಾಗಿದೆ,ಅದೆ ಮುಂದಕ್ಕೆ ಸಾಗಿಹೋಗುವ ಮುಖ್ಯ ಕಾಲುವೆಗೆ ಬೃಹತ್ ಬ್ರಿಡ್ಜ್ ನಿರ್ಮಾಣ ಕಾರ್ಯ ಪ್ರಾರಂಭವಾಗಿದ್ದು ಕಾಲುವೆ ಬಂದ್ ಮಾಡಿದ್ದಾರೆ,ಅದರ ಸ್ವಲ್ಪ ಹಿಂದುಗಡೆ ಮುಖ್ಯ ಕಾಲುವೆ ಒಡೆದು ನೀರು ನದಿಗೆ ಹೋಗುವಂತೆ ಯಾರೋ ಕಿಡಿಗೇಡಿಗಳು ಮಾಡಿದ್ದಾರೆ,ಸರ್ಕಾರ ನಿರ್ಮಿಸಿದ ಯಾವುದೇ ಕಾಮಗಾರಿಗಳು ಇರಲಿ ಅದನ್ನು ಪರವಾನಿಗೆ ಪಡೆದು ಮಾಡಬೇಕು ಆದರೆ ಕಾಲುವೆ ಯಾರು ಒಡೆದಿದ್ದಾರೆ,ಅಧಿಕಾರಿಗಳ ಕುಮ್ಮಕ್ಕು,ಗುತ್ತಿಗೆದಾರರ ಕುಮ್ಮಕ್ಕು ಎಂಬುವುದು ತನಿಖೆ ಮಾಡಬೇಕು.ರೈತರ ಹೊಲಗಳಲ್ಲಿ ಸ್ವಲ್ಪವಾದರೂ ಕಾಲುವೆ ಒಡೆದರೆ ನೀರಾವರಿಇಲಾಖೆ ಅಧಿಕಾರಿಗಳು ರೈತರ ಮೇಲೆ ದೂರು ನೀಡಿ ಪ್ರಕರಣ ದಾಖಲಿಸುತ್ತಾರೆ ಆದರೆ ಈ ಮುಖ್ಯ ಕಾಲುವೆ ಒಡೆದವರುಯಾರು ಅವರ ಮೇಲೆ ಯಾಕೆ ಪ್ರಕರಣ ದಾಖಲಿ ಮಾಡಿಲ್ಲವೆಂದು ಪ್ರಶ್ನೆಸಿದರು,ಇದನ್ನು ಸಮಗ್ರ ತನಿಖೆ ನಡೆಸಿ ತಪ್ಪಿಸ್ಥರ ವಿರುದ್ಧ ಕ್ರಮಕೈಗೊಳ್ಳಬೇಕು ಇಲ್ಲಾದಿದ್ದರೆ ರೈತರು ಸೇರಿಕೊಂಡು ಬೃಹತ್ ಪ್ರತಿಭಟನೆ ಮಡಲಾಗುವುದು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಉದಯವಾಹಿನಿ ಚಿತ್ರ

ಮುಖ್ಯ ಕಾಲುವೆ ಯಾರು ಒಡೆದು ಹಾಕಿ ಹಾಳು ಮಾಡಿದ್ದಾರೆ ಗೊತ್ತಿಲ್ಲ,ಗುತ್ತಿಗೆದಾರನಿಗೆ ಕೇಳಿದರೂ ಒಡೆದಿಲ್ಲವೆಂದು ಉತ್ತರ ನೀಡಿದ್ದಾನೆ ಮತ್ತು ಯಾರೋ ಕಿಡಿಗೇಡಿಗಳು ಒಡೆದು ಸರ್ಕಾರದ ಭೋಕ್ಕಸಕ್ಕೆ ನಷ್ಟ ಮಾಡಿದ್ದಾರೆ ಇದನ್ನು ಪರಿಶೀಲಿಸಿ ಕ್ರಮಕೈಗೋಳ್ಳತ್ತೇವೆ ಎಂದು ನಾಗರಾಳ ಜಲಾಶಯ ಅಧಿಕಾರಿ ಪ್ರತಿಕ್ರಿಯೇ ನೀಡಿದ್ದಾರೆ.-ವಿನಾಯಕ ಚವ್ಹಾಣ

ಜೂನ್-2026 ಮಾಹೆಯ ಪಡಿತರ ಬಿಡುಗಡೆ

• **ಉದಯವಾಹಿನಿ ಚಿತ್ರದುರ್ಗ**

ಅನ್ನಭಾಗ್ಯ ಯೋಜನೆಯಡಿ ಮೇ ಮತ್ತು ಜೂನ್-2026ರ ಎರಡು ಮಾಹೆಗಳ ಆಹಾರಧಾನ್ಯವನ್ನು ಜೂನ್-2026ರ ಮಾಹೆಯಲ್ಲಿ ವಿತರಿಸಲು ಸರ್ಕಾರ ನಿರ್ದೇಶನ ನೀಡಿದೆ. ಪಡಿತರ ಚೀಟಿದಾರರು ತಮ್ಮ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿಗಳಲ್ಲಿ ಆಹಾರಧಾನ್ಯವನ್ನು ಬಯೋಮೆಟ್ರಿಕ್ (ಬೆರಳುಚ್ಚು) ನೀಡಿ ಪಡೆದುಕೊಳ್ಳಬಹುದು.

ಮೇ-2026 ಮತ್ತು ಜೂನ್-2026ರ ಎರಡು ಮಾಹೆಗಳ ಅನ್ನಭಾಗ್ಯ ಯೋಜನೆಯಡಿ ಅಂತ್ಯೋದಯ ಪಡಿತರ ಚೀಟಿ ಹೊಂದಿರುವ 04 ಸದಸ್ಯರಿರುವ ಪಡಿತರ ಚೀಟಿಗೆ 10 ಕೆ.ಜಿ, 05 ಸದಸ್ಯರಿಗೆ 30 ಕೆ.ಜಿ, 06 ಸದಸ್ಯರಿಗೆ 50 ಕೆ.ಜಿ, 07 ಸದಸ್ಯರಿಗೆ 70 ಕೆ.ಜಿ., 08 ಸದಸ್ಯರಿಗೆ 90 ಕೆ.ಜಿ , 09 ಸದಸ್ಯರಿಗೆ 110 ಕೆ.ಜಿ, 10 ಸದಸ್ಯರಿಗೆ 130 ಕೆ.ಜಿ ಅಕ್ಕಿ ಉಚಿತ ಪಡೆದುಕೊಳ್ಳಬೇಕು. 10 ಕ್ಕಿಂತ ಮೇಲ್ಪಟ್ಟ ಪಡಿತರ ಚೀಟಿಗೆ ಇದೇ ಅನುಪಾತದಂತೆ ಅಕ್ಕಿಯನ್ನು ವಿತರಣೆ ಮಾಡಲಾಗುತ್ತದೆ.

01 ರಿಂದ 03 ಸದಸ್ಯರಿರುವ ಅಂತ್ಯೋದಯ ಪಡಿತರ ಚೀಟಿಗಳಿಗೆ ಪ್ರತಿ ಸದಸ್ಯರಿಗೆ 10 ಕೆ.ಜಿ.ಯಂತೆ ಈಗಾಗಲೇ ಎನ್.ಎಫ್.ಎಸ್.ಎ ಯೋಜನೆಯಡಿ ಮೇ-2026ರಲ್ಲಿ 35 ಕೆ.ಜಿ ಮತ್ತು ಜೂನ್-2026ರಲ್ಲಿ 35 ಕೆ.ಜಿ ಸೇರಿ ಒಟ್ಟು 70 ಕೆ.ಜಿ ಅಕ್ಕಿ ಹಾಗೂ ರಾಗಿ ಆಹಾರಧಾನ್ಯಗಳನ್ನು ಮೇ-2026ರ ಮಾಹೆಯಲ್ಲೇ ವಿತರಣೆ ಮಾಡಲಾಗಿರುತ್ತದೆ. ಆದ್ದರಿಂದ ಇವರಿಗೆ ಜೂನ್-2026ರ ಮಾಹೆಯಲ್ಲಿ ಹಂಚಿಕೆ ಇರುವುದಿಲ್ಲ.

ಕೇಂದ್ರ ಮತ್ತು ರಾಜ್ಯ ಆದ್ಯತಾ ಪಡಿತರ ಚೀಟಿ ಹೊಂದಿರುವವರಿಗೆ ಪ್ರತಿ ಸದಸ್ಯರಿಗೆ 10 ಕೆ.ಜಿ ಅಕ್ಕಿ ಉಚಿತವಾಗಿ ದೊರೆಯಲಿದೆ. ಯಾವುದೇ ನ್ಯಾಯಬೆಲೆ ಅಂಗಡಿ ಕಾರ್ಯದರ್ಶಿ ಅಥವಾ ಮಾಲೀಕರು ಕಡಿಮೆ ಪ್ರಮಾಣದ ಪಡಿತರವನ್ನು ವಿತರಣೆ ಮಾಡಿದಲ್ಲಿ ಅಥವಾ ಹಣ ಕೇಳಿದಲ್ಲಿ ರಾಜ್ಯ ಸಹಾಯವಾಣಿ ಸಂಖ್ಯೆ 1967 ಹಾಗೂ ಜಂಟಿ ನಿರ್ದೇಶಕರ ಕಚೇರಿ ಅಥವಾ ತಹಶೀಲ್ದಾರ್ ಕಚೇರಿಗೆ ಕರೆ ಮಾಡಿ ದೂರು ದಾಖಲಿಸಬಹುದಾಗಿದೆ ಎಂದು ಆಹಾರ ಜಂಟಿ ನಿರ್ದೇಶಕ ಸಿದ್ರಾಮ ಮಾರಿಹಾಳ ತಿಳಿಸಿದ್ದಾರೆ.

ಮಹಿಳೆಯರಿಂದ ಪ. ಪಂಚಾಯತಿ ಮುಂದೆ ನೀರಿಗಾಗಿ ಪ್ರತಿಭಟನೆ

• **ಉದಯವಾಹಿನಿ, ಕೊಲ್ಹಾರ:**

ಪಟ್ಟಣದ ವಾರ್ಡ್ ನಂಬರ್ 4ರಲ್ಲಿ ಎರಡು ತಿಂಗಳಿನಿಂದ ಕುಡಿಯುವ ನೀರು ಇಲ್ಲ, ಒಳ ಚರಂಡಿ ಸ್ವಚ್ಛತೆ ಇಲ್ಲ, ಪೈಪ್ ಲೈನ್ ಸಲುವಾಗಿ ರಸ್ತೆ ಅಗೆದು ಹಾಗೆ ಬಿಟ್ಟಿದ್ದಾರೆ. ಕಾಮಗಾರಿ ಪೂರ್ಣಗೊಳಿಸಿಲ್ಲ ಎಂದು ಸೋಮವಾರ ಪಟ್ಟಣ ಪಂಚಾಯಿತಿ ಮುಂದೆ ಬಂಜಾರ ಮಹಿಳೆಯರು ಆಕ್ರೋಶ ವ್ಯಕ್ತಪಡಿಸಿದ್ದರು.ಪ್ರತಿಭಟನೆಯಲ್ಲಿ ಬಂಜಾರ ಸಮಾಜದ ತಾಲ್ಲೂಕ್ ಅಧ್ಯಕ್ಷ ಕುಮಾರ ಲಮಾಣಿ ಮಾತನಾಡಿ, ನಮ್ಮ ಕಾಲೋನಿಯಲ್ಲಿ ಎರಡು ತಿಂಗಳಿನಿಂದ ಕುಡಿಯಲು ನೀರು, ಭಾರಿ ಮಳೆಯಿಂದಾಗಿ ಒಳಚರಂಡಿ ಸ್ವಚ್ಛತೆಗೊಳಿಸದೆ ಹಾಗಿರುವದರಿಂದ ಮನೆಗಳಿಗೆ ನೀರು ನುಗ್ಗುತ್ತಿದ್ದು, ಮತ್ತು ಪೈಪ್ ಲೈನ್ ಸಲುವಾಗಿ ರಸ್ತೆಯಾಗಿದ್ದು ಹಾಗೆ ಬಿಟ್ಟಿದ್ದಾರೆ ಕಾಮಗಾರಿ ಪೂರ್ಣಗೊಳಿಸಿ ಎಂದು ಸ್ಥಳೀಯ ಪಟ್ಟಣ ಪಂಚಾಯಿತಿ ಅಧ್ಯಕ್ಷ ಮತ್ತು ಮುಖ್ಯಾಧಿಕಾರಿಗಳಿಗೆ ತಿಳಿಸಿದರು ಯಾವುದೇ ಸ್ಪಂದನೆ ನೀಡುತ್ತಿಲ್ಲ.! ತಿಳಿಸಲು ಪಂಚಾಯಿತಿಗೆ ಬಂದರೆ ಯಾಕೆ ಬರುತ್ತೀರಾ ಎಂದು ಕೇಳುತ್ತಾರೆ. ಶೀಘ್ರದಲ್ಲಿ ಸಮಸ್ಯೆಗಳನ್ನು ಬಗೆಹರಿಸದೆ ಹೋದರೆ ಸಚಿವ, ಶಾಸಕ ಶಿವಾನಂದ್ ಪಾಟೀಲ್ ಅವರಿಗೆ ಸಮಸ್ಯೆಗಳನ್ನು ತಿಳಿಸುತ್ತೇನೆ. ಎಂದು ಕೆಲವು ಕಾಲ ಪಟ್ಟಣ ಪಂಚಾಯಿತಿ ಮುಂದೆ ಕುಳಿತಿರುವ ಪ್ರತಿಭಟನೆಯನ್ನು

ಉದಯವಾಹಿನಿ ಚಿತ್ರ

ಹಿಂಪಡೆದರು.ಈ ಪ್ರತಿಭಟನೆಯಲ್ಲಿ ಬಂಜಾರ ಸಮಾಜದ ತಾಲ್ಲೂಕು ಉಪಾಧ್ಯಕ್ಷರಾದ ರವಿ ಲಮಾಣಿ, ಲಲಿತಾ ಲಮಾಣಿ, ವಲ್ಲುಬಾಯಿ ಲಮಾಣಿ, ರುಕ್ಮ ಬಾಯಿ ಲಮಾಣಿ, ಪ್ರೇಮ ಲಮಾಣಿ, ಲಲಿತಾ ರಾಥೋಡ್ ಹಾಗೂ ಇತರರು ಪಾಲ್ಗೊಂಡಿದ್ದರು.

ಈಗಾಗಲೇ ವಾರ್ಡ್ ನಂಬರ್ 4ರಲ್ಲಿ ಕುಡಿಯುವ ನೀರಿನ ತೊಂದರೆ ಇರುವುದರಿಂದ ಶಾಸಕರ ಅನುದಾನದಲ್ಲಿ 3 ಲಕ್ಷ ವೆಚ್ಚದ ಕುಡಿಯುವ ನೀರಿನ ಇತರೆ ಸಮಸ್ಯೆಗಳನ್ನು ಎರಡು ದಿನಗಳಲ್ಲಿ ಪರ್ಯಾಯದ ವ್ಯವಸ್ಥೆಯನ್ನು ಕಲ್ಪಿಸುತ್ತೇನೆ ತಿಳಿಸಿದರು.

-ಪ.ಪಂಚಾಯಿತಿ ಮುಖ್ಯಾಧಿಕಾರಿ ವಿರೇಶ್ ಹಟ್ಟಿ.

ರಾಘವೇಂದ್ರ ಹಿಟ್ನಾಳಗೆ ಸಚಿವ ಸ್ಥಾನ ನೀಡುವಂತೆ ಆಗ್ರಹ

• **ಉದಯವಾಹಿನಿ ಕೊಪ್ಪಳ:**

ಇಲ್ಲಿನ ವಿಧಾನಸಭಾ ಕ್ಷೇತ್ರದಿಂದ ಸತತ ಮೂರು ಬಾರಿ ಶಾಸಕರಾಗಿರುವ ರಾಘವೇಂದ್ರ ಹಿಟ್ನಾಳ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ಬೆಂಬಲಿಗರು ನಗರದಲ್ಲಿ ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು.

ಅಪಾರ ಸಂಖ್ಯೆಯಲ್ಲಿ ಜನ ನಗರದ ಗೌರಿಶಂಕರ ದೇವಸ್ಥಾನದ ಬಳಿ ಜಮಾಯಿಸಿ ಅಲ್ಲಿಂದ ಅಶೋಕ ವೃತ್ತದ ತನಕ ಪ್ರತಿಭಟನಾ ಮೆರವಣಿಗೆ ಮಾಡಿದರು. ಕೇಂದ್ರಿಯ ಬಸ್ ನಿಲ್ದಾಣದ ಮುಂಭಾಗದಲ್ಲಿ ಟೈಯರ್ ಸುಟ್ಟು ಅಶೋಕ ವೃತ್ತದಲ್ಲಿ ಬೈಕ್‌ಗೆ ಬೆಂಕಿ ಹಚ್ಚಿ ಕಾಂಗ್ರೆಸ್ ಪಕ್ಷದ ವರಿಷ್ಠರು ಹಾಗೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಮ್ಮ ಮನದಾಸೆಯನ್ನು ಅರ್ಥಮಾಡಿಕೊಂಡು ರಾಘವೇಂದ್ರ ಹಿಟ್ನಾಳ ಅವರನ್ನು ಸಚಿವರನ್ನಾಗಿ ಮಾಡಬೇಕು ಎಂದು ಒತ್ತಾಯಿಸಿದರು.

ರಾಘವೇಂದ್ರ ಹಿಟ್ನಾಳ ಮೂರು ಬಾರಿ ಶಾಸಕರಾಗಿದ್ದಾರೆ. ಅವರನ್ನು ಈ ಬಾರಿ ಸಚಿವರನ್ನಾಗಿ ಮಾಡಿದರೆ ಕ್ಷೇತ್ರದ ಅಭಿವೃದ್ಧಿಗೆ

ಉದಯವಾಹಿನಿ ಚಿತ್ರ

ಅನುಕೂಲವಾಗುತ್ತದೆ. ಮುಂದಿನ ಚುನಾವಣೆಯಲ್ಲಿಯೂ ಗೆಲ್ಲಲು ಸಾಧ್ಯವಾಗುತ್ತದೆ' ಎಂದು ಹೇಳಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಿಂದುಳಿದ ವರ್ಗದ ನಾಯಕ ರಾಘವೇಂದ್ರ ಹಿಟ್ನಾಳ ಅವರಿಗೆ ಸಚಿವ ಸ್ಥಾನ ನೀಡಿದರೆ ಪಕ್ಷದ ಸಂಘಟನೆಗೂ ಅನುಕೂಲವಾಗುತ್ತದೆ. 2023ರ ಚುನಾವಣೆ ಸಮಯದಲ್ಲಿ ಹಿಟ್ನಾಳ ಸಚಿವರಾಗುತ್ತಾರೆ ಎನ್ನುವ ಭರವಸೆಯನ್ನು ಮತದಾರರಿಗೆ ಕೊಟ್ಟು ಪ್ರಚಾರ ಮಾಡಿದ್ದೆವು. ನಮ್ಮ ಬೇಡಿಕೆಯನ್ನು ಹೈಕಮಾಂಡ್ ಈಡೇರಿಸಬೇಕು' ಎಂದು ಒತ್ತಾಯಿಸಿದರು.

ಕಾರಹುಣ್ಣಿಮೆ ಬಂದರೂ ಜಾಗ ಬಿಟ್ಟು ಕದಲದ ಕೂರಿಗೆ: ಆತಂಕದಲ್ಲಿ ರೈತರು

ಕಾರಹುಣ್ಣಿಮೆಗೆ ಕಡೆ ಕೂರಿಗೆ ಎಂಬ ಮಾತೈತಿ, ಕುಷ್ಟಗಿ ತಾಲ್ಲೂಕಿನಲ್ಲಿ ಬಾರದ ಮಳೆ, ಮುಂಗಾರು ಅನಿಶ್ಚಿತ

• **ಉದಯವಾಹಿನಿ, ಕುಷ್ಟಗಿ:**

ಬಿತ್ತಿದಾವ ಜಾಣನಾದ ಬಿತ್ತದವ ಕೋಣ ಆದ'... ಈ ಬಾರಿಯ ಮುಂಗಾರು ಹಂಗಾಮಿನ ಅರೆಬರೆ ಮಳೆ, ತೆರೆಮರೆ ಬಿತ್ತನೆ ಕುರಿತಂತೆ ಮಾತಿಗಿಳಿದ ಹಿರಿಯ ರೈತ ಹೊಸೂರು ಶರಣಪ್ಪ ಹಳಹಳಿ ವ್ಯಕ್ತಪಡಿಸಿದ್ದು ಹೀಗೆ. ಕಾರಣ ಇಷ್ಟೇ, ರೋಹಿಣಿ ನಕ್ಷತ್ರದ ಮಳೆ ಕೊನೆಗೊಂಡರೂ ಬಿತ್ತನೆಗೆ ಪೂರ್ಣಪ್ರಮಾಣದಲ್ಲಿ ಚಾಲನೆ ದೊರೆಯದಿರುವ ಕುರಿತು ಆತನ ಮನದಲ್ಲಿ ಹುದುಗಿದ ಬೇಸರದ ಮಾತುಗಳು ಮೇಲಿನಂತೆ ಹೊರಬಂದವು.

ಹೌದು, ಈ ಬಾರಿ ಮುಂಗಾರು ಹಂಗಾಮಿನ ಕೃಷಿ ವ್ಯವಸಾಯವನ್ನು ಮಳೆ ಅನಿಶ್ಚಿತತೆಗೆ ದೂಡಿದ್ದಂತೂ ನಿಜ. ತಾಲ್ಲೂಕಿನ ತಾವರಗೇರಾ, ಹನುಮಸಾಗರ ಹೋಬಳಿ ವ್ಯಾಪ್ತಿಯಲ್ಲಿ ಕೆಲವೆಡೆ ಚದುರಿದಂತೆ ಒಂದಷ್ಟು ಮಳೆಯಾಗಿದ್ದನ್ನು ಹೊರತುಪಡಿಸಿದರೆ ಬಹುತೇಕ ಪ್ರದೇಶದಲ್ಲಿ ಮಳೆಯ ಸುಳಿವಿಲ್ಲ. ಯಾವುದೇ ಭಾಗಕ್ಕೆ ಹೋದರೂ ಕಣ್ಣಿಗೆ ಕಂಡದ್ದು ಖಾಲಿ ಹೊಲಗಳು. ಮೊದಲು ಬಂದ ಅಲ್ಪಸ್ವಲ್ಪ ಮುಂಗಾರುಪೂರ್ವ ಮಳೆಗೆ ಹೊಲಗಳನ್ನು ರಂಟೆ, ಕುಂಟೆ ಹೊಡೆದು ಹದಗೊಳಿಸಿಕೊಂಡಿರುವ ರೈತರು ಬಿತ್ತನೆಗೆ ಸಜ್ಜುಗೊಳಿಸಿಕೊಂಡು ಮಳೆರಾಯನ ನಿರೀಕ್ಷೆಯಲ್ಲಿ ಆಕಾಶದತ್ತ ದೃಷ್ಟಿನೆಟ್ಟಿದ್ದಾರೆ. ಕಾರ್ಮೋಡಗಳು ಸುಳಿದು ಹನಿಸದೆ


ಉದಯವಾಹಿನಿ ಚಿತ್ರ

ಮುಂಗಾರು ಬಿತ್ತನೆ ಕೆಲಸ ಈ ವೇಳೆಗೆ ಪೂರ್ಣಗೊಳ್ಳಬೇಕಿತ್ತು. ಆದರೆ ಮಳೆ ಬಾರದ ಕಾರಣ ಕೃಷಿಚಟುವಟಿಕೆ ಸ್ಥಗಿತಗೊಂಡಿದೆ .

-ಹನುಮಗೌಡ ಪಾಟೀಲ ಬೆಂಚಮಟ್ಟಿ ರೈತ

ಸಾಗುತ್ತಿರುವುದು ರೈತರಲ್ಲಿ ಕಳವಳ ಮೂಡಿಸಿದೆ.

ಹಿರಿಯ ರೈತರು ಅನುಭವದಿಂದ ಹೇಳುವುದು ಹೀಗೆ.. 'ಕಾರಹುಣ್ಣಿಮೆಗೆ ಕಡೆ ಕೂರಿಗೆ ಎಂಬ ಮಾತೈತಿ, ಆದ್ರ ಈ ವರ್ಷ ಇನ್ನೂ ಕೂರಿಗೆ ಮನಿ ಬಿಟ್ಟು ಹೊರಗ ಬಂದಿಲ್ಲ, ಈ ವರ್ಷ ಮಳೆರಾಯ ಯಾಕೊ ಚೆಲ್ಲಾಟ ಆಡಕತ್ಯಾನ, ಆದ್ರೂ ಇವತ್ತ ನಾಳೆ ಮಳಿ ಆಕೃತಿ ಅನ್ನೋ ಆಶಾ ಐತಿ' ಎಂದು. ಅಂದರೆ

ಮಸಾರಿ ಭೂಮಿಗೆ ಮುಂಗಾರು ಹಂಗಾಮು ಆಸರೆ, ಹಿಂಗಾರು ಬೆಳೆಗೆ ಅವಕಾಶವಿಲ್ಲ. ಈಗಲಾದರೂ ಮಳೆಯಾದರೆ ಬಿತ್ತನೆ ನಡೆಸಬಹುದು .

-ಬಸವರಾಜ ಟೆಂಗುಂಟಿ ರೈತ

ಕೃತ್ತಿಕಾ-ರೋಹಿಣಿ ನಕ್ಷತ್ರದ ಮಳೆ ತಿಂಗಳ ಅಂತರದ ಅವಧಿಯಲ್ಲಿ ಬಿತ್ತನೆ ಸಂಪೂರ್ಣ ಮುಗಿಯುವುದು ಹಿಂದಿನಿಂದ ನಡೆದುಬಂದಿರುವ ಪರಂಪರೆ. ಆದರೆ ಮಣ್ಣೆತ್ತಿನ ಅಮಾವಾಸ್ಯೆ, ಹತ್ತಿರವಾದರೂ (ಅಧಿಕವರ್ಷ ಆಗಿರುವುದರಿಂದ ಕಾರಹುಣ್ಣಿಮೆ ತಿಂಗಳು ತಡವಾಗಲಿದೆ) ಬಿತ್ತನೆಯಾಗಿಲ್ಲ, ಆಷಾಡ ಕಳೆದು ಶ್ರಾವಣದ ವೇಳೆಗೆ ಹೊಲಗದ್ದೆಗಳು ಬೆಳೆ ಗಳಿಂದ ಕಂಗೊಳಿಸಬೇಕಿತ್ತು. ಅಂಥ ದೃಶ್ಯ ಈ ಬಾರಿ ಕಾಣಲಿಕ್ಕಿಲ್ಲ ಎನ್ನುತ್ತಾರೆ ರೈತರು.

ತಾಲ್ಲೂಕಿನ ಕೆಲವೆಡೆ ಅಲ್ಪ ಮಳೆಯಾಗಿದ್ದಕ್ಕೆ ರೈತರು ತೊಗರಿ, ಹೆಸರು, ಮೆಕ್ಕೆಜೋಳ ಬಿತ್ತನೆ ನಡೆಸಿದ್ದಾರೆ. ಎರೆಭೂಮಿಯಲ್ಲಿ ಹೆಸರಿಗೆ ಪರ್ಯಾಯವಾಗಿ ತೊಗರಿ ಬೆಳೆಯತ್ತ ರೈತರು ಆಸಕ್ತಿ ವಹಿಸಿದ್ದು ಕಂಡುಬರುತ್ತಿದೆ. ಮಸಾರಿ ಜಮೀನಿನಲ್ಲಿ ಬಿತ್ತಿದ ಈ ಬೆಳೆಗಳು ಮೊಳಕೆಯೊಡೆದಿದ್ದು ತೇವಾಂಶ ಕೊರತೆ ಎದುರಾಗಿದೆ. ಉತ್ತಮ ಮಳೆ ಬಂದರೆ ಮಾತ್ರ ಈ ಬೆಳೆಗಳು ಬದುಕುಳಿಯಲು ಸಾಧ್ಯ ಎನ್ನಲಾಗಿದೆ. ಟ್ರಾಕ್ಟರ್‌ಗಳಿಂದ ಹೊಲಗಳನ್ನು ಹದಗೊಳಿಸಿ ಸಿದ್ಧಪಡಿಸಿದ್ದು ಶೇಕಡ 90ರಷ್ಟು ಬಿತ್ತನೆ ಪ್ರದೇಶದ ರೈತರು ಮಳೆ ನಿರೀಕ್ಷೆಯಲ್ಲಿದ್ದಾರೆ. ಈಗಾಗಲೆ ರೈತರು ಬಿತ್ತನೆ ಬೀಜ, ರಸಗೊಬ್ಬರಗಳನ್ನು ಸಂಗ್ರಹಿಸಿಕೊಂಡಿದ್ದು ಹಸಿ ಮಳೆಯಾದರೆ

ಮಾಯವಾಯ್ತು ಬೆಳೆ ವೈವಿಧ್ಯ

ಮುಂಗಾರು ಹಂಗಾಮಿನಲ್ಲಿ ಹಿಂದೆ ರೈತರು ಜೋಳ, ಸಜ್ಜೆ, ಎಳ್ಳು, ಹಬ್ಬುಶೇಂಗಾ, ಗೆಜ್ಜೆಶೇಂಗಾ ಬೆಳೆಗಳ ಜೊತೆಗೆ ದೀರ್ಘಾವಧಿಯ ಹೆಸರು, ಮಡಿಕೆ, ಅಲಸಂದಿ ಬೆಳೆಯುವ ಮೂಲಕ ಬೆಳೆಗಳಲ್ಲಿ ವೈವಿಧ್ಯ ಮೆರೆಯುವ ಕಾಲವೊಂದಿತ್ತು. ಮಣ್ಣಿನ ಆರೋಗ್ಯ ಕಾಪಾಡುವುದರ ಜೊತೆಗೆ ಭೂಮಿಯಲ್ಲಿ ಪೋಷಕಾಂಶಗಳನ್ನು ಸ್ಥಿರಗೊಳಿಸಲು ದ್ವಿದಳ ಬೆಳೆಗಳೂ ಸಹಕರಿಸುತ್ತಿದ್ದವು. ಇತ್ತೀಚಿನ ವರ್ಷಗಳಲ್ಲಿ ಬೆಳೆ ವೈವಿಧ್ಯ ಮರೆಯಾಗಿದೆ. ಮುಂಗಾರು ಜೋಳ ಮಾಯವಾಗಿ ಅನೇಕ ವರ್ಷಗಳಾದವು, ಪ್ರಮುಖ ಬೆಳೆಯಾಗಿದ್ದ ಸಜ್ಜೆಯನ್ನೂ ಮರೆತಿರುವ ರೈತರು ಈಗ ಮೆಕ್ಕೆಜೋಳಕ್ಕೆ ಮಾತ್ರ ಬೆನ್ನುಬಿದ್ದಿದ್ದಾರೆ. ಪದೇಪದೇ ಒಂದೇ ಬೆಳೆ ಬೆಳೆಯುವುದರಿಂದ ನಿರ್ದಿಷ್ಟ ಕೀಟಗಳ ಹಾವಳಿ ಹೆಚ್ಚುತ್ತದೆ ಎನ್ನುತ್ತವೆ ಕೃಷಿ ಇಲಾಖೆ ಮೂಲಗಳು.

ಲಮಾಣಿ ವಸತಿ ಗೃಹಕ್ಕೆ ಪ್ರವೇಶಕ್ಕೆ ವಿದ್ಯಾರ್ಥಿಗಳಿಗೆ ಅರ್ಜಿ ಅಹ್ವಾನ

• **ಉದಯವಾಹಿನಿ, ಚಿಂಚೋಳಿ:**

ಉದಯವಾಹಿನಿ ಚಿತ್ರ

ಪಟ್ಟಣದ ಚಂದಾಪೂರದ ಕಲಬಾ ಮುಖ್ಯರಸ್ತೆಯ ಗಂಗೂನಾಯಕ ತಾಂಡಾದಲ್ಲಿ ಲಮಾಣಿ ವಸತಿ ಗೃಹಕ್ಕೆ 2026-27ನೇ ಸಾಲಿಗೆ ಪರಿಶೀಷ್ಟ ಜಾತಿ ಪರಿಶೀಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶೇಕಡಾ 75ಪ್ರತಿಶತಃ ದಷ್ಟು ಮತ್ತು ಇತರರ ವರ್ಗದ ಶೇಕಡಾ 25ಪ್ರತಿಶತಃ ಧ್ಯಾರ್ಥಿಗಳಿಗೆ ಅವಕಾಶದ್ದು ಧ್ಯಾರ್ಥಿಗಳು ಅರ್ಜಿ ಸಲ್ಲಿಸಿ ಪ್ರವೇಶ ಪಡೆದುಕೊಳ್ಳಬೇಕೆಂದು ಲಮಾಣಿ ವಸತಿ ಗೃಹದ ಅಧ್ಯಕ್ಷ ರಾಜು ಪವ್ವಾರ್ ತಿಳಿಸಿದ್ದಾರೆ.

ಪತ್ರಿಕಾ ಪ್ರಕಟಣೆ ಹೊರಡಿಸಿದ ಅವರು,ಈಗಾಗಲೇ ಲಮಾಣಿ ವಸತಿ ಗೃಹಕ್ಕೆ ಪ್ರವೇಶಕ್ಕೆ ಅರ್ಜಿ ಅಹ್ವಾನಿಸಲಾಗಿದೆ,ಪರಿಶೀಷ್ಟ ಜಾತಿ,ಪರಿಶೀಷ್ಟ ಪಂಗಡದ ಮತ್ತು ಇತರರ ವರ್ಗದ ಧ್ಯಾರ್ಥಿಗಳು ವಸತಿ ಗೃಹಕ್ಕೆ ಅರ್ಜಿಸಲ್ಲಿಸಿ ಸದುಪಯೋಗ ಪಡೆದುಕೊಳ್ಳಬೇಕು.

ಈಗಾಗಲೇ ವಸತಿ ಗೃಹ ಪ್ರಾರಂಭವಾಗಿದೆ ಧ್ಯಾರ್ಥಿಗಳು ಪ್ರವೇಶ ಪಡೆದುಕೊಳ್ಳಬೇಕು, ನಿಗಧಿ ದಿನಾಂಕದ ಒಳಗೆ ಅಗುಸಿ ಪ್ರವೇಶ ಪಡೆದುಕೊಳ್ಳಬೇಕು ಧ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು ಪಾಲಕರ ಮತ್ತು ಶಾಲೆಯ ಮತ್ತು ವಸತಿ ಗೃಹದ ಹೆಸರು ಅಮರಗೋಳಿಸಬೇಕು ಎಂದರು.

ದಿನ ಭವಿಷ್ಯ

ರಾಹುಕಾಲ	ಮಧ್ಯಾಹ್ನ	03:00 ರಿಂದ 04:30
ಗುಳಿಕ ಕಾಲ	ಮಧ್ಯಾಹ್ನ	12:00 ರಿಂದ 01:30
ಯಮಗಂಡ ಕಾಲ	ಬೆಳಿಗ್ಗೆ	09:00 ರಿಂದ 10:30

ಮೇಷ ತಾತ್ಕಾಲಿಕ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ಮನೆಯ ಕೆಲಸ ಸುಸ್ತು ಮಾಡುತ್ತದೆ ಮತ್ತು ನಿಮ್ಮನ್ನು ಮಾನಸಿಕ ಒತ್ತಡದಲ್ಲಿರಿಸುತ್ತದೆ. ನೀವು ಪ್ರೀತಿಯಲ್ಲಿ ನಿಧಾನವಾಗಿ ಆದರೆ ಸ್ಥಿರವಾಗಿ ಉರಿಯಬಹುದು. ನಿಮ್ಮ ಬಾಲ್ಯದ ನೆನಪುಗಳು ನಿಮ್ಮನ್ನು ಆವರಿಸಿಕೊಳ್ಳುತ್ತವೆ.

ವೃಷಭ ನಿಮ್ಮ ಕುಟುಂಬದ ಸದಸ್ಯರ ಅಗತ್ಯಗಳ ಮೇಲೆ ಗಮನ ಹರಿಸುವುದು ಇಂದು ನಿಮ್ಮ ಆದ್ಯತೆಯಾಗಿರಬೇಕು. ನಿಮ್ಮ ಉಪಸ್ಥಿತಿ ನಿಮ್ಮ ಪ್ರೀತಿಪಾತ್ರರಿಗೆ ಈ ವಿಶ್ವವನ್ನು ಒಂದು ಯೋಗ್ಯ ಸ್ಥಾನವನ್ನಾಗಿ ಮಾಡುತ್ತದೆ. ಹೊಸ ಗ್ರಾಹಕರೊಂದಿಗೆ ಮಾತುಕತೆಗೆ ಇದೊಂದು ಅದ್ಭುತ ದಿನ.

ಮಿಥುನ ನಿಮ್ಮ ನಿರೀಕ್ಷೆಗಳನ್ನು ಪೂರೈಸಲು ವೈಯಕ್ತಿಕ ಸಂಬಂಧಗಳನ್ನು ದುರ್ಬಳಕೆ ಮಾಡುವುದು ನಿಮ್ಮ ಪತ್ನಿಗೆ ಕೋಪ ಬರಿಸುತ್ತದೆ. ನಿಮ್ಮ ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ. ಇತರರಿಗೆ ಪ್ರತಿಫಲಗಳು ತರುವ ನಿಮ್ಮ ಸಾಮರ್ಥ್ಯ ಪ್ರತಿಫಲ ತರುತ್ತದೆ.

ಕರ್ಕಾಟಕ ನಿಮ್ಮಲ್ಲಿ ಶಕ್ತಿಯ ಕೊರತೆಯಿರದೇ ಆತ್ಮವಿಶ್ವಾಸದ ಕೊರತೆಯಿರುವುದರಿಂದ ನಿಮ್ಮ ನಿಜವಾದ ಸಾಮರ್ಥ್ಯವನ್ನು ಅರಿತುಕೊಳ್ಳಿ. ಹಣಕಾಸು ಸ್ಥಿತಿ ಊಹಾಪೋಹ ಅಥವಾ ಅನಿರೀಕ್ಷಿತ ಲಾಭದ ಮೂಲಕ ಸುಧಾರಿಸುತ್ತವೆ. ಸಹೋದರಿಯ ವೈವಾಹಿಕ ಸಂಬಂಧದ ಸುದ್ದಿ ನಿಮ್ಮನ್ನು ಸಂತುಷ್ಟಗೊಳಿಸಬಹುದು.

ಸಿಂಹ ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ ಮತ್ತು ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ದೀರ್ಘ ಕಾಲ ಬಾಕಿಯಿದ್ದ ಬಾಕಿಗಳು ಕೊನೆಗೂ ದೊರಕುತ್ತವೆ. ಸ್ನೇಹಿತರು ನಿಮ್ಮ ವೈಯಕ್ತಿಕ ಜೀವನದಲ್ಲಿ ಅಗತ್ಯಕ್ಕಿಂತಲೂ ಹೆಚ್ಚು ಹಸ್ತಕ್ಷೇಪ ಮಾಡುತ್ತಾರೆ.

ಕನ್ಯಾ ಸಂತಸದ ಪ್ರಯಾಣ ಮತ್ತು ಸಾಮಾಜಿಕ ಕಾರ್ಯಕ್ರಮಗಳು ನಿಮಗೆ ಆರಾಮ ಮತ್ತು ಸಂತೋಷ ತರುತ್ತದೆ. ರಿಯಲ್ ಎಸ್ಟೇಟ್ ನಲ್ಲಿ ಹೂಡಿಕೆ ಲಾಭದಾಯಕವಾಗಬಹುದು. ಕುಟುಂಬ ಸದಸ್ಯರಿಗೆ ಸಹಾಯ ಮಾಡಲು ಮುಕ್ತ ಸಮಯದ ಲಾಭ ತೆಗೆದುಕೊಳ್ಳಿ.

ತುಲಾ ನಿಮ್ಮ ಜಗಳಗಂಟ ನಡವಳಿಕೆ ನಿಮ್ಮ ಸಂಬಂಧವನ್ನು ಶಾಶ್ವತವಾಗಿ ಹಾಳು ಮಾಡಬಹುದಾದ್ದರಿಂದ ಅದನ್ನು ನಿಯಂತ್ರಣದಲ್ಲಿಡಿ. ನೀವು ತೆರೆದ ಮನಸ್ಸನ್ನು ಹೊಂದುವ ಮೂಲಕ ಮತ್ತು ಯಾರಾದರ ವಿರುದ್ಧ ಪೂರ್ವಾಗ್ರಹವನ್ನು ಕೈಬಿಡುವ ಮೂಲಕ ಇದರಿಂದ ಹೊರಬರಬಹುದು.

ವೃಶ್ಚಿಕ ನಿಮ್ಮ ಜೀವನದ ಕಳಪೆ ಆರೋಗ್ಯ ದಿಂದಾಗಿ, ನಿಮ್ಮ ಹಣವನ್ನು ಇಂದು ಖರ್ಚು ಮಾಡಬಹುದು, ಆದರೆ ನೀವು ಅದರ ಬಗ್ಗೆ ಚಿಂತಿಸಬೇಕಾಗಿಲ್ಲ ಏಕೆಂದರೆ ಹಣವನ್ನು ಉಳಿಸಲಾಗಿದೆ ಇದರಿಂದ ಅದು ಕೆಟ್ಟ ಸಮಯದಲ್ಲಿ ನಿಮಗೆ ಉಪಯುಕ್ತವಾಗಿರುತ್ತದೆ.

ಧನಸ್ಸು ಯೋಗ ಮತ್ತು ಧ್ಯಾನ ನೀವು ಒಳ್ಳೆಯ ದೇಹರಚನೆ ಕಾಯ್ದುಕೊಳ್ಳಲು ಮತ್ತು ಮಾನಸಿಕವಾಗಿ ಸಧೃಢವಾಗಿರಲು ಸಹಾಯ ಮಾಡುತ್ತದೆ. ರಿಯಲ್ ಎಸ್ಟೇಟ್ ಮತ್ತು ಆರ್ಥಿಕ ವ್ಯವಹಾರಗಳಿಗೆ ಒಳ್ಳೆಯ ದಿನ. ಸ್ನೇಹಿತರು ಸಂತೋಷದ ಸಂಜೆಗಾಗಿ ನಿಮ್ಮನ್ನು ಅವರ ಸ್ಥಳಕ್ಕೆ ಆಮಂತ್ರಿಸುತ್ತಾರೆ.

ಮಕರ ನಿಮ್ಮ ಪ್ರೇಮಿಗೆ ಇಷ್ಟವಿಲ್ಲದ ಉಡುಪುಗಳು ಅವರಿಗೆ ಮುಜುಗರ ಉಂಟು ಮಾಡಬಹುದಾದ್ದರಿಂದ ಅವುಗಳನ್ನು ಧರಿಸಬೇಡಿ. ವ್ಯಾಪಾರ ಸಹವರ್ತಿಗಳು ಬೆಂಬಲ ನೀಡುತ್ತಾರೆ ಮತ್ತು ನೀವು ಬಾಕಿಯಿರುವ ಕೆಲಸಗಳನ್ನು ಪೂರ್ಣಗೊಳಿಸಲು ಒಟ್ಟಿಗೆ ಕೆಲಸ ಮಾಡುತ್ತೀರಿ.

ಕುಂಭ ಜಂಟಿ ಯೋಜನೆಗಳು ಮತ್ತು ಸಂಶಯಾಸ್ಪದ ಹಣಕಾಸು ಯೋಜನೆಗಳಲ್ಲಿ ಹೂಡಿಕೆ ಮಾಡಬೇಡಿ. ನೀವು ಪ್ರೀತಿಸುವವರಿಂದ ಉಡುಗೊರೆಗಳನ್ನು ಪಡೆಯಲು ಹಾಗೂ ನೀಡಲು ಪವಿತ್ರವಾದ ದಿನ. ನಿಮ್ಮ ಪ್ರೀತಿಯ ಕಥೆ ಇಂದು ಒಂದು ಹೊಸ ತಿರುವು ತೆಗೆದುಕೊಳ್ಳಬಹುದು.

ಮೀನ ಇಂದು ಕೆಲಸದಲ್ಲಿ ಅದ್ಭುತ ದಿನದಂತೆ ತೋರುತ್ತಿದೆ. ನೀವು ಶಾಪಿಂಗ್ ಹೋಗುತ್ತಿದ್ದಲ್ಲಿ ದುಂದುವೆಚ್ಚವನ್ನು ತಪ್ಪಿಸಿ. ಮದುವೆ ಕೇವಲ ಲೈಂಗಿಕತೆಯ ಬಗ್ಗೆ ಮಾತ್ರವಿದೆ ಎಂದು ಹೇಳುವವರು, ಸುಳ್ಳು ಹೇಳುತ್ತಿದ್ದಾರೆ. ಏಕೆಂದರೆ ಇಂದು, ನೀವು ನಿಜವಾದ ಪ್ರೀತಿ ಏನೆಂದು ಅರ್ಥ ಮಾಡಿಕೊಳ್ಳುತ್ತಾರೆ.

ಡಿಕೆಶಿ 2ನೇ ಹಂತದ ಸಚಿವ ಸಂಪುಟದಲ್ಲಿ ಹಾವೇರಿ ಶಾಸಕರಿಗೆ ಸಿಗಲಿದೆಯಾ ಅವಕಾಶ?

ಈ ಬಾರಿ ನೂತನ ಸಿಎಂ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಸಚಿವ ಸಂಪುಟದಲ್ಲಿ ಹಾವೇರಿಗೆ ಸಚಿವ ಸ್ಥಾನ ಸಿಗುವುದೇ ಎನ್ನುವ ಕುತೂಹಲ ಹೆಚ್ಚಾಗಿದೆ.

• **ಉದಯವಾಹಿನಿ, ಹಾವೇರಿ**

ನೂತನ ಸಿಎಂ ಡಿ.ಕೆ.ಶಿವಕುಮಾರ್ ನೇತೃತ್ವದ ಸಚಿವ ಸಂಪುಟದಲ್ಲಿ ಹಾವೇರಿ ಜಿಲ್ಲೆಗೆ ಪ್ರಾತಿನಿಧ್ಯ ಸಿಗುತ್ತೆ ಎಂಬ ಮಾತುಗಳು ಕೇಳಿ ಬಂದಿದ್ದವು. ಆದರೆ, ಮೊದಲ ಹಂತದ ಸಚಿವ ಸಂಪುಟ ರಚನೆಯಲ್ಲಿ ಹಾವೇರಿಯ ಯಾವ ಶಾಸಕರಿಗೂ ಸಚಿವ ಸ್ಥಾನ ಸಿಕ್ಕಿಲ್ಲ. ಇದೀಗ ಎರಡನೇ ಹಂತದ ಸಚಿವ ಸಂಪುಟದಲ್ಲಿ ಹಾವೇರಿ ಜಿಲ್ಲೆಯ ಶಾಸಕರಿಗೆ ಸಚಿವ ಸ್ಥಾನ ಸಿಗಲಿದೆ ಎನ್ನುವ ವಿಶ್ವಾಸವನ್ನು ಕಾಂಗ್ರೆಸ್ ನಾಯಕರು ವ್ಯಕ್ತಪಡಿಸುತ್ತಿದ್ದಾರೆ. ಜಿಲ್ಲೆಯ ಆರು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರಿದ್ದಾರೆ.

ಹಾವೇರಿ ಕ್ಷೇತ್ರಕ್ಕೆ ರುದ್ರಪ್ಪ ಲಮಾಣಿ, ಬ್ಯಾಡಗಿ ಕ್ಷೇತ್ರಕ್ಕೆ ಬಸವರಾಜ ಶಿವಣ್ಣನವರ್, ಹಾನಗಲ್ ಕ್ಷೇತ್ರಕ್ಕೆ ಶ್ರೀನಿವಾಸ್ ಮಾನೆ, ಹಿರೇಕೆರೂರು ಕ್ಷೇತ್ರಕ್ಕೆ ಯು.ಬಿ.ಬಣಕಾರ್ ರಾಣೆಬೆನ್ನೂರು ಕ್ಷೇತ್ರಕ್ಕೆ ಪ್ರಕಾಶ್ ಕೋಳಿವಾಡ್ ಮತ್ತು ಶಿಗ್ಗಾಂವ್ ಸವಣೂರು ಕ್ಷೇತ್ರಕ್ಕೆ ಯಾಸೀರ್ ಖಾನ್ ಪಠಾಣ್.

ಸಚಿವಗಿರಿಗಾಗಿ ಶಾಸಕರ ನಡುವೆ ಕಿರಿಕಿರಿ: ಹಾವೇರಿ ಜಿಲ್ಲೆಯ ಬ್ಯಾಡಗಿ ಶಾಸಕ ಬಸವರಾಜ್ ಶಿವಣ್ಣನವರ್, ಹಾವೇರಿ ಶಾಸಕ ರುದ್ರಪ್ಪ ಲಮಾಣಿ ಮತ್ತು ಹಾನಗಲ್ ಕ್ಷೇತ್ರದ ಶಾಸಕ ಶ್ರೀನಿವಾಸ್ ಮಾನೆ ನಡುವೆ ಸಚಿವ ಸ್ಥಾನಕ್ಕೆ ತೀವ್ರ ಪೈಪೋಟಿ ಏರ್ಪಟ್ಟಿದೆ. ಆದರೆ ಬ್ಯಾಡಗಿ ಶಾಸಕ ಬಸವರಾಜ್ ಶಿವಣ್ಣನವರ್ ವಿರುದ್ಧ ಹಾನಗಲ್ ಶಾಸಕ ಶ್ರೀನಿವಾಸ್ ಮಾನೆ ಅಪಪ್ರಚಾರ ಮಾಡಿದ್ದಾರೆ ಎನ್ನುವ ಮಾತುಗಳು ಕಾಂಗ್ರೆಸ್ ಪಾಳೆಯದಲ್ಲಿ ಕೇಳಿಬಂದಿವೆ.

ಉದಯವಾಹಿನಿ ಚಿತ್ರ

> ನಾನು ಎರಡು ಬಾರಿ ವಿಧಾನಪರಿಷತ್ ಸದಸ್ಯನಾಗಿದ್ದೇನೆ. ಎರಡು ಬಾರಿ ಶಾಸಕನಾಗಿ ಆಯ್ಕೆಯಾಗಿದ್ದೇನೆ. ಸಚಿವ ಸ್ಥಾನ ಅಂತಿಮ ನಿರ್ಣಯ ಹೈಕಮಾಂಡ್‌ಗೆ ಬಿಟ್ಟಿದ್ದು ನನಗೆ ಸಚಿವ ಸ್ಥಾನ ನೀಡಿ ಎಂದು ಕೇಳಿದ್ದೇನೆ. ಜಿಲ್ಲೆಯಲ್ಲಿ ಯಾರಿಗೆ ಕೊಟ್ಟರು ಸ್ವಾಗತ ಎಂದು ತಿಳಿಸಿದ್ದಾರೆ.
> -ಮಾನೆ

ಹೈಕಮಾಂಡ್ ಹೆಸರು ಸಹ ಗೊತ್ತಿಲ್ಲ

ಬ್ಯಾಡಗಿ ಶಾಸಕ ಬಸವರಾಜ್ ಶಿವಣ್ಣನವರ್‌ಗೆ ವಯಸ್ಸಾಗಿದೆ. ಅವರಿಗೆ ಆರೋಗ್ಯ ಸರಿಯಿಲ್ಲ. ಕಾಂಗ್ರೆಸ್ ಹೈಕಮಾಂಡ್ ಹೆಸರು ಸಹ ಅವರಿಗೆ ಗೊತ್ತಿಲ್ಲ ಎಂದು ಮಾನೆ ದೂರಿದ್ದಾರೆ ಎನ್ನಲಾಗಿದೆ. ಇದು ಬ್ಯಾಡಗಿ ಶಾಸಕ ಬಸವರಾಜ್ ಶಿವಣ್ಣನವರಿಗೆ ಆಕ್ರೋಶ ತಂದಿದೆ.

ಶಿವಣ್ಣನವರ್ ಆರೋಪ ನಿರಾಧಾರ: ಆದರೆ, ಬ್ಯಾಡಗಿ ಶಾಸಕ ಬಸವರಾಜ್ ಶಿವಣ್ಣನವರ್ ಆರೋಪ ನಿರಾಧಾರ ಎಂದು ಹಾನಗಲ್ ಶಾಸಕ ಶ್ರೀನಿವಾಸ ಮಾನೆ ಅಭಿಪ್ರಾಯಪಟ್ಟಿದ್ದಾರೆ. ಬಸವರಾಜ್ ಶಿವಣ್ಣನವರ್ ಬಗ್ಗೆ ನಾನು ಯಾರ ಮುಂದೆನೂ ಚರ್ಚೆ ಮಾಡಿಲ್ಲ. ಇನ್ನೊಬ್ಬರ ತೇಜೋವಧೆ ಮಾಡಿ ನನಗೆ ಸಚಿವ ಸ್ಥಾನ ಪಡೆಯುವ ಜರೂರು ಇಲ್ಲ. ಬಸವರಾಜ್ ಆರೋಪಿಸುತ್ತಿದ್ದಂತೆ ಹಾವೇರಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಂಜೀವ ನೀರಲಗಿಗೆ ಪತ್ರ ಬರೆದು ಸ್ಪಷ್ಟನೆ ನೀಡಿದ್ದೇನೆ. ನಾನು ಹಾವೇರಿ ಜಿಲ್ಲೆಯಲ್ಲಿ ಯಾರನ್ನು ಓವರಟೇಕ್ ಮಾಡಿಲ್ಲ. ಓವರಟೇಕ್ ಮಾಡುವ ಅವಶ್ಯಕತೆ ನನಗಿಲ್ಲ. ನಾನು ಕಾಂಗ್ರೆಸ್ ಪಕ್ಷದ ಸಾಮಾನ್ಯ ಕಾರ್ಯಕರ್ತನಾಗಿ ರಾಷ್ಟ್ರಮಟ್ಟದಲ್ಲಿ ಕೆಲಸ ಮಾಡಿದ್ದೇನೆ. ನನಗೆ ಸಚಿವ ಸ್ಥಾನ ಪಡೆಯಲು ಇನ್ನೊಬ್ಬರಿಗೆ ಸಚಿವ ಸ್ಥಾನ ತಪ್ಪಿಸುವ ಅವಶ್ಯಕತೆ ಇಲ್ಲ ಎಂದು ಶ್ರೀನಿವಾಸ ಮಾನೆ ತಿಳಿಸಿದ್ದಾರೆ.

> ಹಾವೇರಿ ಜಿಲ್ಲೆಯಲ್ಲಿ ಹಿರಿಯ ಶಾಸಕನಿದ್ದೇನೆ. ಅನುಭವಿ ರಾಜಕಾರಣಿಯಾಗಿದ್ದು ಶ್ರೀನಿವಾಸ್ ಮಾನೆ ಈ ರೀತಿ ಅಪಪ್ರಚಾರ ಮಾಡಬಾರದಾಗಿತ್ತು. ಅವರು ಸಚಿವ ಸ್ಥಾನ ಕೇಳಲಿ ಆದರೆ ಇನ್ನೊಬ್ಬರ ಬಗ್ಗೆ ಕಿವಿ ಚುಚ್ಚುವುದು ಎಷ್ಟು ಸರಿ ಎಂದು ಬಸವರಾಜ್ ಶಿವಣ್ಣನವರ್ ಬೇಸರ ವ್ಯಕ್ತಪಡಿಸಿದ್ದಾರೆ. ಹಾವೇರಿ ಜಿಲ್ಲೆಯ ಮೂವರು ಆಕಾಂಕ್ಷಿಗಳಲ್ಲಿ ಯಾರಿಗಾದರೂ ಸಚಿವ ಸ್ಥಾನ ನೀಡಲಿ ಸ್ವಾಗತಿಸುತ್ತೇನೆ ಎಂದು ತಿಳಿಸಿದ್ದಾರೆ.
> -ಬಸವರಾಜ ಶಿವಣ್ಣನವರ್

ಪ್ರಿಯಾಂಕ್ ಖರ್ಗೆ ವಿರುದ್ಧ ಜಾತಿನಿಂದನೆ, ಜೀವಬೆದರಿಕೆ ಕಮೆಂಟ್ - ಆರೋಪಿ ಬಂಧನ

• **ಉದಯವಾಹಿನಿ, ಕಾರ್ಕಳ**

ಸಾಮಾಜಿಕ ಜಾಲತಾಣದಲ್ಲಿ ದಲಿತ ಸಮುದಾಯಕ್ಕೆ ಸೇರಿದ ಗೃಹಸಚಿವರ ವಿರುದ್ಧ ಅವಹೇಳನಕಾರಿ ಹಾಗೂ ದ್ವೇಷಪೂರಿತ ಕಾಮೆಂಟ್ ಮಾಡಿರುವ ಆರೋಪದಡಿ ಕಾರ್ಕಳ ನಗರ ಪೊಲೀಸರು ವ್ಯಕ್ತಿಯೊಬ್ಬನನ್ನು ಬಂಧಿಸಿದ್ದಾರೆ.

ದೂರುದಾರ ಸುರೇಶ್ ಅವರು ನೀಡಿದ ದೂರಿನ ಪ್ರಕಾರ, ತಮ್ಮ ಫೇಸ್‌ಬುಕ್ ಖಾತೆ ವೀಕ್ಷಿಸುತ್ತಿದ್ದ ವೇಳೆ ನಮ್ಮ ಕೇರಳ ಎಂಬ ಫೇಸ್‌ಬುಕ್ ಪುಟದಲ್ಲಿ ರಾಜ್ಯದ ಗೃಹ ಸಚಿವರ ಕುರಿತಾದ ಪೋಸ್ಟ್‌ಗೆ ಸುಧೀರ್ ಬಂಗೇರ ಎಂಬಾತ ಅವಹೇಳನಕಾರಿ ಕಾಮೆಂಟ್ ಮಾಡಿರುವುದು ಗಮನಕ್ಕೆ ಬಂದಿದೆ. ಕಾಮೆಂಟ್‌ನಲ್ಲಿ ಸಚಿವರ ಜಾತಿಯನ್ನು ಉಲ್ಲೇಖಿಸಿ ನಿಂದನೆ ಮಾಡಿರುವುದಲ್ಲದೇ, ಸಾಮಾಜಿಕ ಸಾಮರಸ್ಯಕ್ಕೆ ಧಕ್ಕೆ ಉಂಟುಮಾಡುವ ಹಾಗೂ ವಿವಿಧ ಸಮುದಾಯಗಳ ನಡುವೆ ದ್ವೇಷ ಮತ್ತು ವೈರತ್ವ ಸೃಷ್ಟಿಸುವ ಉದ್ದೇಶವಿದೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಈ ಸಂಬಂಧ ಕಾರ್ಕಳ ನಗರ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 82/2026ರಂತೆ ಭಾರತೀಯ ನ್ಯಾಯ ಸಂಹಿತೆ (@KT) ಕಲಂ 351(3), 196, 353(2) ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯ ಕಲಂ 3(1)(ಡಿ) ಮತ್ತು 3(1) ಅಡಿ ಪ್ರಕರಣ ದಾಖಲಾಗಿದೆ.

ಉದಯವಾಹಿನಿ ಚಿತ್ರ

ಪ್ರಕರಣದ ಆರೋಪಿಯಾಗಿರುವ ನಲ್ಕೆದಬೆಟ್ಟು, ಕೆರ್ವಾಶೆ ನಿವಾಸಿಯಾಗಿರುವ ಭೋಜ ಬಂಗೇರ ಅವರ ಪುತ್ರ ಸುಧೀರ್ ಬಂಗೇರ (48)ನನ್ನು ಪೊಲೀಸರು ಬಂಧಿಸಿದ್ದು, ನ್ಯಾಯಾಲಯಕ್ಕೆ ಹಾಜರುಪಡಿಸುವ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗ್ರಾಮೀಣ ರಸ್ತೆಗಳಲ್ಲಿ ಕಾಡುತ್ತಿದೆ ಮಳೆಗಾಲದ ಭೀತಿ

• **ಉದಯವಾಹಿನಿ, ಶಿರಸಿ**

ಮುಂಗಾರು ಆರಂಭದ ಬೆನ್ನಲ್ಲೇ ತಾಲ್ಲೂಕಿನ ಗ್ರಾಮೀಣ ಭಾಗದ ಪ್ರಮುಖ ರಸ್ತೆಗಳಲ್ಲಿ ಸಂಚಾರ ನಡೆಸುವ ವಾಹನ ಸವಾರರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ರಸ್ತೆಗಳ ಇಕ್ಕೆಲಗಳಲ್ಲಿ ಬೆಳೆದಿರುವ ಅಪಾಯಕಾರಿ ಗಿಡಮರಗಳನ್ನು ಮಳೆಗಾಲಕ್ಕೆ ಮುನ್ನ ತೆರವು ಕಾರ್ಯ ಸಮರ್ಪಕವಾಗಿ ನಡೆಯದ ಕಾರಣ ಪ್ರಸ್ತುತ ಅವು ಇನ್ನಷ್ಟು ಅಪಾಯಕಾರಿಯಾಗಿದ್ದು, ಆತಂಕಕ್ಕೆ ಕಾರಣವಾಗಿವೆ. ತಾಲ್ಲೂಕಿನ ಗ್ರಾಮೀಣ ಭಾಗದ ಪ್ರಮುಖ ಸಂಪರ್ಕ ರಸ್ತೆಗಳಾದ ಶಿರಸಿ-ಹುಲೇಕಲ್, ಜಡ್ಡಿಗದ್ದೆ, ಕಕ್ಕಳ್ಳಿ, ಸಾಲ್ಕಣಿ, ಮತ್ತಿಘಟ್ಟ, ಹೆಗ್ಗರಣಿ ಸೇರಿ ಹಲವು ಮಾರ್ಗದ ರಸ್ತೆ ಬದಿಯಲ್ಲಿ ಕಾಡು ಗಿಡಗಂಟಿಗಳು ರಸ್ತೆಯನ್ನೇ ಆವರಿಸಿಕೊಳ್ಳುತ್ತಿವೆ. ಜತೆಗೆ ಅಪಾಯಕಾರಿ ಮರಗಳು ರಸ್ತೆಯಂಚಲ್ಲಿ ಇವೆ. ಇದು ಗಾಳಿಮಳೆಗೆ ಸವಾರರ ಪ್ರಾಣಕ್ಕೆ ಸಂಚಕಾರ ತಂದೊಡ್ಡುವ ಸಾಧ್ಯತೆಯಿದೆ. ಮಳೆಗಾಲದ ಮುನ್ನವೇ ಲೋಕೋಪಯೋಗಿ ಇಲಾಖೆ ಹಾಗೂ ಸಂಬಂಧಪಟ್ಟ ಪಂಚಾಯಿತಿ ವ್ಯಾಪ್ತಿಯಲ್ಲಿ ರಸ್ತೆ ಬದಿಯ ಜಂಗಲ್ ಕಟಿಂಗ್ ಕಾರ್ಯ ನಡೆಸಬೇಕಾಗಿತ್ತು.ಆದರೆ, ಈ ಬಾರಿ ಇಲಾಖೆಯು ಯಾವುದೇ ಮುಂಜಾಗ್ರತಾ ಕ್ರಮಕ್ಕೆ ಮುಂದಾಗದೇ ಉದಾಸೀನತೆ ತೋರಿಸಿರುವುದು ಸ್ಪಷ್ಟವಾಗಿ ಎದ್ದುಕಾಣುತ್ತಿದೆ' ಎಂಬುದು ಈ ಮಾರ್ಗಗಳಲ್ಲಿ ಸಾಗುವ ವಾಹನ ಸವಾರರ ದೂರಾಗಿದೆ.

'ಹಲವೆಡೆ ಕಡಿದಾದ ತಿರುವುಗಳಿಂದ ಕೂಡಿರುವ ಗ್ರಾಮೀಣ ರಸ್ತೆಗಳಲ್ಲಿ ಗಿಡಗಳು ಬೆಳೆದು ನಿಂತಿರುವುದರಿಂದ ವಾಹನ ಸವಾರರಿಗೆ ಎದುರುಗಡೆಯಿಂದ ಬರುವ ವಾಹನಗಳು ಕಣ್ಣಿಗೆ ಕಾಣಿಸದಂತಾಗಿದೆ. ಪ್ರಮುಖವಾಗಿ ದ್ವಿಚಕ್ರ ವಾಹನ ಸವಾರರು ಹಾಗೂ ಲಘು ವಾಹನಗಳ ಚಾಲಕರು ತಿರುವುಗಳಲ್ಲಿ ನಿಯಂತ್ರಣ ತಪ್ಪಿ ಅಪಘಾತಕ್ಕೀಡಾಗುತ್ತಿರುವ ಘಟನೆಗಳು ಹೆಚ್ಚುತ್ತಿವೆ. ಈಗ ಮಳೆ ಆರಂಭವಾಗಿದ್ದು, ಸಮಸ್ಯೆ ಮತ್ತಷ್ಟು ಉಲ್ಬಣಿಸುತ್ತಿದೆ' ಎಂಬುದು ವಾಹನ ಸವಾರ ಹರೀಶ ಭಟ್ ಮಾತು.

ಡಾ.ಬಾಬುಜೀ ರವರ ನಾಮಫಲಕ ತೆರವು ಕಿಡಿಗೇಡಿಗಳ ಬಂಧನಕ್ಕೆ ಒತ್ತಾಯ

• **ಉದಯವಾಹಿನಿ, ಕಲಬುರಗಿ**

ನಗರದ ಫಿಲ್ಟರಬೆಡ್ ಆಶ್ರಯ ಕಾಲೋನಿಯಲ್ಲಿರುವ ಹಸಿರು ಕ್ರಾಂತಿಯ ಹರಿಕಾರ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನರಾಮ ರವರ ನಾಮಫಲಕವನ್ನು ಕಿಡಿಗೇಡಿಗಳು ಮದ್ಯ ಸೇವಿಸಿ ನಾಮಫಲಕ ತೆರವುಗೊಳಿಸದ್ದು, ನಾಮಫಲಕವನ್ನು ತೆರವುಗೊಳಿಸಿದ್ದ ಕಿಡಿಗೇಡಿಗಳನ್ನು ಬಂಧಿಸಬೇಕು ಎಂದು ಡಾ.ಬಾಬು ಜಗಜೀವನರಾಮ ಜಿಲ್ಲಾ ಜಯಂತೋತ್ಸವ ಸಮಿತಿ ವತಿಯಿಂದ ಸಹಾಯಕ ಪೋಲಿಸ ಆಯುಕ್ತರಿಗೆ ಮನವಿ ಪತ್ರ ಸಲ್ಲಿಸಿದ್ದರು.

ಸುಮಾರು ವರ್ಷಗಳಿಂದ ಎಪ್ರಿಲ್ 5 ರಂದು ಡಾ.ಬಾಬು ಜಗಜೀವನರಾಮ ರವರ ಜನ್ಮದಿನದಂದು ಫಿಲ್ಟರ್ ಬೆಡ್ ಆಶ್ರಯ ಕಾಲೋನಿಯಲ್ಲಿರುವ ನಾಮಫಲಕಕ್ಕೆ ಮಾಲಾರ್ಪಣೆ ಮಾಡುವ ಮೂಲಕ ಈ ಮಹಾಪುರುಷರ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಣೆ ಮಾಡುತ್ತೇವೆ. ಆದರೆ ಶನಿವಾರ ರಾತ್ರೋ ರಾತ್ರಿ ಕಿಡಿಗೇಡಿಗಳು ಮದ್ಯ ಸೇವಿಸಿ ಮಹಾ ಪುರುಷರ ನಾಮಫಲಕ ತೆರವುಗೊಳಿಸಿದ್ದಾರೆ. ಅಲ್ಲದೇ ಸ್ಥಳದಲ್ಲಿಯೇ ಮದ್ಯದ ಬಾಟಲಿಗಳನ್ನು ಒಡೆದು ಹಾಕಿ ಬಡಾವಣೆಯಲ್ಲಿ ಅಶಾಂತಿ ನಿರ್ಮಾಣ ಮಾಡಿದ್ದಾರೆ ಎಂದು ಅವರು ಆರೋಪಿಸಿದರು.

ಉದಯವಾಹಿನಿ ಚಿತ್ರ

ಕೂಡಲೇ ಡಾ.ಬಾಬು ಜಗಜೀವನ ರಾಮ ರವರ ನಾಮಫಲಕವನ್ನು ತೆರವುಗೊಳಿಸಿದ ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು ಮತ್ತು ಅವರ ವಿರುದ್ಧ ಸೂಕ್ತ ಕ್ರಮ ಜರುಗಿಸಿ ಅವರನ್ನು ಕೂಡಲೇ ಬಂಧಿಸಬೇಕು ಎಂದು ಅವರು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಜಯಂತೋತ್ಸವ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ದೊಡ್ಡಮನಿ,ಅನೀಲಕುಮಾರ ಬೆಳಕೇರಿ,ಮಂಜುನಾಥ ನಾಲವಾರಕರ್,ಮಲ್ಲಿಕಾರ್ಜುನ ಜಿನಕೇರಿ,ಗೋಪಾಲ ನಾಟೀಕಾರ,ಅರವಿಂದ ನಾಟೀಕಾರ, ಪ್ರಕಾಶ ಮಾಳಗೆ,ರಂಜೀತ ಮೂಲಿಮನಿ,ಪ್ರದೀಪ ಬಾಚನಳ್ಳಿ, ಅರ್ಜುನ ಕಾಳನೂರ,ಧರ್ಮರಾಜ ಶಾಹಪೂರಕರ್,ಲಖನ ಗುಲ್ಲಾಬಡಿ ಸೇರಿದಂತೆ ಮುಖಂಡರು ಇದ್ದರು.

ಮಳೆನೀರಿಗೆ ತಡೆ, ಇಲಾಖೆಗಳಿಂದಲೂ ನಿರ್ಲಕ್ಷ: ಸಾಂಕ್ರಾಮಿಕ ಆತಂಕ

• **ಉದಯವಾಹಿನಿ, ಕಾರವಾರ**

ಮಳೆಗಾಲ ಆರಂಭದೊಂದಿಗೆ ಜಿಲ್ಲೆಯಲ್ಲಿ ಸಾಂಕ್ರಾಮಿಕ ಕಾಯಿಲೆ ಹರಡುವ ಆತಂಕವೂ ಎದುರಾಗುತ್ತದೆ. ಆರೋಗ್ಯ ಇಲಾಖೆಯ ಎಚ್ಚರಿಕೆ ನಡುವೆಯೂ ಮಳೆನೀರು ನಿಲ್ಲದಂತೆ ಕ್ರಮವಹಿಸುವ ಕೆಲಸ ಸರಿಯಾಗಿ ನಡೆಯದಿರುವುದು ಆತಂಕ ಮತ್ತಷ್ಟು ಹೆಚ್ಚಿಸಿದೆ.

ಮಳೆನೀರು ಸರಾಗವಾಗಿ ಹರಿಯದೆ ನಿಂತ ಜಾಗಗಳಲ್ಲಿ ಉತ್ಪತ್ತಿಯಾಗುವ ಸೊಳ್ಳೆಗಳಿಂದ ಡೆಂಘಿ, ಮಲೇರಿಯಾ, ಚಿಕುನ್ ಗುನ್ಯಾದಂತಹ ಕಾಯಿಲೆಗಳ ಹರಡುವ ಜೊತೆಗೆ ರೋಗಾಣು ಉಳ್ಳ ನೀರಿನಿಂದ ಕಾಲರಾದಂತಹ ಕಾಯಿಲೆ ಉಲ್ಬಣಿಸಬಹುದು.

ಜಿಲ್ಲೆಯ ಬಹುತೇಕ ಮೀನುಗಾರಿಕೆ ಬಂದರುಗಳಲ್ಲಿ ಪ್ಲಾಸ್ಟಿಕ್ ಬುಟ್ಟಿ, ಸಣ್ಣ ದೋಣಿಗಳನ್ನು ಮಳೆನೀರು ನಿಲ್ಲುವಂತೆ ಇರಿಸಲಾಗುತ್ತಿದೆ. ಗ್ಯಾರೇಜ್, ಡಂಪಿಂಗ್ ಯಾರ್ಡ್‌ಗಳ ಬಳಿ ಗುಜರಿ ಸಾಮಗ್ರಿಗಳನ್ನು ನೀರು ನಿಲ್ಲಲು ಆಸ್ಪದವಾಗುವಂತೆ ಇರಿಸುತ್ತಿದ್ದು, ಇವೆಲ್ಲ ರೋಗವಾಹಕ ಸೊಳ್ಳೆಗಳ ಉತ್ಪತ್ತಿಗೆ ಅವಕಾಶ ಮಾಡಿಕೊಡುತ್ತಿವೆ ಎಂಬುದು ಜನರ ದೂರು. ಕಾರವಾರ ನಗರದ ಗಾಂಧಿ ನಗರ, ಕೋಣೆನಾಲಾ ಅಕ್ಕಪಕ್ಕದ ಪ್ರದೇಶಗಳಲ್ಲಿ ಮಳೆಗಾಲ ಆರಂಭದೊಡನೆ ಸೊಳ್ಳೆ ಕಾಟ ವಿಪರೀತವಾಗುತ್ತದೆ. ಇದರಿಂದ ರೋಗಗಳು ಹರಡುತ್ತಿದೆ. ನಗರಸಭೆ ಸೂಕ್ತ ಕ್ರಮಕ್ಕೆ ಮುಂದಾಗುತ್ತಿಲ್ಲ ಎಂಬುದು ಜನರ ದೂರು. ಶಿರಸಿ ನಗರದ ಗಣೇಶನಗರ, ರಾಜೀವನಗರ, ಲಿಡ್ಕರ್ ಕಾಲೊನಿ ಭಾಗದ ಚರಂಡಿಗಳಲ್ಲಿ ಅಡಿಯಷ್ಟು ನೀರು ನಿಂತು ದುರ್ನಾತ ಬೀರುತ್ತಿದೆ. ಇದು ಸೊಳ್ಳೆಗಳಿಂದ ಹರಡುವ ರೋಗ ವಿಸ್ತರಣೆಗೂ ಕಾರಣವಾಗಿದೆ ಎನ್ನುತ್ತಾರೆ ಇಲ್ಲಿನ ಸ್ಥಳೀಯರು.

ಹಳ್ಳಕ್ಕೆ ಉರುಳಿದ ಕಾರು

• **ಉದಯವಾಹಿನಿ, ಹಾಸನ**

ಸ್ನೇಹಿತನ ನಿಶ್ಚಿತಾರ್ಥಕ್ಕಾಗಿ ಐದು ಮಂದಿ ಯುವಕರು ಇನೋವಾ ಕಾರಿನಲ್ಲಿ ತೆರಳುತ್ತಿದ್ದ ವೇಳೆ ಭೀಕರ ಅಪಘಾತ ಸಂಭವಿಸಿದೆ. ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ರಸ್ತೆ ಬದಿಯ ಹಳ್ಳಕ್ಕೆ ಉರುಳಿದ ಪರಿಣಾಮ ಸ್ಥಳದಲ್ಲೇ ಇಬ್ಬರು ಯುವಕರು ಸಾವನ್ನಪ್ಪಿರುವ ಘಟನೆ ಜಿಲ್ಲೆಯ ಅರಸಿಕೆರೆ ತಾಲ್ಲೂಕಿನ ಜಾವಗಲ್-ಹಳೇಬೀಡು ರಸ್ತೆಯಲ್ಲಿ ಸಂಭವಿಸಿದೆ.ಜಿಲಾನಿ (28) ಮತ್ತು ಮೊಸಿನ್ (25) ಮೃತಪಟ್ಟವರು ಎಂದು ಗುರುತಿಸಲಾಗಿದೆ. ಅಪಘಾತದಲ್ಲಿ ಕಾರಿನಲ್ಲಿದ್ದ ಇತರ ಮೂವರಿಗೆ ಗಂಭೀರ ಗಾಯಗಳಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಅರಸೀಕೆರೆ ಮತ್ತು ಸ್ಥಳೀಯರ ಸಹಾಯದಿಂದ ತಕ್ಷಣವೇ ಹಾಸನ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಸ್ನೇಹಿತನ ನಿಶ್ಚಿತಾರ್ಥಕ್ಕಾಗಿ ಐವರು ಯುವಕರು ಇನೋವಾ ಕಾರಿನಲ್ಲಿ ಅರಸೀಕೆರೆಯಿಂದ ಜಾವಗಲ್ ಮಾರ್ಗವಾಗಿ ಬೇಲೂರಿಗೆ ತೆರಳುತ್ತಿದ್ದರು. ಮೃತ ಜಿಲಾನಿ ಆಟೋಮೊಬೈಲ್ ಉದ್ಯಮ ನಡೆಸುತ್ತಿದ್ದು, ಮೊಸಿನ್ ವೆಲ್ಡಿಂಗ್ ವೃತ್ತಿ ಮಾಡುತ್ತಿದ್ದರು ಎಂದು ತಿಳಿದುಬಂದಿದೆ. ಕೆ.ಬಿ.ಹಾಳ್ ಬಳಿ ತಲುಪುತ್ತಿದ್ದಂತೆ ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಪಕ್ಕದಲ್ಲಿದ್ದ ಆಳವಾದ ಹಳ್ಳಕ್ಕೆ ಉರುಳಿ ಬಿದ್ದಿದೆ. ಅಪಘಾತದ ರಭಸಕ್ಕೆ ಕಾರು ಸಂಪೂರ್ಣ ಜಖಂಗೊಂಡಿದ್ದು, ಜಿಲಾನಿ ಹಾಗೂ ಮೊಸಿನ್ ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ.

ಘಟನಾ ಸ್ಥಳಕ್ಕೆ ಜಾವಗಲ್ ಪೊಲೀಸ್ ಠಾಣೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಮೃದೇಹಗಳನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದಾರೆ. ಈ ಕುರಿತು ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

ಸಿದ್ದಾಪುರದಲ್ಲಿ ಎಲ್ಲಾ ಸಮುದಾಯಗಳಿಗೆ ಸರ್ಕಾರದ ಅನುದಾನ ಹಂಚಿಕೆ

• **ಉದಯವಾಹಿನಿ, ಸಿದ್ದಾಪುರ**

ಸರ್ಕಾರದ ಅನುದಾನವನ್ನು ಎಲ್ಲಾ ಸಮುದಾಯಗಳಿಗೂ ಹಂಚಿದ್ದೇನೆ. ಸ್ಥಳದ ಲಭ್ಯತೆಯಿರುವ ಬಹುತೇಕ ಸಮುದಾಯಗಳಿಗೆ ಸಭಾಭವನಕ್ಕೆ ಅನುದಾನ ನೀಡಿದ್ದೇನೆ' ಎಂದು ಶಾಸಕ ಭೀಮಣ್ಣ ನಾಯ್ಕ ಹೇಳಿದರು.

ತಾಲ್ಲೂಕಿನ ಕ್ರೈಸ್ತ ಸಮುದಾಯದವರಿಗಾಗಿ ಪಟ್ಟಣದ ಹೋಲಿ ರೋಜರಿ ಚರ್ಚ್ ಪಕ್ಕದಲ್ಲಿ 50 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಸಭಾಭವನಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. 'ಸರ್ಕಾರದ ಯೋಜನೆಗಳನ್ನು ಸರ್ವಧರ್ಮಿಯರಿಗೂ ನೀಡಿದ ಶ್ರೇಯ ಕಾಂಗ್ರೆಸ್ ಪಕ್ಷಕ್ಕೆ ಸಲ್ಲುತ್ತದೆ. ಸಿದ್ದಾಪುರ ಪಟ್ಟಣ ಪಂಚಾಯಿತಿಗೆ 10 ಕೋಟಿಗೂ ಅಧಿಕ ಅನುದಾನ ನೀಡಿದ್ದೇನೆ. ಮುಂದಿನ ದಿನಗಳಲ್ಲೂ ಎಲ್ಲರ ಸಹಕಾರದಿಂದ ಕ್ಷೇತ್ರವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುತ್ತೇನೆ' ಎಂದರು.ಚರ್ಚಿನ ಫಾದರ್ ಲಾರೆನ್ಸ್ ಡಿಸೋಜಾ ಅಧ್ಯಕ್ಷತೆ ವಹಿಸಿದ್ದ ಮಾತನಾಡಿ, ಕ್ಷೇತ್ರದ ಶಾಸಕ ಭೀಮಣ್ಣ ನಾಯ್ಕ ಅವರಿಂದ ನಮ್ಮ ಬೇಡಿಕೆ ಈಡೇರಿದೆ' ಎಂದು ತಿಳಿಸಿದರು.

ಉದಯವಾಹಿನಿ ಚಿತ್ರ

ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಜಿ.ನಾಗರಾಜ, ಪ್ರಮುಖರಾದ ವಿ.ಎನ್.ನಾಯ್ಕ, ಆರ್.ಎಂ.ಹೆಗಡೆ ಬಾಳೇಸರ, ಮಾರುತಿ ಕಿಂದ್ರಿ, ಸಾವೇರ್ ಡಿಸಿಲ್ವಾ, ವಿಕ್ಟರ್ ಫರ್ನಾಂಡಿಸ್ ಇದ್ದರು.

ಮುಳ್ಳಯ್ಯನಗಿರಿ ತಪ್ಪಲಿನಲ್ಲಿ ಜೆಸಿಬಿ-ಹಿಟಾಚಿ ಘರ್ಜನೆ

• **ಉದಯವಾಹಿನಿ, ಚಿಕ್ಕಮಗಳೂರು**

ಕರ್ನಾಟಕದ ಅತ್ಯಂತ ಎತ್ತರದ ಶಿಖರ ಎಂದೇ ಪ್ರಸಿದ್ಧಿಯಾಗಿರುವ ಪ್ರಕೃತಿ ರಮಣೀಯ ಮುಳ್ಳಯ್ಯನಗಿರಿ ಹಾಗೂ ಬಾಬಾಬುಡನ್ ಗಿರಿ ಶ್ರೇಣಿಯ ತಪ್ಪಲಿನಲ್ಲಿ ಅಕ್ರಮ ಚಟುವಟಿಕೆಗಳು ರಾಜಾರೋಷವಾಗಿ ನಡೆಯುತ್ತಿವೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

ಪರಿಸರ ಸೂಕ್ಷ್ಮ ವಲಯವಾದ ಪಶ್ಚಿಮ ಘಟ್ಟಗಳ ಒಡಲನ್ನು ಜೆಸಿಬಿ ಮತ್ತು ಹಿಟಾಚಿ ಯಂತ್ರಗಳ ಮೂಲಕ ಬಗೆಯಲಾಗುತ್ತಿದ್ದು, ಪರಿಸರ ಪ್ರೇಮಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಶೋಲಾಕಾಡು, ಹುಲ್ಲುಗಾವಲು ನಾಶ ತಾಲ್ಲೂಕಿನ ಚಂದ್ರದ್ರೋಣ ಪರ್ವತಗಳ ಸಾಲಿನಲ್ಲಿ ಹೊಸ ರೆಸಾರ್ಟ್ ಹಾಗೂ ಹೋಮ್‌ಸ್ಟೇಗಳ ನಿರ್ಮಾಣಕ್ಕಾಗಿ ಅವೈಜ್ಞಾನಿಕವಾಗಿ ಹೊಸ ರಸ್ತೆಗಳನ್ನು ನಿರ್ಮಿಸಲಾಗುತ್ತಿದೆ ಎನ್ನಲಾಗಿದೆ. ಈ ಭಾಗದ ಅತ್ಯಂತ ಅಪರೂಪದ ಶೋಲಾಕಾಡು ಹಾಗೂ ಹುಲ್ಲುಗಾವಲು ಪ್ರದೇಶಗಳನ್ನು ಭಾರೀ ಯಂತ್ರೋಪಕರಣ ಬಳಸಿ ಧ್ವಂಸಗೊಳಿಸಲಾಗುತ್ತಿದೆ.

ಗುಡ್ಡಗಳನ್ನು ಬಗೆದು ಮಣ್ಣು ಮತ್ತು ಅದಿರನ್ನು ಅಕ್ರಮವಾಗಿ ಸಾಗಿಸಲಾಗುತ್ತಿದೆ ಎಂಬ ದೂರುಗಳು ಕೇಳಿಬಂದಿವೆ.ಮಳೆಗಾಲದಲ್ಲಿ ಭೂಕುಸಿತದ ಆತಂಕ ಮುಳ್ಳಯ್ಯನಗಿರಿ ಸಂರಕ್ಷಣಾ ಮೀಸಲು' ವ್ಯಾಪ್ತಿಯಲ್ಲೇ ಇಂತಹ ಅರಣೇತರ ಚಟುವಟಿಕೆಗಳು ನಡೆಯುತ್ತಿರುವುದು ಆತಂಕ ಮೂಡಿಸಿದೆ. ಈ ಭಾಗದ ಮಣ್ಣು ಅತ್ಯಂತ ಮೃದುವಾಗಿದ್ದು, ಪ್ರಸ್ತುತ ಮಳೆಗಾಲ ಆರಂಭವಾಗಿರುವುದರಿಂದ ಭಾರೀ ಯಂತ್ರಗಳ ಬಳಕೆಯಿಂದಾಗಿ ಮುಂಬರುವ ದಿನಗಳಲ್ಲಿ ಭೀಕರ ಭೂಕುಸಿತ ಸಂಭವಿಸುವ ಸಾಧ್ಯತೆ ದಟ್ಟವಾಗಿದೆ.

ಕಠಿಣ ಕ್ರಮಕ್ಕೆ ಪರಿಸರವಾದಿಗಳ ಆಗ್ರಹ ಅರಣ್ಯ ಸಂರಕ್ಷಣಾ ಕಾಯ್ದೆಯನ್ನು ಗಾಳಿಗೆ ತೂರಿ ನಡೆಸಲಾಗುತ್ತಿರುವ ಈ ಕಾಮಗಾರಿಯನ್ನು ಜಿಲ್ಲಾಡಳಿತ ತಕ್ಷಣವೇ ಮಧ್ಯಪ್ರವೇಶಿಸಿ ನಿಲ್ಲಿಸಬೇಕು ಎಂದು ಪರಿಸರ ಪ್ರೇಮಿಗಳು ಒತ್ತಾಯಿಸಿದ್ದಾರೆ.

ಹಿಟಾಚಿ ಮತ್ತು ಜೆಸಿಬಿ ಯಂತ್ರಗಳನ್ನು ತಕ್ಷಣವೇ ಜಪ್ತಿ ಮಾಡಿ, ತಪ್ಪಿತಸ್ಥರ ವಿರುದ್ಧ ಅರಣ್ಯ ಕಾಯ್ದೆಯಡಿ ಕಠಿಣ ಕಾನೂನು ಕ್ರಮ ದಾಖಲಿಸಬೇಕು ಎಂದು ಆಗ್ರಹಿಸಿದ್ದಾರೆ.

ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕು

• **ಉದಯವಾಹಿನಿ, ಗದಗ**



ರಾಜ್ಯದ ಹಿರಿಯ ರಾಜಕಾರಣಿ ಹಾಗೂ ಕಳಂಕರಹಿತ ಆಡಳಿತಗಾರರಾಗಿರುವ ಎಚ್.ಕೆ. ಪಾಟೀಲ ಅವರಿಗೆ ಸಚಿವ ಸ್ಥಾನಮಾನ ನೀಡಬೇಕು ಎಂದು ಕಾಂಗ್ರೆಸ್ ಪಕ್ಷದ ಪರಿಶಿಷ್ಟ ಜಾತಿ ಮುಖಂಡ ಶಂಭು ಕಾಳೆ ಆಗ್ರಹಿಸಿದರು. ಸೋಮವಾರ ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಎಚ್.ಕೆ. ಪಾಟೀಲ ಅವರು ಜನಪರ ಹಾಗೂ ಪಾರದರ್ಶಕ ಆಡಳಿತ ನೀಡಿದ್ದು, ಅವರ ಹಿರಿತನ ಮತ್ತು ಅನುಭವವನ್ನು ಪರಿಗಣಿಸಿ ಮೊದಲ ಹಂತದಲ್ಲಿಯೇ ಸಚಿವ ಸ್ಥಾನ ನೀಡಬೇಕಿತ್ತು. ಅಭಿಮಾನಿಗಳಲ್ಲಿ ನಿರಾಸೆ ಮೂಡಿಸಿದೆ ಎಂದು ಹೇಳಿದರು.

ಸಮುದಾಯ ಭವನ ನಿರ್ಮಾಣ ಕಾಮಗಾರಿ

• **ಉದಯವಾಹಿನಿ, ಕಾರಟಗಿ**

ಕನಕಗಿರಿ ವಿಧಾನಸಭಾ ಕ್ಷೇತ್ರದ ಕಾರಟಗಿ ತಾಲ್ಲೂಕಿನ ಎಸ್.ಬಿ.ರೆಡ್ಡಿ ಕ್ಯಾಂಪ್‌ನಲ್ಲಿ ಶ್ರೀ ಆದಿಬಸವೇಶ್ವರ ದೇವಸ್ಥಾನ ಟ್ರಸ್ಟ್ ಸಮಿತಿಯ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಜೂನ್ 7, 2026 ರಂದು ಚಾಲನೆ ನೀಡಲಾಯಿತು.

ಉದಯವಾಹಿನಿ ಚಿತ್ರ

ಜನಪ್ರಿಯ ಶಾಸಕ ಶ್ರೀ ಶಿವರಾಜ್ ಎಸ್. ತಂಗಡಗಿಯವರು ಕಾಮಗಾರಿಗೆ ಚಾಲನೆ ನೀಡಿ . ಸಮುದಾಯ ಭವನ ನಿರ್ಮಾಣಕ್ಕೆ ಅಂದಾಜು ಮೊತ್ತ 30.00 ಲಕ್ಷ ರೂ. ನಿಗದಿಪಡಿಸಲಾಗಿದ್ದು ಇನ್ನು ಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯಗಳು ಮಾಡಬೇಕಾಗಿದೆ ಎಂದರು ಈ ಕಾರ್ಯಕ್ರಮಕ್ಕೆ ಶಾಸಕರು ಹಾಗೂ ಸರ್ವರಿಗೂ ಸುಸ್ವಾಗತ ಕೋರಿದರು.ಸಂದರ್ಭದಲ್ಲಿ ಕಾಂಗ್ರೆಸ್ನ ಹಿರಿಯ ಮುಖಂಡರು ಯುವ ಮುಖಂಡರು ಕಾರ್ಯಕರ್ತರು ಭಾಗವಹಿಸಿದ್ದರು

ರಸಗೊಬ್ಬರ ಬೆಲೆ ಇಳಿಸದಿದ್ದರೆ ಹೋರಾಟ

• **ಉದಯವಾಹಿನಿ, ಹೊನ್ನಾಳಿ**

'ರೈತರು ಬಿತ್ತನೆ ಕಾರ್ಯಕ್ಕೆ ಮುಂದಾಗಿರುವ ಹೊತ್ತಿನಲ್ಲಿ ಕೇಂದ್ರ, ಸರ್ಕಾರ ರಸಗೊಬ್ಬರಗಳ ಬೆಲೆ ಏರಿಕೆ ಮಾಡಿದೆ. ಈ ಮೂಲಕ ಕೃಷಿಕರಿಗೆ ಭಾರಿ ಪೆಟ್ಟು ನೀಡಿದೆ' ಎಂದು ಹಸಿರುಸೇನೆ ರಾಜ್ಯ ಘಟಕದ ಅಧ್ಯಕ್ಷ ಕರಿಬಸಪ್ಪಗೌಡ ಹೇಳಿದರು. ಮುಂಗಾರು ಬಿತ್ತನೆ ಸಂದರ್ಭದಲ್ಲಿ ಉದ್ಭವವಾಗಿರುವ ಸಮಸ್ಯೆಗಳ ಸಂಬಂಧ ಚರ್ಚಿಸಲು ಪಟ್ಟಣದಲ್ಲಿ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಬೆಲೆ ಏರಿಕೆ ಜತೆಗೆ ಡೀಲರ್‌ಗಳು ಮನಸ್ಸಿಗೆ ಬಂದಂತೆ ರಸಗೊಬ್ಬರ ಮಾರಾಟ ಮಾಡುತ್ತಿದ್ದಾರೆ. ಒಂದು ಬ್ಯಾಗ್ ಎಂಒಪಿ ರಸಗೊಬ್ಬರದ ದರ 1,600 ರಿಂದ 1,700 ಇದೆ. ಅದನ್ನು ಡೀಲರ್‌ಗಳು 2,400ಕ್ಕೆ ಮಾರಾಟ ಮಾಡುತ್ತಿದ್ದಾರೆ. ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕೃಷಿ ಅಧಿಕಾರಿಗಳು ಯಾವ ಡೀಲರ್‌ಗಳ ಬಳಿಯೂ ಹೋಗಿ ಏಕೆ ಪರಿಶೀಲನೆ ಮಾಡುತ್ತಿಲ್ಲ' ಎಂದು ಪ್ರಶ್ನಿಸಿದರು.

ಬಡವರ ತುತ್ತಿನ ಕೂಲಿ ಹಣವನ್ನು ಬಿಡದೆ ಲೂಟಿ ಹೊಡೆಯುತ್ತಿರುವ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕೇಳೂವರಿಲ್ಲ

ಕಾಮಗಾರಿ ಕಾಗದದಲ್ಲಿ:ಕಾಮಗಾರಿ ಹಣ ಪಿಡಿಓ ಜೇಬಿನಲ್ಲಿ

• **ಪರಮೇಶ.ಡಿ.ವಿಳಸಪೂರೆ**

• **ಉದಯವಾಹಿನಿ, ಬೀದರ್**

ಬಡವರ ತುತ್ತಿನ ಕೂಲಿ ಹಣವನ್ನು ಬಿಡದೆ ಲೂಟಿ ಹೊಡೆಯುತ್ತಿರುವ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಹೇಳೋರಿಲ್ಲ ಕೇಳೋರಿಲ್ಲ ಔರಾದ್ ತಾಲ್ಲೂಕಿನ ಜೋಜನ ಗ್ರಾಮ ಪಂಚಾಯಿತಿಯಲ್ಲಿ 15ನೇ ಹಣಕಾಸು ಯೋಜನೆಯಲ್ಲಿ ಯಾವುದೇ ರೀತಿಯಲ್ಲಿ ಕಾಮಗಾರಿ ಮಾಡದೆ ಹಣ ಕೊಳ್ಳೆ ಹೊಡೆದಿರುವ ಪಿಡಿಓ ನರಸಿಂಗ್ ಮಾನೆ ಆಡಿದ್ದೆ ಆಟ.ಪಿಡಿಓ ನರಸಿಂಗ್ ಮಾನೆ ಅವರ ಅವಧಿಯಲ್ಲಿ 15ನೇ ಹಣಕಾಸಿನ ಅನುದಾನದಲ್ಲಿ ಭಾರಿ ಅವ್ಯವಹಾರ ನಡೆಸಿದ್ದಾರೆ. ಕಾಮಗಾರಿ ಕೈಗೊಳ್ಳದೆ, ಸಲಕರಣೆಗಳನ್ನು ಖರೀದಿಸದೆ ಸುಳ್ಳು ದಾಖಲಾತಿ ಸೃಷ್ಟಿಸಿ ಕೊಟ್ಯಾಂತರ ರೂಪಾಯಿ ಹಣ ದುರುಪಯೋಗ ಮಾಡಿದ್ದಾರೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕ ಅಧ್ಯಕ್ಷ ಅನಿಲ್ ದೇವಕತ್ತೆ ಆರೋಪಿಸಿದ್ದಾರೆ.

ಚರಂಡಿ ಸ್ವಚ್ಛತೆ ಹೆಸರಿನಲ್ಲಿ ಹಣ ಗುಳುಂ: ಜೋಜನ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೋರ್ಗಿ (ಜೆ) ಗ್ರಾಮದಲ್ಲಿ ಚರಂಡಿಗಳೇ ಇಲ್ಲ ಆದರೆ 29-5-24 ರಂದು 15ನೇ ಹಣಕಾಸು ಯೋಜನೆಯಡಿಯ 68,886 ಹಣವನ್ನು ಪಿಡಿಓ ನರಸಿಂಗ್ ಮಾನೆ ಅವರಿಗೆ ಸಂಬಂಧಿಸಿದ ಗುತ್ತಿಗೆದಾರರ ಖಾತೆಗೆ ಹಣ ವರ್ಗಾವಣೆ ಮಾಡಿದ್ದಾರೆ, ಚರಂಡಿ ನಿರ್ಮಾಣ ಮಾಡಲು ಸಾಧ್ಯವಿಲ್ಲ ಆದರೆ ಚರಂಡಿ ಸ್ವಚ್ಛತೆ ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ಹಣ ಪಿಡಿಓ ಜೇಬಿನಲ್ಲಿ ತುಂಬಿಸಿಕೊಳ್ಳುತಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಾವತಿ ವೋಚರ್ ವಿವರ

ಚಟುವಟಿಕೆ ಕೋಡ್	66465184 ಜೋಜನಾ ಗ್ರಾಮ ಪಂಚಾಯತನ ಗ್ರಂಥಾಲಯ ಡಿಜಿಟಲೀಕರಣ ಗೊಳಿಸುವುದು (2022-2023)
ಮೂಲ ಅನುದಾನ (ಅನ್ವಯಿಸಲಾಗಿಲ್ಲ)	
ವೋಚರ್ ಸಂಖ್ಯೆ	ಎಕ್ಸ್‌ವಿಎಫ್‌ಸಿ/2024-25/ಪಿ/43
ಮೊತ್ತ (ರೂ.ಗಳಲ್ಲಿ)	239800

ಹೈಮಾಸ್ಟ್ ಲೈಟ್ ದುರಸ್ತಿಯಲ್ಲಿ ಅವ್ಯವಹಾರ: ಗ್ರಾಮೀಣ ಭಾಗದ ಜನರ ಅನುಕೂಲಕ್ಕಾಗಿ ಪಂಚಾಯತ್ ರಾಜ್ ಇಲಾಖೆಯಿಂದ ಲಕ್ಷಾಂತರ ರೂ. ವೆಚ್ಚ ಮಾಡಿ ಹೈಮಾಸ್ಟ್ ಲೈಟ್‌ಗಳನ್ನು ಅಳವಡಿಸಲಾಗಿದೆ. ಆದರೆ ಜೋಜನ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಐದು ಗ್ರಾಮಗಳಲ್ಲಿನ ಹೈಮಾಸ್ಟ್ ಲೈಟ್ ದುರಸ್ತಿ ನೆಪದಲ್ಲಿ ಯಾವುದೇ ದುರಸ್ತಿ ಮಾಡದೆ ಒಂದು ಹೈಮಾಸ್ಟ್ ಲೈಟ್ ದುರಸ್ತಿಗಾಗಿ 73,200 ಹಣವನ್ನು ಲೂಟಿ ಮಾಡುವುದರಲ್ಲಿ ಪಿಡಿಓ ನರಸಿಂಗ್ ಮಾನೆ ಯಶಸ್ಸು ಸಾಧಿಸಿರುವುದು ಕಂಡುಬಂದಿದೆ.2024 ರಿಂದ 2026 ರ ಅವಧಿಯಲ್ಲಿ ಜೋಜನ ಗ್ರಾಮ ಪಂಚಾಯಿತಿಯ 15ನೇ ಹಣಕಾಸು ಯೋಜನೆಯಡಿ ಕೊಟ್ಯಾಂತರ ರೂಪಾಯಿ ಅವ್ಯವಹಾರ ನಡೆದಿದ್ದು, ಯಾವುದೇ ಕಾಮಗಾರಿ ಮಾಡದೆ ಹಣ ಮಾಯ ಆಗಿದರ ಬಗ್ಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಇದರ ಬಗ್ಗೆ ತನಿಖೆ ನಡೆಸಿ ಪಿಡಿಓ ನರಸಿಂಗ್ ಮಾನೆ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಡಿಜಿಟಲ್ ಲೈಬ್ರರಿ ಹೆಸರಿನಲ್ಲಿ 2.40ಲಕ್ಷ ಹಣ ಮಾಯ

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಮತ್ತು ಯುವಕರಿಗೆ ಡಿಜಿಟಲ್ ಶಿಕ್ಷಣ, ಇ-ಪುಸ್ತಕಗಳು ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬೇಕಾದ ಅಧ್ಯಯನ ಸಾಮಗ್ರಿಗಳನ್ನು ಒದಗಿಸುವ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಲೈಬ್ರರಿ ಹಳೆಯದಾಗಿದ್ದು ಒಂದು ದಿವಸ ಕೂಡಾ ಅದರ ಬಾಗಿಲು ತೆಗೆಯುವುದಿಲ್ಲ ಆದರೆ 15ನೇ ಹಣಕಾಸು ಯೋಜನೆಯಡಿ ಡಿಜಿಟಲ್ ಲೈಬ್ರರಿ ಮಾಡಲಾಗಿದೆ ಅಂತಾ 2.40 ಲಕ್ಷ ಹಣ ಲೂಟಿ ಮಾಡಿರುವುದು ಈ-ಸ್ವರಾಜ್ ವೋಚರ್ ಪಾವತಿ ಮೂಲಕ ಬೆಳಕಿಗೆ ಬಂದಿದೆ.

> ತಾಲ್ಲೂಕಿನ ಜೋಜನ ಗ್ರಾಮ ಪಂಚಾಯಿತಿಯಲ್ಲಿ 2025-26ನೇ ಸಾಲಿನ 15ನೇ ಹಣಕಾಸು ಯೋಜನೆ ಅಡಿಯಲ್ಲಿ ಅವ್ಯವಹಾರ ಮಾಡಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮೇಲೆ ಕ್ರಮಕೈಗೊಳ್ಳಬೇಕು,
> ಅವ್ಯವಹಾರ ಪರಿಶೀಲನೆಗೆ ಜಿಲ್ಲೆಯ ಅಧಿಕಾರಿಗಳಿಗೆ ನಿಯೋಜಿಸಬೇಕು. ಇಲ್ಲದಿದ್ದರೆ ತಾಲ್ಲೂಕ ಪಂಚಾಯಿತಿ ಕಚೇರಿಗೆ ಮುತ್ತಿಗೆ ಹಾಕಿ ಉಗ್ರ ಹೋರಾಟ ಮಾಡಲಾಗುವುದು.
> -ಅನಿಲ್ ದೇವಕತ್ತೆ
> ಅಧ್ಯಕ್ಷರು ಕರ್ನಾಟಕ ರಕ್ಷಣಾ ವೇದಿಕೆ ಔರಾದ್